

ಲಂಕೇಶ್

ಡಿಸೆಂಬರ್ 5, 2007 ರೂ.10/-




ಸೈಕಲ್ ಕಳ್ಳ ಯಡ್ಡಿ

ಯಡ್ಡಿ ಚೆಡ್ಡಿ ಕದ್ದವರ್ಯಾರು?!



ಹೆಬ್ಬೆಟ್ ಮಂಜನಿಗೆ ಕೊರಂಗು ಸ್ಕೆಚ್!




ಉದಾಸಿಯ ಧನದಾಹಕ್ಕೆ ಸಂಗೂರು ಕಾರ್ಮಿಕನ ಬಲಿ

'ಅಸ್ಪೃಶ್ಯ ವಸಂತ' ಪ್ರಾರಂಭ



ಚೆಡ್ಡಿಯಾಗ್ತಾನಾ ಚೆಲುವ?



ಭಾರತದ ಉದ್ಯಮಪತಿಗಳು ದಲಿತರ ಸ್ನೇಹಿತರೇ?

ಈ ದೇಶದಲ್ಲಿ ಜಾತಿ ವ್ಯವಸ್ಥೆ ಹುಟ್ಟಿಕೊಳ್ಳಲು ಮೂಲಕಾರಣ ಇಲ್ಲಿನ ಭೂಮಾಲಿಕ ಊಳಿಗಮಾನ್ಯ ವ್ಯವಸ್ಥೆ. ಭೂ ಮಾಲಿಕರು ಮತ್ತು ರಾಜರುಗಳು ಸಾಮಾನ್ಯ ಜನತೆ ತಮ್ಮ ಶೋಷಣೆಯನ್ನು ಚಾಚೂ ತಪ್ಪದೆ ಒಪ್ಪಿಕೊಳ್ಳಲು ಮನುಸ್ಮೃತಿ ಆಧಾರಿತ ಜಾತಿ ವ್ಯವಸ್ಥೆಯನ್ನು ಹುಟ್ಟು ಹಾಕಿದರು. ಕನಿಷ್ಠ ಎರಡು ಸಾವಿರ ವರ್ಷಗಳ ಕಾಲ ನಿರಾತಂಕವಾಗಿ ಈ ದೇಶದಲ್ಲಿ ಜಾತಿ ಆಧಾರಿತ ಸಮಾಜ ವ್ಯವಸ್ಥೆ ಮುಂದುವರೆದುಕೊಂಡು ಬಂದಿದೆ. ಸಮಾಜ ಹೀಗೆ ಜಾತಿ ಗ್ರಸ್ತವಾಗಿರುವುದರಿಂದಲೇ ಮೇಲ್ಜಾತಿ ಮತ್ತು ಮೇಲ್ವರ್ಗಗಳು ಸಾಮಾನ್ಯ ಜನರನ್ನು ಶೋಷಿಸಿಕೊಂಡು ಬರಲು ಸಾಧ್ಯವಾಗಿದೆ. ಅಸ್ಪೃಶ್ಯತೆಯಂತಹ ಅಮಾನವೀಯ ಆಚರಣೆಗಳು ಸಂಸ್ಕೃತಿಯ ಹೆಗ್ಗುರುತೆಂಬಂತೆ ನಡೆದುಕೊಂಡು ಬಂದಿರುವುದು ಜಗತ್ತಿನಲ್ಲಿ ಭಾರತದಲ್ಲಿ ಮಾತ್ರವೇ.

ಅದರ ವಿರುದ್ಧ ಇತಿಹಾಸದುದ್ದಕ್ಕೂ ಹಲವಾರು ಬಂಡಾಯಗಳು ಸಂಭವಿಸಿರುವುದು ನಿಜವೇ ಆದರೂ ಇಡಿ ಜಾತಿಗ್ರಸ್ತ ವ್ಯವಸ್ಥೆಯನ್ನು ಬದಲಾಯಿಸಲು ವಿಫಲವಾಗಿದ್ದವು. ಇತ್ತೀಚಿನ ಅಂಕಿಅಂಶಗಳ ಪ್ರಕಾರ ಪ್ರತಿ ಹದಿಮೂರು ನಿಮಿಷಕ್ಕೊಮ್ಮೆ ಒಬ್ಬ ದಲಿತಳ ಮಾನಹರಣವಾಗುತ್ತಿದೆ, ನಾಲ್ವರು ದಲಿತರ ಮೇಲೆ ದೌರ್ಜನ್ಯ ಎಸಗಲಾಗುತ್ತಿದೆ. ಇದು ಇತಿಹಾಸದಲ್ಲೇ ಮೊದಲ ಬಾರಿಗೆ ಅಸ್ಪೃಶ್ಯತೆಯನ್ನು ಕಾನೂನಿನ ಮೂಲಕ ನಿಷೇಧಿಸಿದ ನಂತರ!

ಹಾಗಿದ್ದರೂ ಜಾತಿವಿನಾಶದ ಬಗ್ಗೆ ಚಿಂತಿಸುತ್ತಿರುವ ಮತ್ತು ಹೋರಾಡುತ್ತಿರುವ ಹಲವಾರು ಸಂಘಟನೆಗಳು ಮತ್ತು ಚಿಂತಕರು ಈ ದೇಶದಲ್ಲಿ ಬಂಡವಾಳಶಾಹಿ ಹೆಚ್ಚು ಬೆಳೆದಷ್ಟು ಊಳಿಗಮಾನ್ಯತೆ ವ್ಯವಸ್ಥೆ ಬಿರುಕು ಬಿಡುತ್ತದೆ ಮತ್ತು ಜಾತಿ ವ್ಯವಸ್ಥೆ ಸಡಿಲಗೊಳ್ಳುತ್ತದೆ ಎಂದು ಭಾವಿಸುತ್ತಾರೆ. ಇನ್ನೂ ಕೆಲವು ಚಿಂತಕರು ಬಂಡವಾಳ ಯಾವ ದೇಶದಿಂದ ಬಂದರೂ ಪರವಾಗಿಲ್ಲ; ಅದು ಊಳಿಗಮಾನ್ಯ ವ್ಯವಸ್ಥೆಗೆ ವಿರುದ್ಧವಿರುತ್ತದೆ; ಹೀಗಾಗಿ ಜಾತಿ ವ್ಯವಸ್ಥೆಗೂ ವಿರುದ್ಧವಿರುತ್ತದೆ; ಆದ್ದರಿಂದ ದಲಿತರಿಗೆ ಬಂಡವಾಳಶಾಹಿಯೂ ಸ್ನೇಹಿತನೇ ಎಂದೂ ಭಾವಿಸಿದ್ದರು.

ಈಗ ಭಾರತದಲ್ಲಿ ಜಾಗತೀಕರಣ ಪ್ರಕ್ರಿಯೆ ಪ್ರಾರಂಭಗೊಂಡು 16 ವರ್ಷಗಳಾಗಿವೆ. ಮೊದಲಿಗಿಂತ ಹತ್ತಾರು ಪಟ್ಟು ವಿದೇಶಿ ಬಂಡವಾಳವೂ ಭಾರತಕ್ಕೆ ಹರಿದು ಬಂದಿವೆ. ಭಾರತದ ಕೆಲವು ಬಂಡವಾಳಶಾಹಿಗಳು ಪ್ರಪಂಚದಲ್ಲೇ ಮೊದಲಿಗರೆಂಬ ಹೆಸರು ಪಡೆದು ಲಕ್ಷಾಂತರ ಕೋಟಿ ಬಂಡವಾಳವನ್ನು ಸಂಗ್ರಹಿಸಿದ್ದಾರೆ. ಮೊದಲಿಗಿಂತಲೂ ದುಪ್ಪಟ್ಟು ಪ್ರಮಾಣದಲ್ಲಿ ಈ ಬಂಡವಾಳಶಾಹಿಗಳು ತಮ್ಮ ಉದ್ಯಮಗಳನ್ನು ವಿಸ್ತರಿಸಿದ್ದಾರೆ. ಅದು ಸಾರ್ವಜನಿಕ ಕ್ಷೇತ್ರಗಳಲ್ಲಿನ ಲಕ್ಷಾಂತರ ಉದ್ಯೋಗಗಳನ್ನು ತಿಂದು ಹಾಕಿರುವುದೂ ಮತ್ತು ತುಲನೆಯಲ್ಲಿ ಒಟ್ಟಿನಲ್ಲಿ ಉದ್ಯೋಗದ ಸಂಖ್ಯೆ ಹೆಚ್ಚಿಲ್ಲದಿರುವುದು ಬೇರೆಯೇ ಮಾತು.

ಆದರೆ ಈಗ ಪ್ರಶ್ನೆ ಏನೆಂದರೆ ಭಾರತದ ಬಂಡವಾಳಶಾಹಿ ಪ್ರಬಲವಾದರೂ ತನ್ನ ವಿಸ್ತರಣೆಗೆ ಅಡ್ಡಿ ಮಾಡುವ ಊಳಿಗಮಾನ್ಯ ವ್ಯವಸ್ಥೆಯ ಪಳೆಯುಳಿಕೆಗಳ ಮೇಲೆ ಮತ್ತು ಅದರ ಅಭಿವ್ಯಕ್ತಿಯಾದ ಜಾತಿ ವ್ಯವಸ್ಥೆಯ ಮೇಲೆ ಅಷ್ಟೇ ಗಟ್ಟಿಯಾದ ಪ್ರಹಾರಗಳನ್ನು ಮಾಡಿತೇ ಎಂಬುದು! ಮುಖ್ಯವಾಗಿ ಭಾರತದ ಬಂಡವಾಳಶಾಹಿಗಳು ಈ ಆಧುನಿಕ ವ್ಯವಸ್ಥೆಯ ನೇತಾರರಾದ ಮೇಲೆ ಅವರಾದರೂ ಜಾತಿಯನ್ನು ಬಿಟ್ಟರೇ ಎಂಬುದು?

ಭಾರತದಲ್ಲಿ ಬಂಡವಾಳಶಾಹಿಯು ದಲಿತರ ಸ್ನೇಹಿತ ಎಂಬ ವಾದ ಪ್ರಬಲವಾಗಿರುವ ಹಿನ್ನೆಲೆಯಲ್ಲಿ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅತಿ ಮುಖ್ಯವಾಗುತ್ತದೆ.

ಇದರ ಬಗ್ಗೆ ಬೆಳಕು ಚೆಲ್ಲುವ ಅಧ್ಯಯನವೊಂದನ್ನು ಇತ್ತೀಚೆಗೆ **Indian Institute Of Dalit Studies(IIDS)** ಸಂಸ್ಥೆಯು ಮಾಡಿದೆ. ಯುಜಿಸಿ ಸಂಸ್ಥೆಯ ಅಧ್ಯಕ್ಷರಾದ ಸುಖದೇವ ಥೋರಟ್ ಅವರು ದೇಶಾದ್ಯಂತ ಇಂಥ ಹನ್ನೆರಡು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಇದರಡಿಯಲ್ಲಿ ಭಾರತದ ಪ್ರಮುಖ ವಿಶ್ವ ವಿದ್ಯಾಲಯವಾದ ದೆಹಲಿಯ ಜೆಎನ್‌ಯು ಮತ್ತು ಅಮೆರಿಕದ ಪ್ರಿನ್ಸ್‌ಟನ್ ವಿಶ್ವವಿದ್ಯಾಲಯ ಸೇರಿಕೊಂಡು ಒಂದು ಅಧ್ಯಯನವನ್ನು ಮಾಡಿವೆ. ಭಾರತದಲ್ಲಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನೀಡಲು ಭಾರತದ ಎಲ್ಲಾ ದೊಡ್ಡ ಬಂಡವಾಳಶಾಹಿಗಳು ಖಡಾಖಂಡಿತವಾಗಿ ನಿರಾಕರಿಸಿದ್ದರಷ್ಟೆ. ಇದರ ಬದಲು ತಾವು ತಮ್ಮ ಉದ್ಯಮಗಳಲ್ಲಿ ದಲಿತರಿಗೆ ಮತ್ತು ಇತರ ವಂಚಿತ ಜಾತಿಗಳಿಗೆ ವಿಶೇಷ ತರಬೇತಿ ಕೊಟ್ಟು ಪ್ರತಿಭೆಯುಳ್ಳವರಿಗೆ ಅವಕಾಶ ಕೊಡುವುದಾಗಿ ಹೇಳಿದ್ದವು. ಆದರೆ ತಮ್ಮ ಮೇಲೆ ಇಂತಿಷ್ಟು ಪ್ರಮಾಣದಲ್ಲಿ ದಲಿತರು ಇದ್ದೇ ಇರಬೇಕೆಂದು ಕಡ್ಡಾಯ ಹೇರಬಾರದೆಂದು ಫರ್ಮಾನನ್ನೇ ಹೊರಡಿಸಿದ್ದವು. ಆದರೆ ಭಾರತದ ಬಂಡವಾಳಶಾಹಿಗಳು ಗುರುಸ್ವರೂಪವೆಂದು ಭಾವಿಸುವ ಅಮೆರಿಕದಲ್ಲಿ ಹೀಗಿಲ್ಲ, ಅಲ್ಲಿ ಪ್ರತಿ ಉದ್ಯಮದಲ್ಲೂ ವಿವಿಧ ಹಿನ್ನೆಲೆಯುಳ್ಳ ಜನರನ್ನು ಸ್ವಪ್ರೇರಣೆಯಿಂದ ತೆಗೆದುಕೊಳ್ಳುತ್ತಾರೆ. ಅದರಿಂದ ಅವರ ಉದ್ಯಮದ ಲಾಭದಾಯಕತೆ ಹೆಚ್ಚುತ್ತದೆ ಎನ್ನುವುದೇ ಅದಕ್ಕೆ ಮೂಲ ಕಾರಣ. ಅದೇನೇ ಇದ್ದರೂ ಸಮಾಜದಲ್ಲಿ ತಾರತಮ್ಯಕ್ಕೆ ಗುರಿಯಾದ ವಿವಿಧ ಸಮುದಾಯಗಳಿಗೆ ಸಮಾನ ಪ್ರಾತಿನಿಧ್ಯ ಇದೆಯೋ ಇಲ್ಲವೋ ಎಂಬುದನ್ನು ಗಮನಿಸಿಕೊಳ್ಳಲು ಅಲ್ಲಿ **Equal Opportunity Commission (EOC)** ಎಂಬುದನ್ನು ಸ್ಥಾಪಿಸಲಾಗಿದೆ.

IIDS ಸಂಸ್ಥೆಯು ತನ್ನ ಅಧ್ಯಯನಕ್ಕೆ ಕೈಗೆತ್ತಿಕೊಂಡಿದ್ದು ಈ ವಿಷಯವನ್ನೇ. "ಜಾತಿ ಆಧಾರಿತ ತಾರತಮ್ಯವೆಂಬುದು ಭಾರತದ ಲೇಬರ್ ಮಾರುಕಟ್ಟೆಯಲ್ಲಿ ಅದರಲ್ಲೂ ಖಾಸಗಿ ಕ್ಷೇತ್ರದಲ್ಲಿ ಒಂದು ವಿಷಯವೇ ಆಗುವುದಿಲ್ಲ" ಎಂಬ ಖಾಸಗಿ ಕ್ಷೇತ್ರದ ದೊಡ್ಡ ಉದ್ಯಮಿಗಳ ಹೇಳಿಕೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಒಂದು ಅಧ್ಯಯನ ನಡೆಸಿತು. ಅದರ ಮೂಲ ಉದ್ದೇಶ ಸಮಾನ ಶೈಕ್ಷಣಿಕ ಮತ್ತು ಇತರ ಎಲ್ಲಾ ಅರ್ಹತೆಗಳಿದ್ದಾಗ ಭಾರತದ ದೊಡ್ಡ ಉದ್ದಿಮೆಗಳು ಅಭ್ಯರ್ಥಿಗಳ ಜಾತಿ ಹಿನ್ನೆಲೆಯ ಬಗ್ಗೆ ಯಾವುದೇ ಪೂರ್ವಗ್ರಹವನ್ನು ಇಟ್ಟುಕೊಳ್ಳದೆ ಉದ್ಯೋಗ ಅವಕಾಶಗಳನ್ನು ನೀಡುತ್ತಾರೆಯೇ ಎಂಬುದನ್ನು ಪರಿಶೀಲಿಸುವುದಾಗಿತ್ತು. ಇದರ ಬಗ್ಗೆ ಅಧ್ಯಯನ ಮಾಡಲು

ಚಾರ್ವಾಕ

ಶಿವಸುಂದರ್

ಅವರು ಶೇರು ವ್ಯವಹಾರ ಮಾಡುವ, ಔಷಧಿ ಉತ್ಪಾದನೆ ಮತ್ತು ವಿತರಣೆ ಮಾಡುವ, ಕಂಪ್ಯೂಟರ್ ಮತ್ತು ಅದರ ಆಧಾರಿತ ಸೇವೆಗಳನ್ನು ನೀಡುವ, ಅಕೌಂಟಿಂಗ್, ಮಾಧ್ಯಮ ಇನ್ನಿತರ ಹತ್ತು ಹಲವು ಉದ್ಯಮಗಳಲ್ಲಿ ತೆರವಾಗಿದ್ದ 548 ಉದ್ಯೋಗಗಳಿಗೆ ಮೂರು ಬಗೆಗಳಲ್ಲಿ ಒಟ್ಟು 4808 ಅರ್ಜಿಗಳನ್ನು ಗುಜರಾಯಿಸಿದರು.

ಆ ಎಲ್ಲಾ ಮೂರು ಅಭ್ಯರ್ಥಿಗಳ ಶೈಕ್ಷಣಿಕ ಮತ್ತು ಇನ್ನಿತರ ಅರ್ಹತಾ ಮಾನದಂಡಗಳೆಲ್ಲಾ ಒಂದೇ ರೀತಿ ಇರುವಂತೆ ನೋಡಿಕೊಳ್ಳಲಾಯಿತು ಮತ್ತು ಆ ಉದ್ದಿಮೆಗಳ ಅವಶ್ಯಕತೆಯನ್ನು ಅಗತ್ಯಕ್ಕಿಂತ ಹೆಚ್ಚು ಪೂರೈಸುವಂತೆ ನೋಡಿಕೊಳ್ಳಲಾಯಿತು. ಆದರೆ ಮೂರು ಹೆಸರುಗಳಲ್ಲಿ ಮಾತ್ರ ಅವರವರ ಜಾತಿ ಹಿನ್ನೆಲೆ ಎದ್ದು ಕಾಣುವಂತೆ ನೋಡಿಕೊಳ್ಳಲಾಯಿತು. ಉದಾಹರಣೆಗೆ ದಿನೇಶ್ ಭಟ್ ಎಂದು ಹೆಸರಿನಲ್ಲೇ ಬ್ರಾಹ್ಮಣನೆಂದು ಗೊತ್ತಾಗುವಂತೆ, ರಾಮಪ್ರಸಾದ್ ಚಮಾರ್ ಎಂದು ಹೆಸರಿನಲ್ಲೇ ದಲಿತನೆಂದು ಗೊತ್ತಾಗುವಂತೆ, ಪರಮೇಶ್ ಯಾದವ್ ಎಂದು ಒಬ್ಬ ಹಿಂದುಳಿದ ಜಾತಿಯವನೆಂದು ಗೊತ್ತಾಗುವಂತೆ ನೋಡಿಕೊಳ್ಳಲಾಯಿತು. ಅದೇ ರೀತಿ ಎಲ್ಲಾ ಶೈಕ್ಷಣಿಕ ಅರ್ಹತೆ ಇರುವ ಒಬ್ಬ ಮುಸ್ಲಿಂ ಅಭ್ಯರ್ಥಿಯ ಹೆಸರನ್ನೂ ಕಳಿಸಲಾಯಿತು. ಅಷ್ಟು ಮಾತ್ರವಲ್ಲದೆ ಕೆಲವು ಕಡೆಗೆ ಶೈಕ್ಷಣಿಕವಾಗಿ ಕಡಿಮೆ ಅರ್ಹತೆಯುಳ್ಳ ಮೇಲ್ಜಾತಿಯ ಹೆಸರಿನ ಜೊತೆಗೆ ಹೆಚ್ಚಿನ ಶೈಕ್ಷಣಿಕ ಅರ್ಹತೆ ಇರುವ ದಲಿತ ಹೆಸರುಳ್ಳ ಅರ್ಜಿಗಳನ್ನು ಕಳಿಸಲಾಯಿತು.

ಭಾರತದ ಉದ್ಯಮಪತಿಗಳು ನಿಜಕ್ಕೂ ಜಾತಿ ಪೂರ್ವಗ್ರಹ ಇಲ್ಲದವರಾಗಿದ್ದರೆ ಎಲ್ಲರಿಗೂ ಸಮಾನ ಅವಕಾಶವನ್ನು ಕೊಡಬೇಕಿತ್ತಲ್ಲವೇ? ಆದರೆ ಹಾಗಾಗಲಿಲ್ಲ, ಒಟ್ಟು 450 ಸಕಾರಾತ್ಮಕ ಉತ್ತರಗಳು ಬಂದವು. ಅಂದರೆ ಉದ್ಯೋಗ ನೀಡುವ ಪ್ರಕ್ರಿಯೆಯ ಎರಡನೇ ಹಂತಕ್ಕೆ 450 ಜನರಿಗೆ ಬುಲಾವ್ ಬಂದಿತು. ಆದರೆ ಸಮಾನ ಶೈಕ್ಷಣಿಕ ಅರ್ಹತೆಯಿದ್ದರೂ ಮೇಲ್ಜಾತಿ ಹೆಸರುಳ್ಳ ಅಭ್ಯರ್ಥಿಗಳಿಗೇ ನಮ್ಮ ಆಧುನಿಕ ಬಂಡವಾಳಶಾಹಿಗಳು ಪ್ರಾಧಾನ್ಯತೆ ಕೊಟ್ಟಿದ್ದರು. ಅವರಿಗೆ ಸಿಕ್ಕಿದ ಮೂರನೇ ಎರಡರಷ್ಟು ಅವಕಾಶ ಮಾತ್ರ ದಲಿತ ಅಭ್ಯರ್ಥಿಗಳಿಗೆ ಸಿಕ್ಕಿತ್ತು. ಮುಸ್ಲಿಮ್ ಅಭ್ಯರ್ಥಿಗಳದ್ದು ಇವೆಲ್ಲಕ್ಕಿಂತ ಕಡಿಮೆ. ಹಿಂದೂ ಮೇಲ್ಜಾತಿ ಅಭ್ಯರ್ಥಿಗೆ ಸಿಕ್ಕಿದ ಮೂರನೇ ಒಂದು ಭಾಗದಷ್ಟು ಅವಕಾಶ ಮಾತ್ರ ಮುಸ್ಲಿಂ ಅಭ್ಯರ್ಥಿಗೆ ಸಿಕ್ಕಿತ್ತು. ಇನ್ನೂ ಕಡಿಮೆ ಶೈಕ್ಷಣಿಕ ಅರ್ಹತೆ ಹೊಂದಿದ್ದ ಮೇಲ್ಜಾತಿ ಅಭ್ಯರ್ಥಿಗೆ ಸಂದರ್ಶನಕ್ಕೆ ಆಹ್ವಾನ ಸಿಕ್ಕಿತ್ತೇ ವಿನಃ ಅವರಗಿಂತ ಹೆಚ್ಚಿನ ಅರ್ಹತೆ ಹೊಂದಿದ್ದ ಆದರೆ ಕೆಳಜಾತಿಯ ಅಭ್ಯರ್ಥಿಗೆ ಸಂದರ್ಶನಕ್ಕೆ ಆಹ್ವಾನವೇ ಬಂದಿರಲಿಲ್ಲ.

ಇದು ಏನನ್ನು ಸೂಚಿಸುತ್ತದೆ?

ಭಾರತದ ಬಂಡವಾಳಶಾಹಿಗಳು ಉತ್ಪಾದನೆಯ ಕ್ರಮದಲ್ಲಿ ಆಧುನಿಕತೆಯನ್ನು ಬಳಸುತ್ತಿದರೂ ಆಲೋಚನಾ ಕ್ರಮದಲ್ಲಿ ಮತ್ತು ಶ್ರಮದ ಬಗೆಗಿನ ತಿಳುವಳಿಕೆಯಲ್ಲಿ ಹಳೆಯ ಜಾತಿ ಶ್ರೇಷ್ಠತೆಯ ಪ್ರತಿಗಾಮಿ ಚಿಂತನೆಯನ್ನೇ ಹೊಂದಿದ್ದಾರೆ. ಹೀಗಾಗಿ ಖಾಸಗಿ ಕ್ಷೇತ್ರಗಳನ್ನು ಅವರ ಪಾಡಿಗೆ ಅವರನ್ನು ಬಿಟ್ಟರೆ ಅವರೆಂದಿಗೂ ಸಮಾನ ಅವಕಾಶಗಳನ್ನು ಕೊಡಲಾರರು. ಮತ್ತು ಜಾತಿವಿನಾಶದ ಪ್ರಕ್ರಿಯೆಯಲ್ಲಿ ಎಂದಿಗೂ ದಲಿತರ ಸ್ನೇಹಿತರಾಗಲಾರರು.

ಹೀಗಾಗಿ ಈಗ ಪ್ರಶ್ನೆ ಇರುವುದು ಪ್ರಭುತ್ವದ ಪ್ರಜ್ಞಾಪೂರ್ವಕ ಮಧ್ಯಪ್ರವೇಶವಿಲ್ಲದೆ ಖಾಸಗಿ ಕ್ಷೇತ್ರದಲ್ಲಿ ಸಾಮಾಜಿಕ ನ್ಯಾಯ ಸಿಗುತ್ತದೆಯೇ? ಬಂಡವಾಳ ಹರಿದು ಬರಬೇಕೆಂದು ಅದರ ಮೇಲೆ ತೆರಿಗೆ ಹಾಕುವುದನ್ನೇ ಕೈಬಿಟ್ಟಿರುವ ಪ್ರಭುತ್ವ ಅದರ ಮೇಲೆ ಸಾಮಾಜಿಕ ಜವಾಬ್ದಾರಿ ವಿಧಿಸುವ ಕಾನೂನುಗಳನ್ನು ಮಾಡುವುದೇ? ಇಂದಿನ ಜಾಗತೀಕರಣದ ಕಾಲಘಟ್ಟದಲ್ಲಿ ಪ್ರಭುತ್ವ ಬಂಡವಾಳಿಗರ ಸೇವಕನೇ ವಿನಃ ದಲಿತರ ಮತ್ತು ಹಿಂದುಳಿದವರ ಸ್ನೇಹಿತನಲ್ಲ. ಬಂಡವಾಳ ಮತ್ತು ಅದರ ಕೈಗೊಂಬೆ ಪ್ರಭುತ್ವ ಎರಡೂ ದಲಿತ ವಿರೋಧಿಗಳೇ ಎಂದು ಈ ಅಧ್ಯಯನವೂ ಸಾಬೀತು ಮಾಡಿದೆ. ಮುಂದಿನ ದಾರಿ ಏನು ಎಂಬುದು ಆಯಾ ಸಾಮಾಜಿಕ ಶಕ್ತಿಗಳ ತಯಾರಿಗೆ ತಕ್ಕಂತಿರುತ್ತದೆ. ಮತ್ತು ಈ ಅಧ್ಯಯನದ ವ್ಯಾಖ್ಯಾನವೂ ಆ ತಯಾರಿಗೆ ತಕ್ಕಂತಿರುತ್ತದೆ. ಅಲ್ಲವೇ?

No Comments

"ದಲಿತರಿಗೆ ಕಾರ್ಪೊರೇಟ್ ಪ್ರಪಂಚಕ್ಕೆ ಪ್ರವೇಶ ಬೇಕು... ಮೀಸಲಾತಿ ಯಾರಿಗೆ ಬೇಕು? ನಮ್ಮ ಬುದ್ಧಿಮತ್ತೆಯನ್ನು ಪರಿಗಣಿಸಿ ಎಂದು ಆಗ್ರಹಿಸುತ್ತಿದ್ದೇವೆ."

-ಪಾಲ್ ದಿವಾಕರ್, ದಲಿತ ನಾಯಕ



"ಜನತಾದಳದಿಂದ ಬಂದ ಕಾಂಗ್ರೆಸ್ಸಿಗರು ಮತ್ತು ಹಳೇ ಕಾಂಗ್ರೆಸ್ಸಿಗರೆಂದು ಬೇರ್ಪಡಿಸುವುದನ್ನು ಮೊದಲು ಬಿಡಬೇಕು ಇಲ್ಲದಿದ್ದರೆ ಪಕ್ಷ ಸಂಘಟನೆ ಕಷ್ಟವಾಗುತ್ತದೆ."

-ಆರ್.ಎಲ್.ಜಾಲಪ್ಪ

"ಜಾಗತೀಕರಣದ ಫಲ ಪಡೆಯ ಬೇಕಾದರೆ ಅನುವಾದಕ್ಕೆ ಪ್ರೋತ್ಸಾಹ ನೀಡಬೇಕು."

-ಡಾ.ಬಸವರಾಜ ದೋಣೂರು

"ಕೊಲ್ಕತ್ತ ಗಲಭೆಯ ಹಿನ್ನೆಲೆಯಲ್ಲಿ ಆಕೆ ನಗರವನ್ನು ಬಿಟ್ಟು ಬರಬೇಕಾದ ಪರಿಸ್ಥಿತಿ ನಿಜಕ್ಕೂ ದುಃಖಕರ. ಈ ಬಗ್ಗೆ ಕ್ಷಮೆ ಯಾಚಿಸುತ್ತೇನೆ."

-ಗುರುದಾಸ್ ದಾಸ್‌ಗುಪ್ತ

ನಂಬಿದ್ರೆನಂಬಿ ಬಿಟ್ರೆಬಿಡಿ

"ಭಾರತದಲ್ಲಿ 12 ಲಕ್ಷ ಎನ್.ಜಿ.ಒ.ಗಳು ಎರಡು ಕೋಟಿ ಜನರಿಗೆ ಉದ್ಯೋಗ ನೀಡುತ್ತವೆ. ಇದು ಭಾರತದ ಸರ್ಕಾರ ಮತ್ತು ಎಲ್ಲಾ ರಾಜ್ಯ ಸರ್ಕಾರಗಳು ಸೃಷ್ಟಿಸಿರುವ ಉದ್ಯೋಗಕ್ಕೆ ಸಮ."

*-2003*ರಲ್ಲಿ ಪ್ರಕಟವಾದ ಒಂದು ಅಧ್ಯಯನದಿಂದ



"ದೇವೇಗೌಡ ಅಜಾತಶತ್ರು."

-ಡಿ.ಟಿ. ಜಯಕುಮಾರ್

"ಇಂಗ್ಲೀಷ್ ಕಲಿತರೆ ಜಾತಿ ತಾರತಮ್ಯ ಕಡಿಮೆ ಆಗುತ್ತದೆ."

-ಟೈಮ್ಸ್ ಆಫ್ ಇಂಡಿಯಾದ ಒಂದು ಸಂಪಾದಕೀಯದಲ್ಲಿ

"ಜೆಡಿಎಸ್-ಬಿಜೆಪಿ ಸರ್ಕಾರ ಬಜೆಟ್ಟಿನಲ್ಲಿ ಘೋಷಿಸಿರುವ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬಹುದು. ಅದಕ್ಕೆ ಹಣಕಾಸಿನ ತೊಂದರೆ ಏನಿಲ್ಲ."


-ಪಿ.ಬಿ.ಮಹಿಷಿ, ಮುಖ್ಯ ಕಾರ್ಯದರ್ಶಿ

ಹೆಗ್ಗಳಿಕೆ!

"ಅಂದರೆ ಜೀತದಾಳುಗಳ ಸಂಘ."

-ರವೀಂದ್ರ ರೇಷ್ಮೆ, ಹಿರಿಯ ಪತ್ರಕರ್ತರು

ಅವಮಾನ



"ಯಡಿಯೂರಪ್ಪನವರ ಪ್ರಮಾಣ ವಚನ ಸಮಾರಂಭದಲ್ಲಿ ಮೋದಿಯವರ ಉಪಸ್ಥಿತಿ ನನಗೆ ಹೆಮ್ಮೆ ಮೂಡಿಸಿತು."

-ಚಿದಾನಂದಮೂರ್ತಿ

ಎರಡು ಮಿಥ್ಯೆಗಳ ಬಯಲು!

"ಗುಜರಾತ್‌ನ ಹಿಂಸಾಕಾಂಡದ ಬಗ್ಗೆ ತೆಹೆಲ್ಕಾ ಪತ್ರಿ... ಎರಡು ಮಿಥ್ಯೆಗಳನ್ನು ಬಯಲುಗೊಳಿಸಿತು. ಒಂದು... ಹಿಂಸಾಚಾರದಲ್ಲಿ ಸುಶಿಕ್ಷಿತ ಮಧ್ಯಮ ವರ್ಗ... ತೊಡಗುವುದಿಲ್ಲ ಎಂಬ ಮಿಥ್ಯೆ. ಎರಡನೆಯದು ನಮ್ಮ... ನ್ಯಾಯಾಂಗ ಪಕ್ಷಪಾತಿಯಲ್ಲ ಎಂಬ ಮಿಥ್ಯೆ."

ತ್ರಿದೀಪ್ ಸುಹೃದ್, ತೆಹೆಲ್ಕ ಪತ್ರಿಕೆ ಅಂಕಣದ...

ಇದು ಭಯೋತ್ಪಾದನೆಯಲ್ಲವೆ?

"ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆ ಹೀಗೆ ಇದ್ದ... ನಾವು ತೈಲದ ಬೆಲೆಯನ್ನು ಹೆಚ್ಚಿಸಲೇಬೇಕಾಗುತ್ತದೆ. ಮು... ಕಚ್ಚಾ ತೈಲದ ಬೆಲೆ ಜಾಸ್ತಿ ಆಗುತ್ತಾಹೋದರೆ ನಾವದ... ಸಬ್ಸಿಡಿ ಕೊಡಲು ಸಾಧ್ಯವಾಗುವುದೇ ಇಲ್ಲ, ಅದನ್ನು... ನಾವು ಜನರ ಮೇಲೆ ವರ್ಗಾಯಿಸಲೇ ಬೇಕು. ವಾಸ್ತವವಾಗಿ... 2004ರಿಂದ ಅಡುಗೆ ಅನಿಲದ ಬೆಲೆ ಹೆಚ್ಚಿಸಿಲ್ಲ. 200... ಏಪ್ರಿಲ್‌ನಿಂದ ಸೀಮೆಎಣ್ಣೆ ಬೆಲೆ ಹೆಚ್ಚಿಸಿಲ್ಲ."

-ಮೊಂಟೆಕ್‌ಸಿಂಗ್ ಅಹ್ಲುವಾಲಿಯಾ, ಯೋಜನಾ ಆಯೋಗದ ಉಪಾಧ್ಯಕ್ಷ...

ವಾರದ ಸತ್ಯ



"ಭಾರತದ ಸೆನ್ಸೆಕ್ಸ್ 20,000 ಅಂಕಗಳನ್ನು ಮುಟ್ಟಿದ ದಿನವೇ ಆ ಸಂಖ್ಯೆಯ ಮೂರುಪಟ್ಟು ನಿರಾಶ್ರಿತ ರೈತರು ಮತ್ತು ಆದಿವಾಸಿಗಳು ಬದುಕುವ ಹಕ್ಕನ್ನು ಆಗ್ರಹಿಸುತ್ತಾ ದೆಹಲಿಯಲ್ಲಿ ಮೆರವಣಿಗೆ ತೆಗೆದಿದ್ದರು. ಇವೆರಡು ಭಾರತದ ವಾಸ್ತವಗಳೇ."

-ಶಶಿ ತರೂರ್, ವಿಶ್ವಸಂಸ್ಥೆಯ ಮಾಜಿ ಅಧೀನ ಕಾರ್ಯದರ್ಶಿ

ಸಂಪುಟ:3 ಸಂಚಿಕೆ : 35

ಎಡಕ್ಕೂ ಬಲಕ್ಕೂ ವ್ಯತ್ಯಾಸವಿರಬೇಕಲ್ಲವೇ?



ಕಂಡಹಾಗೆ

ಇವತ್ತು ರಾಜಕಾರಣದಲ್ಲಿರುವ ಎಡಪಂಥೀಯರಿಗೂ, ಬಲಪಂಥೀಯರಿಗೂ ವ್ಯತ್ಯಾಸವಿದೆಯೇ ಎಂಬ ಜಿಜ್ಞಾಸೆ ಕಾಡುತ್ತಿದೆ. ಯಾಕೆಂದರೆ ಸಂಘ ಪರಿವಾರದ ಐಕಾನ್ ನರೇಂದ್ರ ಮೋದಿಯ ಹೇಳಿಕೆಗಳು ಮತ್ತು ಎಡಪಕ್ಷಗಳ ಹಲವು ನಾಯಕರ ಘೋಷಣೆಗಳು ಅಷ್ಟೊಂದು ಸಾಮ್ಯತೆ ಹೊಂದಿವೆ.

ಗೋಧ್ರಾ ರೈಲು ದುರಂತದ ನಂತರ ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮಾರಣಹೋಮ ಸಂಭವಿಸಿದಾಗ ಅದನ್ನು ಸಮರ್ಥಿಸಿಕೊಂಡು ಮೋದಿ ಏನಂದಿದ್ದ ಎಂದು ನೆನಪಿದೆಯೇ? "ಹಿಂದೂಗಳು ಆಕ್ರೋಶಗೊಂಡಿದ್ದರು. ಅವರು ಪ್ರತೀಕಾರವನ್ನು ತೆಗೆದುಕೊಂಡಿದ್ದಾರಷ್ಟೇ" ಎಂದಿದ್ದ ಮೋದಿ.

ಈಗ ನಂದಿಗ್ರಾಮದಲ್ಲಿ ಸುಮಾರು ನಲವತ್ತು ಜನರನ್ನು ಸಿಪಿಎಂ ಪಕ್ಷದ ಗೂಂಡಾಗಳು ಕೊಂದು, ಅವರ ಮನೆಗಳನ್ನು ಧ್ವಂಸ ಮಾಡಿ, ಮಹಿಳೆಯರ ಮೇಲೆ ಸಾಮೂಹಿಕ ಅತ್ಯಾಚಾರವನ್ನು ನಡೆಸಿದ್ದಾರೆ. ಅದನ್ನೆಲ್ಲ ಸಮರ್ಥಿಸಿಕೊಂಡಿರುವ ಸಿಪಿಎಂ ನೇತೃತ್ವದ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಏನಂದಿದ್ದಾರೆ ಗೊತ್ತಾ? "ಅವರಿಗೆ ಅವರದೇ ನಾಣ್ಯದಲ್ಲಿ ಪ್ರತ್ಯುತ್ತರ ನೀಡಿದ್ದೇವೆ" ಎಂದಿದ್ದಾರೆ.

ಹಾಗೆಯೇ ಬಾಬ್ರಿ ಮಸೀದಿಯನ್ನು ಸಂಘ ಪರಿವಾರಿಗಳು ಕೆಡವುತ್ತಿದ್ದಾಗ, ಸಾಧ್ವಿ ರಿತಾಂಭರಿ ಎಂಬ ಹುಚ್ಚು ಹೆಣ್ಣು "ಎಕ್ ಔರ್ ಢಕ್ಕಾ ಮಾರ್‌ದೊ" ಎಂದು ಅರಚುತ್ತಾ ಅವರನ್ನೆಲ್ಲ ಪ್ರೇರೇಪಿಸಿದ್ದಳು. ಆಕೆಯಂತೆ ಮೊನ್ನೆ ಬೃಂದಾ ಕಾರಟ್ ಎಂಬ ಸಿಪಿಎಂ ನಾಯಕಿ ಕೂಡ ನಂದಿಗ್ರಾಮದಲ್ಲಿ ಸರ್ಕಾರದ ವಿರುದ್ಧ ಪ್ರತಿರೋಧವನ್ನು ಮುಂದುವರೆಸುತ್ತಿರುವವರಿಗೆ 'ದಂ ದಂ ದವಾಯಿ' ಚಿಕಿತ್ಸೆ ನೀಡಬೇಕೆಂದು ಆಗ್ರಹಿಸಿದ್ದಾರೆ. ಅಂದಹಾಗೆ 'ದಂ ದಂ ದವಾಯಿ' ಎಂಬುದು ಅರವತ್ತರ ದಶಕದಲ್ಲಿ ಚಾಲ್ತಿಗೆ ಬಂದು ಕಾರ್ಯಕ್ರಮದ ಹೆಸರು. ಅಂದು ಭ್ರಷ್ಟರ ವಿರುದ್ಧ ಎಡಪಂಥೀಯರು ಕರೆ ನೀಡಿ ಭ್ರಷ್ಟರನ್ನು ಸಾರ್ವಜನಿಕವಾಗಿ ಥಳಿಸುವಂತೆ ಜನರನ್ನು ಪ್ರಚೋದಿಸಿದ್ದರು. ಈಗ ಬೃಂದಾ ಕಾರಟ್‌ಗೆ ಸಿಪಿಎಂ ವಿರೋಧಿಗಳು ಭ್ರಷ್ಟರಂತೆ ಕಾಣುತ್ತಿರುವುದು, ಅವರನ್ನೆಲ್ಲ ಸಾರ್ವಜನಿಕವಾಗಿ ಥಳಿಸಿರಿ ಎಂದು ಪ್ರೇರೇಪಿಸುತ್ತಿರುವುದು ಆಶ್ಚರ್ಯಕರವಾಗಿದೆ. ಹಾಗೆಯೇ, ಸಾಧ್ವಿ ರಿತಾಂಭರಿ ಮತ್ತು ಬೃಂದಾ ಕಾರಟ್ ಅವಳಿ ಜವಳಿಗಂತೆ ಭಾಸವಾಗುತ್ತಿದ್ದಾರೆ.

ಇವತ್ತು ಬಿಜೆಪಿಯಿಂದ ಹಿಡಿದು ಕಾಂಗ್ರೆಸ್ ತನಕ ಎಲ್ಲರೂ SEZ ಜಪ ಮಾಡುತ್ತಿದ್ದಾರೆ; ಅದರಿಂದ ದೇಶಕ್ಕೆ ಭಾರಿ ಲಾಭ ಎಂದು ಸುಳ್ಳು ಹೇಳುತ್ತಿದ್ದಾರೆ. ಮಾತ್ರವಲ್ಲ ಇಂತಹ SEZ ಗಳನ್ನು ವಿರೋಧಿಸುತ್ತಿರುವವರನ್ನು ಜನದ್ರೋಹಿಗಳೆಂದೂ, ಪ್ರಗತಿ ವಿರೋಧಿಗಳೆಂದೂ ಜರಿಯುತ್ತಿದ್ದಾರೆ. ಆದರೆ ತಮ್ಮ ಭೂಮಿಯನ್ನು SEZ ಗಳಿಗೆ ನೀಡುವುದನ್ನು ಕಳಿಂಗನಗರದಿಂದ ಹಿಡಿದು ನಂದಿಗ್ರಾಮದ ತನಕ ಅಲ್ಲಿನ ಜನರೇ ಪ್ರತಿಭಟಿಸುತ್ತಿದ್ದಾರೆ. ಬಿಲ್ಲು ಬಾಣದಿಂದ ಹಿಡಿದು ನಾಡ ಬಂದೂಕುಗಳನ್ನು ತಮ್ಮ ಭೂಮಿ ರಕ್ಷಣೆಗಾಗಿ ಕೈಗೆತ್ತಿಕೊಂಡಿದ್ದಾರೆ.

ಜನರ ಇಂತಹ ಪ್ರತಿರೋಧದ ಮುಂದೆ ತನ್ನ ನಿಲುವನ್ನು ಬದಲಿಸಿಕೊಳ್ಳಬೇಕಿದ್ದ ಸರ್ಕಾರಗಳು ಬದಲಾಗಿ ಜನರ ಮೇಲೆ ಬುಲ್ಡೋಜರ್‌ಗಳನ್ನು, ಪೊಲೀಸರನ್ನು ಹರಿಹಾಯ್ದು ಬಿಡುತ್ತಿದೆ, ಜನರ ರಕ್ತವನ್ನೇ ಹರಿಸುತ್ತಿದೆ.

ಇಂತಹ ಹೋರಾಟಗಳಲ್ಲಿ ಅಲ್ಪಮಟ್ಟಿನ ಯಶಸ್ಸು ಕಂಡದ್ದು ನಂದಿಗ್ರಾಮದ ಜನರು. ತಮ್ಮ ಭೂಮಿಯನ್ನು ಕದಿಯಲು ಸರ್ಕಾರಿ ಅಧಿಕಾರಿಗಳು ಬಾರದಂತೆ, ತಮ್ಮನ್ನು ಬೆದರಿಸಲು ಪೊಲೀಸರು ಬಾರದಂತೆ ಅಲ್ಲಿನ ಜನ ವ್ಯವಸ್ಥೆ ಮಾಡಿಕೊಂಡರು.

ಆದರೂ ಮೊನ್ನೆ ಸಿಪಿಎಂ ಗೂಂಡಾಗಳು AK 47 ನಂತಹ ಆಧುನಿಕ ಶಸ್ತ್ರಾಸ್ತ್ರಗಳನ್ನು, ಬಾಂಬ್‌ಗಳನ್ನು ಹೊತ್ತು ನಂದಿಗ್ರಾಮದ ಮೇಲೆ ದಾಳಿ ಇಟ್ಟರು. SEZ ವಿರೋಧಿಸುತ್ತಿದ್ದವರನ್ನು ಅಮಾನುಷವಾಗಿ ಕೊಂದರು, ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿದರು, ಸಿಕ್ಕಸಿಕ್ಕವರನ್ನು ಥಳಿಸಿದರು. ಪೊಲೀಸರು ಮತ್ತು CRPF ನವರು ದೂರದಲ್ಲಿ ಕೈಕಟ್ಟಿ ಕುಳಿತಿರುವಂತೆ ನೋಡಿಕೊಂಡಿದ್ದ ಬುದ್ಧದೇವರ ಸರ್ಕಾರ ಸಿಪಿಎಂ ಗೂಂಡಾಗಳು ನಂದಿಗ್ರಾಮವನ್ನು 'ವಶ' ಪಡಿಸಿಕೊಂಡ ನಂತರ "ನಮ್ಮ ಕಾರ್ಯಕರ್ತರು ತಮ್ಮ ಯೋಜನೆಯಲ್ಲಿ ಯಶಸ್ವಿಯಾಗಿದ್ದಾರೆ" ಎಂದು ಮಾಧ್ಯಮಗಳ ಮುಂದೆ ಮೆಚ್ಚುಗೆಯಿಂದ ಬೀಗಿತು.

ಬುದ್ಧದೇವರಿಗೂ, ಮೋದಿಗೂ ಏನಾದರೂ ವ್ಯತ್ಯಾಸ ಕಾಣಿಸುತ್ತಿದೆಯಾ?

ಅಂದಹಾಗೆ ಈ ಕಾರ್ಯಾಚರಣೆಯನ್ನು ಸಮರ್ಥಿಸಿಕೊಂಡ ಸಿಪಿಐ ಪಕ್ಷದ ನಾಯಕ ಡಿ. ರಾಜಾರವರು "ನಂದಿಗ್ರಾಮ ಅಕ್ಷರಶಃ ವಿಮೋಚನೆ ಹೊಂದಿದ್ದ ಪ್ರಾಂತ್ಯವಾಗಿತ್ತು, ದೇಶದ ಕಾನೂನುಗಳನ್ನು ಅಲ್ಲಿ ಜಾರಿಗೊಳಿಸಲಾಗುತ್ತಿರಲಿಲ್ಲ, ಆದ್ದರಿಂದ ಅದನ್ನು ವಾಪಸ್ಸು ಪಡೆಯಬೇಕಿತ್ತು" ಎಂದಿದ್ದಾರೆ.

ವಿಪರ್ಯಾಸದ ಸಂಗತಿ ಯಾವುದೆಂದರೆ ಇದೇ ಪ್ರದೇಶವನ್ನು ಜನರಿಂದ ಕಿತ್ತುಕೊಂಡು SEZ ಆಗಿ ಪರಿವರ್ತಿಸುವ ಉದ್ದೇಶ ಎಡಪಕ್ಷದ ಸರ್ಕಾರಕ್ಕಿತ್ತು, ಇವತ್ತಿನ ನಿಯಮಗಳ ಪ್ರಕಾರ SEZ ಗಳಲ್ಲಿ ನಮ್ಮ ದೇಶದ ಕಾನೂನುಗಳನ್ನು ಜಾರಿಗೊಳಿಸುವಂತಿಲ್ಲ, ಅಂದರೆ ಅವು ನಮ್ಮ ದೇಶದಲ್ಲೇ ನಮ್ಮ ದೇಶದ ಕಾನೂನುಗಳಿಗೆ ಒಳಪಡದ ಪ್ರದೇಶಗಳಾಗಿರುತ್ತವೆ.

ನಮ್ಮ ಜನರು ತಮ್ಮ ಭೂಮಿಯನ್ನು ರಕ್ಷಿಸಿಕೊಳ್ಳುವಂತಿಲ್ಲ, ನಮ್ಮ ರಾಜಕೀಯದ ನಾಯಕರ ಅದನ್ನು ರಕ್ಷಿಸುತ್ತಿಲ್ಲ. ಈ ದೇಶ ಯಾವ ದಿಕ್ಕಿನತ್ತ ಸಾಗುತ್ತಿದೆ?

ಇವತ್ತು ಬುದ್ಧದೇವ್ ಮತ್ತು ಮೋದಿ ನಡುವೆ ಕಾಣಿಸುತ್ತಿರುವ ಒಂದೇ ಒಂದು ವ್ಯತ್ಯಾಸ ಯಾವುದೆಂದರೆ: ಗುಜರಾತಿನಲ್ಲಿ ತ್ರಿಶೂಲಗಳನ್ನು ಹಿಡಿದು ಗರ್ಭಿಣಿಯ ಹೊಟ್ಟೆಯನ್ನೇ ಬಗೆದರು. ಆದರೆ ನಂದಿಗ್ರಾಮದಲ್ಲಿ ತಾಯಿ, ಮಗಳು, ಅತ್ತೆ, ಸೊಸೆ ಎಲ್ಲರ ಮೇಲೆ ಸಾಮೂಹಿಕವಾಗಿ ಅತ್ಯಾಚಾರವೆಸಗಿದರು ಮಾತ್ರ. ತಮ್ಮ



ನಿರ್ಮಲರೊಂದಿಗೆ ಕಳೆದ ಆ ಕ್ಷಣ...

ಸುತ್ತಿಗೆ ಮತ್ತು ಕೊಡಲಿಗಳಿಂದ ಅವರನ್ನು ಹತ್ಯೆಗೈಯಲಿಲ್ಲ. ಎಡ ಮತ್ತು ಬಲ ನಡುವಿನ ವ್ಯತ್ಯಾಸ ಕಿರಿದಾಗುತ್ತಿರುವ ಇಂದಿನ ಸಂದರ್ಭದಲ್ಲಿ ಅದೂ ಸಂಭವಿಸಬಹುದು ಎಂಬ ಆತಂಕ ಕಾಡುತ್ತಿದೆ.....

* * * * * * *

ಆವರಿಬ್ಬರನ್ನು ನಾನು ರೋಮಿಯೋ-ಜೂಲಿಯೆಟ್ ಎಂದು ಕರೆಯುತ್ತಿದ್ದೆ. ಯಾಕೆಂದರೆ ಅವರೆಂದೂ ಒಬ್ಬರನ್ನೊಬ್ಬರು ಬಿಟ್ಟು ಬಹಳ ದಿನ ಇರುತ್ತಿರಲಿಲ್ಲ, ಆಕೆ ಬೆಂಗಳೂರಿನ ತವರುಮನೆಗೆ ಬಂದರೂ ಎರಡೇ ದಿನಗಳಲ್ಲಿ ಮೈಸೂರಿನ ಮನೆಗೆ ವಾಪಸ್ಸಾಗುತ್ತಿದ್ದರು. ಅದೆಂತಹ ಜಗಳವಾದರೂ ಜೊತೆಯಲ್ಲೇ ಇದ್ದು ಕಾದಾಡುತ್ತಿದ್ದರು. ಆಕಸ್ಮಾತ್ ಆತ ಯಾವುದಾದರೂ ಕೆಲಸ ನಿಮಿತ್ತ ಹಲವು ದಿನಗಳ ಕಾಲ ಬೇರೆ ಊರಿಗೆ ಹೋಗಬೇಕೆಂದಾಗ "ಅಷ್ಟು ದಿನ ನೀನು ನಿನ್ನ ಅಮ್ಮನೊಂದಿಗಿರು" ಎಂದರೆ ಆಕೆ "ಇಲ್ಲ" ಎಂದು ತನ್ನ ಗಂಟುಮೂಟೆ ಕಟ್ಟಿಕೊಂಡು ಆತನೊಂದಿಗೆ ಹೋಗಲು ಸಿದ್ಧರಾಗುತ್ತಿದ್ದರು. ಅವರೇ ರಾಮದಾಸ್ ಮತ್ತು ನಿರ್ಮಲ.

ಕೆಲ ವರ್ಷಗಳ ಹಿಂದೆ ನಿರ್ಮಲಾರ ಆರೋಗ್ಯ ಕೆಟ್ಟಾಗ, ಆಗಾಗ್ಗೆ ಅವರನ್ನು ಆಸ್ಪತ್ರೆಗೆ ಸೇರಿಸುವ ಅಗತ್ಯ ಹೆಚ್ಚಾದಾಗ ರಾಮದಾಸ್ ನಿರ್ಮಲಾರನ್ನು ಬಿಟ್ಟು ಎಲ್ಲಿಗಾದರೂ ಹೋಗುವುದೇ ಕಡಿಮೆಯಾಯಿತು. ಹೆಚ್ಚೆಂದರೆ ಅರ್ಧ ದಿನ ಮಾತ್ರ ಮನೆಯಿಂದ ಹೊರಗಿರುತ್ತಿದ್ದರು.

ಸುಮಾರು ಒಂದು ದಶಕದ ಹಿಂದೆಯೇ ರಾಮದಾಸರಿಗೆ ಬೈಪಾಸ್ ಸರ್ಜರಿ ಮಾಡಿಸಿ ಕೊಳ್ಳಬೇಕೆಂದು ಹೃದಯತಜ್ಞರು ಹೇಳಿದ್ದರು. ಆದರೆ ರಾಮದಾಸ್ ಅದನ್ನು ಮಾಡಿಸಿಕೊಳ್ಳಲೇ ಇಲ್ಲ. ಯಾಕೆ ಇನ್ನೂ ಬೈಪಾಸ್ ಮಾಡಿಸಿಕೊಂಡಿಲ್ಲ ಎಂದು ಕೇಳಿದರೆ "ಅದು

(5ನೇ ಪುಟಕ್ಕೆ)

ಕೊನೆಗೂ ಸಿಕ್ಕಿಬಿದ್ದ ರೆಡ್ಡಿ

ನವೆಂಬರ್ 25 ನೇ ತಾರೀಖು ಭಾನುವಾರ ರಜಾದಿನದಲ್ಲಿ ಬೆಳ್ಳಂಬೆಳಿಗ್ಗೆ ಸುದ್ದಿ ನೋಡಲು ಪತ್ರಿಕೆ ಕೈಗೆ ತೆಗೆದುಕೊಂಡವರೆಲ್ಲಾ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯವಸ್ಥಾಪಕ ಎಂ.ಡಿ. ಶ್ರೀನಿವಾಸರೆಡ್ಡಿ ಎಂಬ ತಿಮಿಂಗಲ ಲೋಕಾಯುಕ್ತರ ಬಲೆಗೆ ಬಿದ್ದಿರುವುದನ್ನು ನೋಡಿ ನಿಬ್ಬೆರಗಾಗಿದ್ದಾರೆ.

ಲೋಕಾಯುಕ್ತರ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ರೂಪಕ್‌ಕುಮಾರ್ ದತ್ತರವರ ನೇತೃತ್ವದಲ್ಲಿ ಲೋಕಾಯುಕ್ತ ಬೆಂಗಳೂರು ನಗರ ಜಿಲ್ಲಾ ಎಸ್ಪಿ ರಂಗಸ್ವಾಮಿ ನಾಯಕ್, ಗ್ರಾಮಾಂತರ ಜಿಲ್ಲಾ ಎಸ್ಪಿ ಶ್ರೀನಿವಾಸ್, ಡಿವೈಎಸ್ಪಿಗಳಾದ ಪರಮೇಶ್ವರಪ್ಪ, ಜಗದೀಶ್ ಪ್ರಸಾದ್ ಮುಂತಾದವರನ್ನೊಳಗೊಂಡ ತಂಡ ಶುಕ್ರವಾರ ಬೆಳಿಗ್ಗೆಯಿಂದಲೇ ದಾಳಿ ಆರಂಭಿಸಿ ಶ್ರೀನಿವಾಸರೆಡ್ಡಿಯ ವಿಕೃತ ಸಿರಿವಂತಿಕೆಯ ಹಿನ್ನೆಲೆ-ಮುನ್ನೆಲೆಗಳ ಜನ್ಮ ಜಾಲಾಡಿದ್ದಾರೆ.

ದಾಳಿಯ ಸಂದರ್ಭದಲ್ಲಿ ಸಿಕ್ಕ ಮಾಹಿತಿ-ದಾಖಲೆಗಳ ನ್ನಾಧರಿಸಿ ಶ್ರೀನಿವಾಸ ರೆಡ್ಡಿ ಅಂದಾಜು 20 ಕೋಟಿ ರೂ. ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ. ಲಕ್ಷಾಂತರ ರೂ. ನಗದು ಹಣ, ಬ್ಯಾಂಕ್ ಬಾಲೆನ್ಸು, ಕೋಟ್ಯಂತರ ಬೆಲೆ ಬಾಳುವ ನಿವೇಶನಗಳೆಲ್ಲವೂ ರೆಡ್ಡಿ ಅಕ್ರಮ ಸಂಪಾದನೆಯನ್ನು ಸಾಕ್ಷೀಕರಿಸಿದೆ.

ಲೋಕಾಯುಕ್ತರ ಹೇಳಿಕೆಯ ಪ್ರಕಾರವೇ ಬೆಂಗಳೂರು ಉತ್ತರ ತಾಲ್ಲೂಕಿನ ತಿರುಮಗೊಂಡನಹಳ್ಳಿ, ಆನೇಕಲ್ ತಾಲ್ಲೂಕಿನ ಅಗ್ರಹಾರ ಮತ್ತು ನೆರಳೂರಿನಲ್ಲಿ ರೆಡ್ಡಿ ಸ್ವತಃ ತನ್ನ ಹೆಸರಿನಲ್ಲಿ ಹಾಗೂ ಅವರ ಅತ್ತೆ ಚೌಡಮ್ಮನವರ ಹೆಸರಿನಲ್ಲಿ ತಿರುಮಗೊಂಡನಹಳ್ಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಲ್ಲಿಪುರದಲ್ಲಿ ಇರುವ ಭೂಮಿ ಒಟ್ಟು 13.33 ಎಕರೆ. ಭೂಮಿಯ ಬೆಲೆ ಗಗನಕ್ಕೇರಿರುವ ಈಗಿನ ಮೌಲ್ಯದಲ್ಲಿ ಇದು ಎಷ್ಟು ಕೋಟಿ ಬಾಳಬಹುದೆಂಬುದನ್ನು ಒಮ್ಮೆ ಅಂದಾಜಿಸಿ. ಶ್ರೀನಿವಾಸರೆಡ್ಡಿ ಹೆಸರಲ್ಲಿ ತಿರುಮಗೊಂಡನಹಳ್ಳಿಯಲ್ಲಿರುವ ರಮಣಮಹರ್ಷಿ ಸೇವಾ ಟ್ರಸ್ಟ್‌ನ ಕಚೇರಿ, ಸಭಾಭವನ, ವೃದ್ಧಾಶ್ರಮ ಸೇರಿದಂತೆ ಒಟ್ಟು ಭೂಮಿಯ ಬೆಲೆ ಎಂಟು ಕೋಟಿ ಮೀರುತ್ತದೆ ಎಂಬುದು ಲೋಕಾಯುಕ್ತರ ಲೆಕ್ಕಾಚಾರ. ಇದರ ಜೊತೆಗೆ ಕಳೆದ ಜೂನ್‌ನಲ್ಲಿ 3 ಕೋಟಿ ರೂಪಾಯಿಗಳಿಗೂ ಹೆಚ್ಚಿನ ಹಣ ನೀಡಿ ಮೈಸೂರಿನ ಹೆಗ್ಗಡೆ ದೇವನಕೋಟೆಯಲ್ಲಿ 12 ಎಕರೆ ಕೃಷಿ ಭೂಮಿ ಖರೀದಿಗೆ ಸಂಬಂಧಿಸಿದ ದಾಖಲೆಗಳೂ ಲೋಕಾಯುಕ್ತರ ಕೈ ಸೇರಿವೆ.

ಸೈಟು-ಬ್ಯಾಂಕ್ ಬ್ಯಾಲೆನ್ಸ್

ಶ್ರೀನಿವಾಸರೆಡ್ಡಿಯ ಹೆಸರಲ್ಲಿ ಸದಾಶಿವನಗರದಲ್ಲೊಂದು ಮನೆ. ಬಿಟಿಎಂ ಲೇಔಟ್‌ನ 8 ನೇ ಮುಖ್ಯ ರಸ್ತೆಯಲ್ಲಿ ಒಂದು ಸರ್ವೀಸ್ ಅಪಾರ್ಟ್‌ಮೆಂಟು. ಅದೇ ಬಡಾವಣೆಯಲ್ಲಿ ಒಂದು ನಿವೇಶನ (ಸಂಖ್ಯೆ 1127). ಸದಾಶಿವನಗರದ 9 ನೇ ಮುಖ್ಯರಸ್ತೆಯಲ್ಲಿ 2004 ರಲ್ಲಿ ಖರೀದಿ ಮಾಡಲಾದ 40x60 ನಿವೇಶನ. ಕೋರಮಂಗಲ, ಎಚ್.ಎಸ್.ಆರ್. ಬಡಾವಣೆಯಲ್ಲಿ 40x60 ಅಳತೆಯ ಎರಡು ನಿವೇಶನಗಳು. ಇಂದಿರಾನಗರದಲ್ಲಿ 30x40 ನಿವೇಶನ. ಈ ವಿವರಗಳನ್ನೆಲ್ಲಾ ನೋಡುತ್ತಿದ್ದರೆ ಈ ರೆಡ್ಡಿ ಜಲಮಂಡಳಿಯ ವ್ಯವಸ್ಥಾಪಕ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದನೋ ಅಥವಾ ರಿಯಲ್ ಎಸ್ಟೇಟ್ ದಂಧೆ ಮಾಡುತ್ತಿದ್ದನೋ ಎಂಬ ಸಂಶಯ ಬರುತ್ತದೆ.



ಶ್ರೀನಿವಾಸ ರೆಡ್ಡಿ

ರೆಡ್ಡಿಯ ಮನೆಯಲ್ಲಿ ಲೋಕಾಯುಕ್ತರ ಕೈಗೆ ನಗದು ಹಣ ಅಂತ ಸಿಕ್ಕಿರುವುದು 30.77 ಲಕ್ಷ, 1.5 ಕೆ.ಜಿ. ಚಿನ್ನ, 10 ಕೆ.ಜಿ ಬೆಳ್ಳಿಯ ಆಭರಣ. ಜೊತೆಗೆ ರೆಡ್ಡಿ ಹೆಸರಲ್ಲಿ ವಿಜಯಾ ಬ್ಯಾಂಕ್‌ನಲ್ಲಿ 35 ಲಕ್ಷ, ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ 15 ಲಕ್ಷ ಹಣವಿದ್ದರೆ, ಪತ್ನಿಯ ಹೆಸರಲ್ಲಿ ವಿಜಯಾ ಬ್ಯಾಂಕ್‌ನಲ್ಲಿ 35 ಲಕ್ಷ, ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ 15 ಲಕ್ಷ ಹಣವಿದ್ದರೆ, ವಿಜಯಾ ಬ್ಯಾಂಕ್‌ನಲ್ಲಿ 50 ಲಕ್ಷ, ಎಸ್.ಬಿ.ಎಂ. ನಲ್ಲಿ 3 ಲಕ್ಷ, ಪುತ್ರಿ ರಶ್ಮಿಯ ಹೆಸರಲ್ಲಿ 5 ಲಕ್ಷ, ಪುತ್ರ ರಮೇಶ್ ಹೆಸರಲ್ಲಿ 1 ಲಕ್ಷ ಹಣವಿದೆ. ಆಹಾ ಸಿರಿವಂತಿಕೆಯೇ! ಈ ಶ್ರೀನಿವಾಸರೆಡ್ಡಿ ಒಟ್ಟು ತನ್ನ ಸೇವಾವಧಿಯಲ್ಲಿ ಸರ್ಕಾರದಿಂದ ಪಡೆದಿರುವ ಸಂಬಳ-ಸವಲತ್ತುಗಳ ಒಟ್ಟು ಮೊತ್ತ ಕೇವಲ 35 ಲಕ್ಷ! ಆದರೆ ಈಗಿನ ಅಕ್ರಮ ಆಸ್ತಿ 20 ಕೋಟಿ. ತನ್ನ ಅಧಿಕೃತ ಆದಾಯಕ್ಕಿಂತ 57 ಪಟ್ಟು ಅಧಿಕ.

ಭ್ರಷ್ಟ ಇತಿಹಾಸ

1999-2000 ಸಿಎಜಿ ವರದಿಯಲ್ಲಿ (ಕ್ರ.ಸಂ. 3.63 ರಲ್ಲಿ) ಸುಮಾರು 29.46 ಕೋಟಿ ರೂಪಾಯಿಗಳನ್ನು ಸಚಿವ ಸಂಪುಟದ ಆಡಳಿತಾತ್ಮಕ ಅನುಮೋದನೆ ಪಡೆಯದೆ ಖರ್ಚು ಮಾಡಿರುವ ಬಗೆಗಿನ ಉಲ್ಲೇಖದಲ್ಲಿ ಶ್ರೀನಿವಾಸರೆಡ್ಡಿಯದೇ ಪ್ರಧಾನ ಹೆಸರು.


ಚಿಕ್ಕಮಗಳೂರು ನೀರು ಸರಬರಾಜು ಯೋಜನೆಯಡಿ (ಯಗಚಿ) ನದಿಯಿಂದ ಸುಮಾರು 1.30 ಕೋಟಿ ಹಾಗೂ ಕೆ.ಆರ್. ನಗರ ನೀರು ಸರಬರಾಜು ಯೋಜನೆಯಡಿಯಲ್ಲಿ 30 ಲಕ್ಷ, ಸುಳ್ಳು ಬ್ಯಾಂಕ್ ಗ್ಯಾರಂಟಿ ಮೂಲಕ ಗುತ್ತಿಗೆದಾರರೊಂದಿಗೆ ಶಾಮೀಲಾಗಿ ಸರ್ಕಾರಕ್ಕೆ ವಂಚಿಸಿರುವ ನಿದರ್ಶನ. ಇಂತಹ ಆರೋಪಗಳ ಬಗ್ಗೆ ವಿಧಾನ ಪರಿಷತ್ ಸದಸ್ಯರಾಗಿದ್ದ ಆರ್.ಎಸ್. ಪಾಟೀಲರ ನೇತೃತ್ವದ ಸದನ ಸಮಿತಿಯು ಶ್ರೀನಿವಾಸರೆಡ್ಡಿಯ ಅಮಾನತಿಗೆ ಶಿಫಾರಸ್ಸು ಮಾಡಿದ್ದರೂ ಯಾವುದೇ ಕ್ರಮ ಕೈಗೊಂಡಿರಲಿಲ್ಲ.

1986 ರಲ್ಲಿ ಜಲಮಂಡಳಿಗೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ವಿಲೀನಗೊಂಡು 2000 ದ ಹೊರಗೆ ಛೀಫ್ ಇಂಜಿಯರ್ ಆಗಿ ಬಡ್ತಿ ಪಡೆದ ಶ್ರೀನಿವಾಸರೆಡ್ಡಿ ಜಲಮಂಡಳಿಯ ವ್ಯವಸ್ಥಾಪಕ ಹುದ್ದೆಯ ನೇಮಕಾತಿಗಿದ್ದ ನಿಯಮಾವಳಿಗಳನ್ನೇ ತಿದ್ದುಪಡಿ ಮಾಡಿಸುವಷ್ಟು ಬಲಿಷ್ಠವಾಗಿ ಬೆಳೆದುಬಿಟ್ಟಿದ್ದ.

2000 ರಲ್ಲಿ ಅಂದಿನ ಮುಖ್ಯಮಂತ್ರಿ ಎಸ್.ಎಂ. ಕೃಷ್ಣರ ಮನವೊಲಿಸಿ ಐಎಎಸ್ ಅಧಿಕಾರಿಗಳೇ ಮಂಡಳಿಯ ವ್ಯವಸ್ಥಾಪಕರಾಗಬೇಕೆಂಬ ನಿಯಮಾವಳಿಗೆ ಬದಲಾಗಿ ಚೀಫ್ ಇಂಜಿನಿಯರ್ ಆಗಿರುವವರೇ ವ್ಯವಸ್ಥಾಪಕ ನಿರ್ದೇಶಕರಾಗುವಂತೆ ತಿದ್ದುಪಡಿ ತರುವಲ್ಲಿ ತನ್ನ ಕೈಚಳಕ ತೋರಿಸಿ, ಅದರ ಪ್ರತಿಫಲವೆಂಬಂತೆ ತಾನೇ ಅದರ ವ್ಯವಸ್ಥಾಪಕ ನಿರ್ದೇಶಕನೂ ಆದ.

2004 ರಲ್ಲಿ ಈತ ನಿವೃತ್ತಿಯಾದರೂ ವಿಶ್ವಬ್ಯಾಂಕ್ ಯೋಜನೆಗಳನ್ನು ಅನುಷ್ಠಾನಗೊಳಿಸುವ ನೆಪದಲ್ಲಿ ತಕ್ಷಣವೇ ಅಂದಿನ ಎಸ್.ಎಂ. ಕೃಷ್ಣ ನೇತೃತ್ವದ ಸರ್ಕಾರ ನೇಮಿಸಿತು. ಇದು ವಿವಾದಕ್ಕೆ ಕಾರಣವಾಗಿ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತು. ಹೈಕೋರ್ಟ್ ಈ ನೇಮಕ ರದ್ದುಪಡಿಸಿತು. ರೆಡ್ಡಿ ವಿಭಾಗೀಯ ಪೀಠಕ್ಕೆ ಮೊಟ್ಟಿಸಿದ

(5ನೇ ಪುಟಕ್ಕೆ)



ಮುಖ್ಯಮಂತ್ರಿ ಕುರ್ಚಿಗೆ ಪ್ರಯತ್ನ ಪಡುವುದೆಂದು ಮಾತಾಡಿ ಸೆಟಲ್ ಮಾಡಿಕೊಂಡಿದ್ದರಂತೆ. ಆದರೆ ಅಸೆಂಬ್ಲಿ-ಪಾರ್ಲಿಮೆಂಟ್ ಎಲೆಕ್ಷನ್ ಒಟ್ಟಿಗೆ ನಡೆಯುವ ಬದಲಾಗಿ ಅಸೆಂಬ್ಲಿ ಎಲೆಕ್ಷನ್ನೇ ಮೊದಲು ಬರುತ್ತಿದೆ. ಹಾಗಾಗಿ ಚೆಲುವನಿಗೆ ಕಾಂಗ್ರೆಸ್ ಬಾಗಿಲು ತೆರೆಯುವುದಿಲ್ಲ. ಅಂಬಿ ಸಂಸತ್ ಸದಸ್ಯರಾಗಿದ್ದುಕೊಂಡೇ ಈ ಬಾರಿ ಶ್ರೀರಂಗಪಟ್ಟಣ ಅಸೆಂಬ್ಲಿಗೆ ನಿಲ್ಲಲು ರೆಡಿಯಾಗುತ್ತಿದ್ದಾರೆ. ಶಿವರಾಮೇಗೌಡ ಮತ್ತೆ ಕಾಂಗ್ರೆಸ್‌ನಿಂದ ಸ್ಪರ್ಧಿಸಲು ತಯಾರಾಗಿದ್ದಾರೆ. ದಿಕ್ಕೆಟ್ಟ ದಳ, ಕುರುಬರ ನಿಷ್ಠುರ ಕಟ್ಟಿಕೊಂಡು ಗೆಲ್ಲಲಾರೆ ಎಂಬ ಭಯದಿಂದ ಚೆಲುವಣ್ಣ ಈಗ ಬಿಜೆಪಿಯತ್ತ ಮುಖ ತಿರುಗಿಸಿದ್ದಾರೆ.

ಹಾಗೆ ಹೇಳಬೇಕೆಂದರೆ ಜಾತ್ಯತೀತ ದಳದಲ್ಲಿದ್ದರೂ ನಾಗಮಂಗಲದ ಭಜರಂಗಿ-ಆರ್‌ಎಸ್‌ಎಸ್ ಪುಂಡರಿಗೆ ಚೆಲುವರಾಯಸ್ವಾಮಿ ಮೊದಲಿಂದಲೂ ದುಡ್ಡೂ ಕಾಸು ಕೊಟ್ಟು ಪೋಷಿಸಿಕೊಂಡು ಬಂದಿದ್ದಾನೆ. ಕಳೆದ ಎಲೆಕ್ಷನ್‌ನಲ್ಲಿ ಮುಸ್ಲಿಮರೆಲ್ಲಾ ಕಾಂಗ್ರೆಸ್‌ಗೆ ಓಟು ಹಾಕಿದರೆಂಬ ಸಿಟ್ಟಿಗೆ ಈ ಅರೆಬೆಡ್ಡಿ "ಪಾಂಡವಪುರ-ಮೈಸೂರು ರೋಡಿನ ಸಾಬರನ್ನೆಲ್ಲಾ ಸುಟ್ಟು ಹಾಕಬೇಕು" ಎಂದು ಕಿರುಚಿಕೊಂಡಿದ್ದ. ಅಂದರೆ ಬಿಜೆಪಿಗಳ ಬೆಂಕಿ ಹಚ್ಚುವ ನೀಚ ರಾಜಕೀಯಕ್ಕೆ ಚೆಲುವನ ಈಗಿನ ಮನಸ್ಥಿತಿ ಹೇಳಿ ಮಾಡಿಸಿದಂತಿದೆ. ಜೊತೆಗೆ ಕದ್ದು ಮಡಗಿಕೊಂಡಿರುವ ಕೋಟ್ಯಂತರ ರೂಪಾಯಿ ದುಡ್ಡು ಇವನ ಹತ್ತಿರ ಇದೆ. ಜೆಡಿಎಸ್‌ನ ಪ್ರಮುಖ ನಾಯಕರೊಬ್ಬರು 'ಲಂಕೇಶ್' ಜೊತೆ ಮಾತನಾಡುತ್ತಾ 'ಆನೇಕಲ್ ಹತ್ತಿರ ಚೆಲುವರಾಯಸ್ವಾಮಿ ಒಂದೇ ಕಡೆ 85 ಸೈಟ್ (Villa) ಜಾಗ ಖರೀದಿ ಮಾಡಿದ್ದಾನೆ. ಇದರ ಒಂದೊಂದರ ರೇಟೂ ಈಗ ಒಂದು ಕೋಟಿ ಇದೆ' ಎಂದು ಚೆಲುವನ ಸಾಧನೆ ಬಣ್ಣಿಸಿದ್ದಾರೆ.


ಚೆಲುವಣ್ಣ ತಾನಿತಂದಾನ...

ದಳ-ಬಿಜೆಪಿ-ಕಾಂಗ್ರೆಸ್ ನಿನ್‌ದ್ಯಾವುದಣ್ಣ?

ಜಾತ್ಯತೀತ ದಳದ ಒಳಗಡೆಯೇ ದೇವೇಗೌಡರಿಗೆ ಒಂದು ಹೊಡೆತ ಅಂತ ಏನಾದರೂ ಬೀಳುವುದಿದ್ದರೆ, ಅದನ್ನ ಕೊಡುವ ಒಬ್ಬನೆ ಆಸಾಮಿ


ಈ ಚೆಲುವರಾಯಸ್ವಾಮಿ!

ಈ ಅನುಮಾನ ಜೆಡಿಎಸ್‌ನ ನಾಯಕರಿಗಿರಲಿ ಮಂಡ್ಯದ ಸಾಮಾನ್ಯ ಕಾರ್ಯಕರ್ತನಿಗೂ ಬಂದುಬಿಟ್ಟಿದೆ. ಚೆಲುವನಿಗೀಗ ದುಡ್ಡಿನ ಬರ ನೀಗಿದೆ, ಆದರೆ ಅಧಿಕಾರದ ಹಪಾಹಪಿತನ ಇನ್ನೂ ಮುಗಿದಿಲ್ಲ. ಈ ಪರಮ ಭ್ರಷ್ಟನಿಗೆ ಈಗ ಒಂದೇ ಯೋಚನೆ. ಅದು ನಾಗಮಂಗಲದಿಂದ ಮುಂದಿನ ಎಲೆಕ್ಷನ್‌ನಲ್ಲೂ ಗೆಲ್ಲಬೇಕು, ಮತ್ತು ಯಾವ ಪಾರ್ಟಿಗೆ ಮೆಜಾರಿಟಿ ಸಿಗುತ್ತದೋ ಅದೇ ಪಾರ್ಟಿಯಿಂದ ಎಲೆಕ್ಷನ್‌ಗೆ ನಿಲ್ಲಬೇಕು ಎಂಬುದು. ದಳದಲ್ಲಿದ್ದರೆ ಇವೆರಡೂ ಅಸಾಧ್ಯ ಎಂದು ಭಯಪಟ್ಟಿರುವ ಚೆಲುವಣ್ಣನಿಗೆ ಈಗ ಉಳಿದಿರುವ ಆಯ್ಕೆ ಬಿಜೆಪಿಯೊಂದೆ.



ಕಾಂಗ್ರೆಸ್‌ನಲ್ಲಿ ಶಿವರಾಮೇಗೌಡ ಇರುವುದರಿಂದ ಅಲ್ಲಿ ಹೇಗೂ ಅವಕಾಶ ಸಿಗಲ್ಲ, ಇನ್ನೂ ಮೇಲಾಗಿ ಇವರಿಬ್ಬರ ಜಗಳದಲ್ಲಿ ಪಾಲ್ಗೊಂಡಿದ್ದ ಎರಡೂ ಪಾರ್ಟಿ ಕಾರ್ಯಕರ್ತರು ಪಕ್ಷ ಮೀರಿದ ದ್ವೇಷ-ಜಿದ್ದು ಬೆಳೆಸಿಕೊಂಡು ಬಿಟ್ಟಿದ್ದಾರೆ. ನಾಳೆ ಈ ಲೀಡರ್‌ಗಳೇ ಒಂದಾದರೂ ಕಾರ್ಯಕರ್ತರು ಒಂದಾಗುವುದು ಕಷ್ಟ ಎಂಬ ಪರಿಸ್ಥಿತಿ ನಾಗಮಂಗಲದಲ್ಲಿದೆ.

ಇನ್ನು ದಳದ ಬಾವುಟ ಹಿಡಿದುಕೊಂಡು ಏನೇ ಲಾಗ ಹಾಕಿದರೂ ಈ ಬಾರಿ ಚೆಲುವ ಗೆಲ್ಲುವುದು ಕಷ್ಟ. ಹಾಗಾಗಿ ಬಿಜೆಪಿಗಾದರೂ ಸೇರಿ ಒಂದು ಕೈ ನೋಡೇ ಬಿಡೋಣ ಎಂದು ಚೆಲುವಣ್ಣ ಲೆಕ್ಕ ಹಾಕುತ್ತಿದ್ದಾನೆ.



ಕೆಲ ತಿಂಗಳ ಹಿಂದೆ ಚೆಲುವರಾಯಸ್ವಾಮಿ, ಅಂಬರೀಷ್ ಹಾಗೂ ಶಿವರಾಮೇಗೌಡರ ನಡುವೆ ಒಂದು ಸೀಕ್ರೆಟ್ ಒಪ್ಪಂದವಾಗಿದ್ದರ ಬಗ್ಗೆ ರೂಮರ್ ಹಬ್ಬಿತ್ತು. ಆ ಪ್ರಕಾರ ಶಿವರಾಮೇಗೌಡ ಮಂಡ್ಯದಿಂದ ಪಾರ್ಲಿಮೆಂಟಗೆ ಸ್ಪರ್ಧಿಸುವುದು, ಅಂಬಿ ಶ್ರೀರಂಗಪಟ್ಟಣದಿಂದ ಅಸೆಂಬ್ಲಿಗೆ ಸ್ಪರ್ಧಿಸುವುದು ಮತ್ತು ಚೆಲುವಣ್ಣನಿಗೆ ನಾಗಮಂಗಲ ಬಿಟ್ಟುಕೊಡುವ ಒಪ್ಪಂದ ಅದು. ಹಾಗು ಎಲ್ಲರೂ ಕಾಂಗ್ರೆಸ್‌ನಿಂದಲೇ ನಿಲ್ಲುವುದೆಂಬ ಅಗ್ರಿಮೆಂಟ್ ಅದು. ಹಾಗೆ ಮಾಡುವ ಮೂಲಕ ಎಲ್ಲರೂ ಗೆಲ್ಲುವಂತೆ ವ್ಯವಸ್ಥೆ ಮಾಡಿಕೊಳ್ಳುವುದು, ಮುಖ್ಯವಾಗಿ ಅಪ್ಪಿತಪ್ಪಿ ಅಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮೆಜಾರಿಟಿ ಸಿಕ್ಕರೆ ಅಂಬಿ

ತಾನು ಬಿಜೆಪಿ ಸೇರಲ್ಲ, ಕಾಂಗ್ರೆಸ್ ಸೇರಲ್ಲಾ ಎಂದು ವಿನಾಕಾರಣ ಪ್ರತಿದಿನ ಸಮಜಾಯಿಷಿ ಕೊಡುತ್ತಿರುವ ಚೆಲುವ ಬಿಜೆಪಿ ಸೇರುವ ದಿನ ದೂರವಿಲ್ಲ. ಇವನ ಆಪ್ತರಾದ ಕಾಡಾ ಅಧ್ಯಕ್ಷ ರಮೇಶ್ ಮುಂತಾದವರೇ 'ಇವನ್ನ ನಂಬಕ್ಕಾಗಲ್ಲ' ಎಂದು ಮಂಡ್ಯ ಪತ್ರಕರ್ತರ ಹತ್ತಿರ ಹೇಳಿಕೊಂಡು ತಿರುಗುತ್ತಿದ್ದಾರೆ.

ಈ ಚೆಲುವರಾಯಸ್ವಾಮಿ ಎಂಥ ಕಿಲಾಡಿ ಎಂದರೆ ರಾಜಕೀಯ ತಂತ್ರಗಾರಿಕೆಯಲ್ಲಿ ಚಾಂಪಿಯನ್ ಎನಿಸಿಕೊಂಡಿರುವ ಅಂಥ ದೇವೇಗೌಡರಿಗೇ ಚಳ್ಳೇಹಣ್ಣು ತಿನ್ನಿಸಿ ಕೈಕೊಡಲು ಹೊರಟಿದ್ದಾನೆ.

ಈತ ಒಂದು ವೇಳೆ ಜೆಡಿಎಸ್ ಬಿಟ್ಟರೂ ಹೋಗುವಾಗ ತಾನೊಬ್ಬನೇ ಹೋಗಲಾರ, ಆದಷ್ಟು ಶಾಸಕ-ನಾಯಕರನ್ನು ತನ್ನ ಜೊತೆ ಕರೆದುಕೊಂಡೇ ಬಿಜೆಪಿಗೆ ಹೋಗುತ್ತಾನೆ.

ಇದರ ಹಿಂದಿರುವ ಲೆಕ್ಕಾಚಾರ ಏನು ಗೊತ್ತೆ?

ಹಳೇ ಮೈಸೂರು ಪ್ರಾಂತ್ಯದಲ್ಲಿ ಈಗ ಬಿಜೆಪಿಗೆ ಬಲಿಷ್ಠ ಒಕ್ಕಲಿಗ ನಾಯಕ ಅಂತ ಯಾರೂ ಇಲ್ಲ ತಾನೇ ಯಾಕೆ ಆ ನಾಯಕ ಅನ್ನಿಸಿಕೊಳ್ಳಬಾರದು ಎಂಬುದು ಚೆಲುವನ ಯೋಚನೆ.

ಅಂದಹಾಗೆ ಚೆಲುವಣ್ಣನು ರಾಜಕೀಯದಿಂದ ನಿವೃತ್ತನಾಗಲೂ ಯೋಚಿಸುತ್ತಿದ್ದೇನೆ, ಕಾರ್ಯಕರ್ತರು ಏನು ಹೇಳುತ್ತಾರೋ ಹಾಗೇ ಮಾಡುತ್ತೇನೆ ಎಂದು ಹೊಸ ನಾಟಕ ಚಾಲು ಮಾಡಿದ್ದಾನೆ.

ನಾಗಮಂಗಲದ ಜನ ಹೇಗಾದರೂ ಮಾಡಿ ನಿವೃತ್ತಿಗೆ ಒಪ್ಪಿಗೆ ಕೊಟ್ಟರೆ ಮುಂದೆ ಸರ್ಕಾರಿ ಖಜಾನೆಯ ನೂರಾರು ಕೋಟಿ ರೂಪಾಯಿ ಲೂಟಿ ತಪ್ಪಿಸಬಹುದು.

■ ಈಶ

ಒಂದೇ ವೇದಿಕೆಗೂ ಬರದ ಕಮ್ಯುನಿಸ್ಟರು

■ ಪಾರ್ವತೀಶ



ಭಾರತದಲ್ಲಿ ಅತ್ಯಂತ ಹೆಚ್ಚು ವಿಭಜನೆಯಾಗಿರುವ ಪಕ್ಷ ಯಾವುದು ಗೊತ್ತೆ?

ಕಮ್ಯುನಿಸ್ಟರದು!

ಸಿಪಿಎಂ, ಸಿಪಿಐ, ಸಿಪಿಐ (ಮಾವೋವಾದಿ), ಸಿಪಿಎಂ (ಎಂ.ಎಲ್.), ಈ ಎಂಎಲ್ ಅಂದರೆ ಮಾರ್ಕ್ಸಿಸ್ಟ್-ಲೆನಿನಿಸ್ಟ್ ಲೈನ್‌ನೊಳಗೂ ಹತ್ತಾರು ವಿಭಜಿತ ಗುಂಪುಗಳು, ಜೊತೆಗೆ ಫಾರ್ವರ್ಡ್ ಬ್ಲಾಕ್, SUCI, ಈಗ ಕರ್ನಾಟಕದಲ್ಲಿ RCP.... ಹೀಗೆ ನೂರೆಂಟು ಪಕ್ಷ ಗುಂಪುಗಳಾಗಿ ಹೋಗಿವೆ.

ಸೈದ್ಧಾಂತಿಕ ಭಿನ್ನಾಭಿಪ್ರಾಯ, ಭಾರತದಲ್ಲಿ ಕ್ರಾಂತಿ ಹೇಗೆ ಸಂಭವಿಸುತ್ತದೆ. ಹೀಗೆ ನಡೆಸಬೇಕೆಂಬ ವಿಭಿನ್ನ ನಿಲುವುಗಳಿಂದ ಈ ವಿಭಜನೆಗಳು ಆಗಿವೆ. ಜೊತೆಗೆ ವ್ಯವಸ್ಥೆಯೊಳಗಿನ ದುಷ್ಟತನಗಳನ್ನೆಲ್ಲಾ ಮೈಗೂಡಿಸಿಕೊಂಡಿರುವ ಕಮ್ಯುನಿಸ್ಟ್ ಪಾರ್ಟಿಗಳೂ ಇವೆ ಬಿಡಿ. ಪಶ್ಚಿಮ ಬಂಗಾಳದ ನಂದಿಗ್ರಾಮ ಅದಕ್ಕೊಂದು ಉದಾಹರಣೆಯೂ ಆಗಿದೆ. ಅಲ್ಲಿ ಸಿಪಿಎಂ ಸರ್ಕಾರದ ಕಾರ್ಯಕರ್ತರು ಹಾಗೂ ಪೊಲೀಸರಿಬ್ಬರೂ ಕೈಲಿ ಗನ್ ಹಿಡಿದು ಹೋರಾಟನಿರತ ರೈತರನ್ನು ಕೊಲ್ಲುತ್ತಿದ್ದಾರೆ.



ಇಂಥ social fascism ಬಗ್ಗೆಯೂ ಚರ್ಚೆಯಾಗಲೆಂದು ಕಳೆದ ಶುಕ್ರವಾರ 'ಲಂಕೇಶ್' ಆಫೀಸ್‌ನಲ್ಲಿ ನಾವೊಂದು ಚರ್ಚೆ ಏರ್ಪಡಿಸಿದ್ದೆವು. ಇದರಲ್ಲಿ ಸಿಪಿಎಂ, ಸಿಪಿಐ, SUCI ಹಾಗೂ ಮಾರ್ಕ್ಸಿಸ್ಟ್ ಚಿಂತಕ ಹಾಗೂ ನಮ್ಮ ಅಂಕಣಕಾರ ಶಿವಸುಂದರ್ ಮಾತನಾಡಲಿ ಎಂದುಕೊಂಡಿದ್ದೆವು. ಬೇರೆ ಎಲ್ಲರೂ ಒಪ್ಪಿಕೊಂಡರೂ ಈ SUCI ನವರು ಮಾತ್ರ ನಮ್ಮ ಕೈಗೆ ಸಿಗಲೇ ಇಲ್ಲ.

ನೀವೂ ಬಹುಶಃ ಈ SUCI ಆಕ್ಟಿವಿಸ್ಟ್‌ಗಳನ್ನು ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶ, ಎಂ.ಜಿ. ರಸ್ತೆಗಳಲ್ಲಿ ನೋಡಿರುತ್ತೀರೇನೊ. ಕೈಲೊಂದು ಡಬ್ಬಿ ಹಿಡಿದು, ಇನ್ನೊಂದು ಕೈಯಲ್ಲಿ ಕರಪತ್ರಗಳನ್ನು ಹಿಡಿದು ಡೊನೇಷನ್ ಕಲೆಕ್ಟ್ ಮಾಡುತ್ತಿರುತ್ತಾರೆ. ಅವರ ಶ್ರದ್ಧೆ ಮೆಚ್ಚಿಕೊಂಡು ನೀವೇನಾದರೂ ಮಾತಿಗಿಳಿದರೆ ಚಕ್ಕಂತ ಇಂಗ್ಲಿಷ್ ಶುರು ಮಾಡಿಬಿಡುತ್ತಾರೆ. ಪ್ರಶ್ನೆ ಕೇಳಿದವರು ಅನಕ್ಷರಸ್ಥರಾಗಿದ್ದರೂ ಕೂಡಾ! ಇನ್ನು ಏನಾದರೂ ಕೇಳಿದರೆ ವಿನಯದಿಂದ 'ಮಲ್ಲೇಶ್ವರದಲ್ಲಿ ನಮ್ಮ ಆಫೀಸಿದೆ, ಅಲ್ಲಿಗೆ ಬನ್ನಿ' ಎಂದು ಬಿಡುತ್ತಾರೆ. ಇಂಥ ನಿಷ್ಪಾಪಿ, ನಿರುಪದ್ರವಿಗಳನ್ನು ಸಹಿಸಿಕೊಳ್ಳದ ಸಿಪಿಎಂನವರು ಪಶ್ಚಿಮ ಬಂಗಾಳದಲ್ಲಿ ಇದುವರೆಗೂ 200 ಕ್ಕೂ ಹೆಚ್ಚು SUCI ಸದಸ್ಯರನ್ನು ಕೊಂದು ಹಾಕಿದ್ದಾರೆ ಅಂದರೆ ನೀವು ನಂಬುತ್ತೀರಾ!

ಕನಿಷ್ಠ ಬೆಂಗಳೂರಿನ SUCI ಗಳಂತೂ ಸೇಫ್ ಆಗಿದ್ದಾರೆ ಬಿಡಿ, ಆದರೂ 'ಚರ್ಚೆ ಮಾಡೋಣ ಬನ್ನಿ' ಅಂದರೆ ಅವರು ತಪ್ಪಿಸಿಕೊಂಡು ಹೋಗುತ್ತಾರ್ಯಾಕೆ ಎಂಬುದೇ ನಮಗೆ ಅರ್ಥವಾಗಲಿಲ್ಲ.

ಅವತ್ತು ಸಿಪಿಎಂನ ಸೆಕ್ರೆಟರಿ ಜಿ.ಎನ್. ನಾಗರಾಜ್ ಬರುವುದಾಗಿ ಹೇಳಿದ್ದರೂ ಬರಲಿಲ್ಲ. ದೆಹಲಿ ಪ್ರಯಾಣದ ಕಾರಣಕ್ಕೆ ಹಾಗಾಯಿತಂತೆ. ಆದರೆ ಅವರ ಬದಲಿಗೆ ಇನ್ನೊಬ್ಬರು ಬರಲಿ ಅಂದರೆ ಅದೂ ಏರ್ಪಾಡಾಗಲಿಲ್ಲ. ಜೊತೆಗೆ ಡಾ. ಜಿ. ರಾಮಕೃಷ್ಣ ಮತ್ತು ಶಿವಸುಂದರ್ ಇಬ್ಬರೇ ಮಾತನಾಡಿದರು.

ಅಪರಾಧಿ ಕಮ್ಯುನಿಸ್ಟರು, ನಿರುಪದ್ರವಿ ನಿಷ್ಪಾಪಿ ಕಮ್ಯುನಿಸ್ಟರು, ನೈಜ ಮಾರ್ಕ್ಸಿಸ್ಟರನ್ನು ಒಂದೇ ವೇದಿಕೆಯಲ್ಲಿ ನೋಡಲೆಂದು ಬಂದಿದ್ದವರಿಗೆ ಅವತ್ತು ನಿರಾಶೆಯಾಗಿದ್ದಂತೂ ನಿಜ.

ನೀನಾರಿಗಾದೆಯೋ ರಾಘವ

ನೆಲ ಗುದ್ದಿ ನೀರು ತೆಗೆಯುತ್ತೇವೆನ್ನುವವರ ಛಲ, ಒಣಗಿದ ಹಿಂಡಿಯಲ್ಲೂ ಎಣ್ಣೆ ತೆಗೆಯುವ ಕಲೆಗಾರರ ಬಗ್ಗೆ ನಿಮಗೂ ಗೊತ್ತಿರುತ್ತದೆ. ಇನ್ನ ಹಸುವಿನ ಕೆಚ್ಚಲು ಹಿಂಡಿ ಹಾಲು ಕರೆಯುವ ಕಸುಬು ಎಲ್ಲರಿಗೂ ಗೊತ್ತಿರುವಂತದ್ದೆ. ಆದರೆ ಆಕಳನ್ನೇ ಹಿಂಡಿ ಹಣ ಮಾಡುವ ಕಲೆ ಬಗ್ಗೆ ಕೇಳಿದ್ದೀರಾ?

ಅಪ್ರತಿಮ ಗೋರಕ್ಷಕ ಭಾರತೀಪುರ ಮಠದ ರಾಘವೇಶ್ವರ ಸ್ವಾಮಿ ಈಗ ಅಂತಾದೊಂದು ದಂಧೆಗೆ ಚಾಲನೆ ಕೊಟ್ಟಿದ್ದಾನೆ.



ಗೋ ತಳಿಗಳ ರಕ್ಷಣೆಗಾಗಿ ರಾಜ್ಯಾದ್ಯಂತ ಗೋಶಾಲೆ ಸ್ಥಾಪಿಸುವುದಾಗಿ ಹೇಳಿಕೊಂಡು ತಿರುಗುತ್ತಿರುವ ಈ ಬ್ರಾಹ್ಮಣ ವಟು ಮೊನ್ನೆ 'ಗೋವಿನ ಚರ್ಮ ಸುಲಿಯುವವರು, ಗೋಮಾಂಸ ತಿನ್ನುವವರನ್ನು ಶಿಕ್ಷಿಸಿ' ಅಂತೆಲ್ಲಾ ಪಕ್ಕಾ RSS ಹೈದನಂತೆ ಕರೆಕೊಟ್ಟಿದ್ದಾನೆ. ದಲಿತ್ ಪ್ಯಾಂಥರ್ಸ್ ಕಾರ್ಯಕರ್ತರು ಇದನ್ನು ಪ್ರತಿಭಟಿಸಿ ಮೊನ್ನೆ ಟೌನ್‌ಹಾಲ್ ಎದುರು ಸಾರ್ವಜನಿಕವಾಗಿ ಗೋಮಾಂಸ ಬೇಯಿಸಿ ತಿಂದು ರಾಘವನ ಮಠಕ್ಕೇ ನುಗ್ಗಿ ಈ ಕೆಲಸ ಮಾಡುವುದಾಗಿ ಎಚ್ಚರಿಸಿದ್ದಾರೆ.

ಈ ದೇಶದ ಬಹುಸಂಖ್ಯಾತರ ಆಹಾರವಾಗಿರುವ ಗೋಮಾಂಸದ ಬಗ್ಗೆ ಬೇಡ ಅನ್ನಲು ಈ ರಾಘವೇಶ್ವರನಿಗೆ ಹಕ್ಕಿಲ್ಲ ಎಂಬುದೇನೊ ನಿಜ. ಆದರೆ ಇದೇ ರಾಘವೇಶ್ವರ ಈಗ ಇನ್ನೊಂದು ರೀತಿಯಲ್ಲಿ ಗೋವನ್ನೇ ಭಕ್ಷಿಸಲು ಹೊರಟಿದ್ದಾನೆ.

ಅದು ಗೋಶಾಲೆ ಸ್ಥಾಪಿಸಲು ಹಣ ಸಂಗ್ರಹಣೆಗಾಗಿ ಏಜೆಂಟರನ್ನು ನೇಮಿಸಿಕೊಳ್ಳುವುದು. ಈ ಏಜೆಂಟರು ದಾನಿಗಳಿಂದ ಸಂಗ್ರಹಿಸುವ ಹಣದಲ್ಲಿ ಅರ್ಧಭಾಗವನ್ನು ಕಮೀಷನ್ ಎಂದು ಏಜೆಂಟರಿಗೆ ನೀಡಲಾಗುತ್ತಿದೆ. ನಿರುದ್ಯೋಗಿ ಚೆಡ್ಡಿಗಳಿಗೆ ಈಗ ಸುಗ್ಗಿಯೋ ಸುಗ್ಗಿ. ಕಗ್ಗಲಿಪುರದಲ್ಲಿ ಶರ್ಮ ಹಾಗೂ ಪ್ರೇಂಕುಮಾರ್ ಎಂಬ ವಟುಗಳು ಈಗಾಗಲೇ ಲಕ್ಷಾಂತರ ರೂಪಾಯಿ ಕಮಾಯಿಸಿಕೊಂಡಿದ್ದಾರೆ. ಹಿಂದೂ ಧರ್ಮ, ಗೋರಕ್ಷಣೆ, ಗೋವು ತಾಯಿ ಇದ್ದಂತೆ ಎಂದೆಲ್ಲಾ ಜನರ ಸೆಂಟಿಮೆಂಟ್ ಕೆರಳಿಸಿ ಹಣ ಎತ್ತುವುದು, ಅರ್ಧ ತಾವೇ ಮೇಯ್ದು ಉಳಿದರ್ಧ ರಾಘವೇಶ್ವರನಿಗೆ ಮೇಯಲು ಸಾಗಿಸುವುದೇ ಆ ದಂಧೆ.

ಗೋತಳಿ ತಜ್ಞ, ಪಶು ವೈದ್ಯ, ಕೃಷಿ ವಿಜ್ಞಾನಿ ಹೀಗೆ ಯಾವುದೂ ಅಲ್ಲದ ರಾಘವೇಶ್ವರ ಈಗ ಕೋಟ್ಯಾಧೀಶ್ವರ.

ಇಟ್ಟರೆ ಸಗಣಿಯಾದೆ,

ತಟ್ಟಿದರೆ ಬೆರಣಿಯಾದೆ....

ಎನಿಸಿಕೊಂಡಿರುವ ಗೋವು ಈಗ ರಾಘವೇಶ್ವರ ಸ್ವಾಮಿ ಪಾಲಿಗೆ ಚಿನ್ನದ ಗಣಿಯೇ ಆಗಿಹೋಗಿದೆ. ವಂಚನೆಗೆ ಎಷ್ಟು ಮುಖ....!

ಗೌಡರ ಹೊಸ ಮಂತ್ರ


ಗೌಡ-ಮುಸ್ಲಿಂ-ಮಾದಿಗ?

ಗೌಡ-ಮುಸ್ಲಿಂ-ಮಾದಿಗ; ಇದು ದೇವೇಗೌಡರ ಹೊಸ ಸಮೀಕರಣವೇ?

ಏನೇ ಸರ್ಕಸ್ ಮಾಡಿದರೂ ಲಿಂಗಾಯತರು ಮತ್ತು ಕುರುಬರು ಜೆಡಿಎಸ್‌ಗೆ ಓಟು ಹಾಕಲಾರರು. ಯಡ್ಡಿಗೆ ಮುಖ್ಯಮಂತ್ರಿಗಿರಿ ತಪ್ಪಿಸಿದ್ದು ಮಹಾಪರಾಧ ಎಂದು ಚೆಡ್ಡಿ ಮೀಡಿಯಾಗಳು ಅದೆಷ್ಟೇ ಬಾಯಿ ಬಡಕೊಂಡರೂ ವಾಸ್ತವವಾಗಿ ಓಟ್‌ಬ್ಯಾಂಕ್ ರಾಜಕಾರಣವೇ ಬೇರೆ. ಪತ್ರಿಕೆಗಳನ್ನೇ ಓದದ, ಟೀವಿಯನ್ನೇ ನೋಡದ ಹಳ್ಳಿಗಾಡಿನ ಮತದಾರರ ಚುನಾವಣೆ ಸಂದರ್ಭದ ಮನಸ್ಥಿತಿಗೂ ಈಗ ಮಾಧ್ಯಮಗಳು ಸೃಷ್ಟಿಸಿದ ಯಡ್ಡಿ ಪರ ಸಿಂಪಥಿಗೂ ಏನೇನೂ ಸಂಬಂಧವಿಲ್ಲದಂತೆ ಮಾಡುವುದು ದೇವೇಗೌಡರ ತಂತ್ರವಂತೆ.

ಇದೆಲ್ಲವನ್ನೂ ಲೆಕ್ಕ ಹಾಕಿಯೇ ದೇವೇಗೌಡರು ಚುನಾವಣೆಗೆ ಸಜ್ಜಾಗಿದ್ದು ಮತ್ತು ಆ ಕಾರಣಕ್ಕೇ ಯಡ್ಡಿ ವಿರುದ್ಧ ವಿಪ್ ಜಾರಿಗೊಳಿಸಿದ್ದು!

ಅದನ್ನೇ ಗೌಡ-ಮುಸ್ಲಿಂ-ಮಾದಿಗ ಕಾಂಬಿನೇಷನ್ ಎನ್ನುತ್ತದೆ ಗೌಡರ ಆಪ್ತ ವಲಯ. ಇಲ್ಲಿಗೆ ಮೂರು ದಿನದ ಹಿಂದಷ್ಟೇ ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾಂಗ್ರೆಸ್ ನಾಯಕರ ಸಭೆಯಲ್ಲಿ ಇದ್ದಕ್ಕಿದ್ದಂತೆ ಎದ್ದು ನಿಂತ ಕಾಂಗ್ರೆಸ್ ನಾಯಕ ಜಾಫರ್ ಷರೀಫ್ ಮತ್ತು ರೋಷನ್ ಬೇಗ್ ಖರ್ಗೆಯನ್ನುದ್ದೇಶಿಸಿ "ನೀವೇನೇ ಮಾಡಿದ್ರೂ ಮುಸ್ಲಿಮರು ಕಣ್ಣುಮುಚ್ಚಿ ಕಾಂಗ್ರೆಸ್ಸಿಗೆ ಓಟು ಕೊಡ್ತಾರೆ ಅಂತ ತಿಳ್ಕಂಡಿದ್ರೆ ಅದು ಶುದ್ಧ ತಪ್ಪು. ನೀವು ಮುಸ್ಲಿಮರನ್ನು ಮರೆತಿದ್ದೀರಿ....!" ಎಂದಿದ್ದೇ ಜಾಫರ್ ಷರೀಫ್ ಮತ್ತು ರೋಷನ್ ಬೇಗ್ ಅರ್ಧಕ್ಕೇ ಖರ್ಗೆಯ ಸಭೆಯನ್ನು ಬಹಿಷ್ಕರಿಸಿ ಹೊರನಡೆದದ್ದಕ್ಕೂ ದೇವೇಗೌಡರ ಚುನಾವಣಾ ಕಾರ್ಯತಂತ್ರಕ್ಕೂ ಸಂಬಂಧ ಇಲ್ಲದಿಲ್ಲ.



ಚುನಾವಣೆ ಇನ್ನೇನು ಸಮೀಪಿಸುತ್ತಿದೆ ಎನ್ನುವಾಗಲೇ ಜಾಫರ್ ಷರೀಫ್ ಮತ್ತು ರೋಷನ್ ಬೇಗ್ ಕಾಂಗ್ರೆಸ್ ತೊರೆದು ಜೆಡಿಎಸ್‌ಗೆ ಬರುತ್ತಾರೆಂಬುದು ಗೌಡರ ನಿರೀಕ್ಷೆಯಂತೆ.

ಯಡ್ಡಿಗೆ ಅಧಿಕಾರ ತಪ್ಪಿಸಿದ್ದು ಮೇಲುನೋಟಕ್ಕೆ ಎಷ್ಟೇ ಮೋಸವಾಗಿ ಕಂಡರೂ ಆ ಬಗ್ಗೆ ಕಾಂಗ್ರೆಸ್‌ಗೆ ಖುಷಿಯಿದ್ದೇ ಇದೆ. ಬಹುಜನ ಸಮಾಜ ಪಕ್ಷ ಅದನ್ನೀಗಾಗಲೇ ಸ್ವಾಗತಿಸಿದೆ. ಕಮ್ಯುನಿಸ್ಟ್ ಪಕ್ಷಗಳು, ಜನಪರ ಸಂಘಟನೆಗಳು, ದಲಿತರು ಮುಸ್ಲಿಮರು, ಅಲ್ಪಸಂಖ್ಯಾತರೆಲ್ಲರೂ ಪ್ರತ್ಯಕ್ಷವೋ ಪರೋಕ್ಷವೋ ಗೌಡರ ಈ ಕೃತ್ಯವನ್ನು ಖಂಡಿತಾ ಬೆಂಬಲಿಸುತ್ತಾರೆ. ಲಿಂಗಾಯತರು ಮತ್ತು ಬ್ರಾಹ್ಮಣರ ಹೊರತಾಗಿ ಬೇರೆ ಯಾರಾದರೂ ಯಡ್ಡಿಗೆ ಮುಖ್ಯಮಂತ್ರಿಗಿರಿ ತಪ್ಪಿಸಿದ್ದಕ್ಕಾಗಿ ಕಣ್ಣೀರಿಡುತ್ತಿದ್ದಾರಾ?

ಹೇಗಿದ್ದರೂ ಈ ಎರಡು ಜಾತಿಯವರು ಬಿಜೆಪಿಯನ್ನೇ ಬೆಂಬಲಿಸುತ್ತಾರೆ. ಮಿಕ್ಕಂಥೆ ಸಿದ್ದು ಕಾರಣಕ್ಕೆ ಕುರುಬರು ದೂರವಾದರೂ ಮುಸ್ಲಿಮರ ಪೈಕಿ ಕನಿಷ್ಠ ಅರ್ಧದಷ್ಟಾದರೂ ಜೆಡಿಎಸ್ ಬೆಂಬಲಿಸುತ್ತಾರೆ. ಅದರಲ್ಲೂ ಒಕ್ಕಲಿಗರೆಲ್ಲ ಈ ಬಾರಿ ಸಾರಾಸಗಟಾಗಿ ತನ್ನ ಬೆನ್ನಿಗೆ ನಿಂತೇ ನಿಲ್ಲುತ್ತಾರೆ. ಉಳಿದಂತೆ ದಲಿತರ ಅರ್ಧದಷ್ಟು ಓಟುಗಳನ್ನು ಬಿಎಸ್ಪಿ ಕಬಳಿಸುವುದರಿಂದ ಅದು ಕಾಂಗ್ರೆಸ್ಸಿಗೆ ನಷ್ಟವೇ ಹೊರತು ತನಗಲ್ಲ. ಈ ದಲಿತರ ಪೈಕಿ ಬಹುಸಂಖ್ಯಾತ ಎಡಗೈ ಮಾದಿಗರನ್ನೂ ಜೆಡಿಎಸ್ ಬುಟ್ಟಿಗೆ ಹಾಕಿಕೊಳ್ಳಲೆಂದೇ ಕಳೆದೆರಡು ವರ್ಷಗಳಿಂದ ಒಂದಲ್ಲಾ ಒಂದು ಆಮಿಷ ತೋರಿಸುತ್ತಲೇ ಬಂದವರು ದೇವೇಗೌಡ.



ಅದಕ್ಕೆಂದೇ ಗೋನಾಳ್ ಭೀಮಪ್ಪನವರನ್ನು ಲೋಕಸೇವಾ ಆಯೋಗದ ಅಧ್ಯಕ್ಷರನ್ನಾಗಿ ಮಾಡಿದ್ದು, ಎಡಗೈ ದಲಿತ ಐಎಎಸ್‌ಗಳಿಗೆಲ್ಲ ಆಯಕಟ್ಟಿನ ಹುದ್ದೆ ಕಲ್ಪಿಸಿದ್ದು, ಚಿತ್ರದುರ್ಗದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಯವರನ್ನು ಕಂಡಕಂಡಲೆಲ್ಲ ಮೆರೆಸುತ್ತಲೇ ಬಂದದ್ದು ಗೌಡರ ರಾಜಕೀಯದ ನಿಗೂಢ ಲೆಕ್ಕಾಚಾರವಾಗಿತ್ತು.

ಮೆರಾಜುದ್ದೀನ್ ಪಟೇಲರನ್ನು ಜೆಡಿಎಸ್ ಅಧ್ಯಕ್ಷರನ್ನಾಗಿ ಮಾಡಿದಾಗಲೇ ತನ್ನನ್ನು ವಂಚಿಸುವ ಗೌಡರ ತಂತ್ರದ ಸುಳಿವು ಬಿಜೆಪಿಗೆ ಸಿಕ್ಕಿತ್ತು. ಈಗ ಅದು ಅಕ್ಷರಶಃ ನಿಜವಾಗಿದೆ. ಚುನಾವಣೆ ಸಮೀಪಿಸುತ್ತಿದ್ದಂತೆ ಜಾಫರ್ ಷರೀಫ್ ಮತ್ತು ರೋಷನ್ ಬೇಗ್‌ರನ್ನು ಜೆಡಿಎಸ್‌ನತ್ತ ಸೆಳೆದುಬಿಟ್ಟರೆ ಅಲ್ಲಿಗೆ ಗೌಡರ ಅರ್ಧ ಕೆಲಸ ಮುಗಿದಂತಾಗುತ್ತದೆ. ಇಡೀ ಲಿಂಗಾಯತ ಸಮೂಹ ಬಿಜೆಪಿಯ ಬೆನ್ನಿಗೆ ನಿಂತುಬಿಟ್ಟರೆ ಹಳೇ ಮೈಸೂರಿನ ಒಕ್ಕಲಿಗರೆಲ್ಲಾ ಸಾರಾಸಗಟಾಗಿ ದೇವೇಗೌಡರ ಬೆನ್ನಿಗೆ ನಿಲ್ಲುತ್ತಾರೆ. ಜೊತೆಗೆ ಉತ್ತರ ಕರ್ನಾಟಕದಲ್ಲಿ ಗಣನೀಯವಾಗಿರುವ ಮಾದಿಗರೂ ಕೈಜೋಡಿಸಿಬಿಟ್ಟರೆಂದರೆ; ಅಲ್ಲಿಗೆ ದೇವೇಗೌಡರ ಉದ್ದೇಶ ಈಡೇರಿದಂತೆಯೇ.

ಅದೂ ಎಂಥಾ ಲೆಕ್ಕಾಚಾರವೆಂದರೆ ಕರ್ನಾಟಕದ ಒಟ್ಟೂ ನೂರಿಪ್ಪತ್ತು ವಿಧಾನಸಭಾ ಕ್ಷೇತ್ರಗಳನ್ನಷ್ಟೇ ಜೆಡಿಎಸ್ ಆಯ್ದುಕೊಳ್ಳುತ್ತದೆಯಂತೆ. ಈ ನೂರಿಪ್ಪತ್ತು ಕ್ಷೇತ್ರಗಳಲ್ಲಿ ಕನಿಷ್ಠ ಅರವತ್ತು ಸೀಟನ್ನಾದರೂ ಗೆಲ್ಲಲೇಬೇಕೆಂಬುದು ಗೌಡರ ಹುನ್ನಾರ. ಜೆಡಿಎಸ್ ಕನಿಷ್ಠ ಐವತ್ತರಿಂದ ಅರವತ್ತು ಸೀಟು ಗೆದ್ದುಬಿಟ್ಟರೆ once again ಅತಂತ್ರ ವಿಧಾನಸಭೆ ಸೃಷ್ಟಿಯಾಗುತ್ತದೆ. ಆಗ ರೇವಣ್ಣನನ್ನೇ ಮುಖ್ಯಮಂತ್ರಿ ಮಾಡಿ ಎಂದರೂ ಕಾಂಗ್ರೆಸ್‌ಗೆ ಒಪ್ಪದೇ ಬೇರೆ ದಾರಿಯೆಲ್ಲಿದೆ?

ಇದು ಗೌಡರ ಹುನ್ನಾರ. ತಮಾಷೆಯೆಂದರೆ ಈ ದಾರಿಗೆ ಮೊದಲ ಅಡ್ಡಗಾಲೇ ಅವರ ಮಗ ಕುಮಾರಸ್ವಾಮಿ!

ರೇವಣ್ಣನ ಮೇಲಿನ ವ್ಯಾಮೋಹಕ್ಕೆ ಬಿದ್ದೇ ಗೌಡರು ಯಡ್ಡಿಯ ಕಾಲೆಳೆದದ್ದು, ಕುಮಾರಸ್ವಾಮಿ ಬೆಳೆದಷ್ಟೂ ಅದು ಗೌಡರಿಗೆ ಕುತ್ತೆಂದು ಜ್ಯೋತಿಷಿ ವಿಶ್ವಪತಿ ಶಾಸ್ತ್ರಿ ಜ್ಯೋತಿಷ್ಯ ನುಡಿದದ್ದನ್ನು ನಂಬಿಯೇ ದೇವೇಗೌಡರು ತನ್ನ ಅಧಿಕಾರ ತಪ್ಪಿಸಿದರೆಂಬ ಸಿಟ್ಟು ಕುಮಾರಸ್ವಾಮಿಯ ತಲೆ ಹೊಕ್ಕಿದೆ. ಅಪ್ಪನ ಕಪಿಮುಷ್ಟಿಯಿಂದ ಹೊರಬರುವಂತೆ ಮಾಗಡಿ ಬಾಲು, ಚಲುವರಾಯಸ್ವಾಮಿ, ಚಿನ್ನಿಗಪ್ಪನಂಥವರ ಒತ್ತಡವೂ ತೀವ್ರಗೊಂಡಿದೆ.

ಹಾಗೊಮ್ಮೆ ಕುಮಾರಸ್ವಾಮಿ ತನ್ನದೇ ಪ್ರಾದೇಶಿಕ ಪಕ್ಷ ಸ್ಥಾಪಿಸ ಹೊರಟನೆಂದರೆ ಗೌಡರ ಲೆಕ್ಕಾಚಾರವೆಲ್ಲ ಖಂಡಿತ ಉಲ್ಟಾ ಹೊಡೆಯುತ್ತದೆ.

ಅದಾಗದಂತೆ ತಡೆಯಲು ದೇ.ಗೌ. ಬಳಿ ತಾನೇ ಯಾವ ಅಂಕುಶವಿದೆ?

-ರಾ.ಸೋ.

ಎಡಕ್ಕೂ ಬಲಕ್ಕೂ....

(3ನೇ ಪುಟದಿಂದ)

50-50 ಛಾನ್ಸ್ ಅಂತೆ. ಅಕಸ್ಮಾತ್ ನನಗೇನಾದರು ಆದ್ರೆ ನಿರ್ಮಲ ಹೇಗಿರ್‍ತಾಳೆ?" ಎಂದೇ ಕೇಳುತ್ತಿದ್ದರು.

ಡಯಾಬಿಟೀಸ್‌ನಿಂದಾಗುವ ಡಿಪ್ರೆಷನ್‌ಗೆ ನಿರ್ಮಲಾರವರು ಒಳಗಾಗಲಾರಂಭಿಸಿದ ಮೇಲಂತೂ ರಾಮದಾಸರು ಪಟ್ಟಪಾಡು ಅಷ್ಟಿಷ್ಟಲ್ಲ. ಒಮ್ಮೆ ದಾರಿಯಲ್ಲಿ ಸಿಕ್ಕ ವಿದ್ಯಾರ್ಥಿಯೊಬ್ಬನಿಗೆ ತಮ್ಮ ಮೈಮೇಲಿದ್ದ ಒಡವೆಗಳನ್ನೆಲ್ಲ ನೀಡಿ ಹಿಂದಿರುಗಿದ್ದರು ನಿರ್ಮಲ. ಇನ್ನೊಮ್ಮೆ ಮಂಚದ ಅಡಿ ಬಚ್ಚಿಟ್ಟುಕೊಂಡು ಅದೆಷ್ಟೋ ಹೊತ್ತು ಹೊರಬರುವುದಕ್ಕೆ ನಿರಾಕರಿಸಿದ್ದರು. ಇತ್ತೀಚೆಗೆ ಬೆಳಗಿನ ವಾಕಿಂಗ್‌ಗೆಂದು ಹೊರಟು ಮನೆಗೆ ವಾಪಸ್ಸು ಬರುವುದನ್ನೇ ಮರೆಯುವ ಸ್ಥಿತಿ ತಲುಪಿದ್ದರು ನಿರ್ಮಲ.

ನಿರ್ಮಲಾರ ಊಟ, ಔಷಧಿ, ಆರೋಗ್ಯ ದಿನಚರಿ ಎಲ್ಲದರ ಮೇಲೆ ಕಣ್ಣಿಟ್ಟಿದ್ದ ರಾಮದಾಸ್, ಆಕೆಗೆಂದೇ ಬದುಕಿದ್ದ ರಾಮದಾಸ್, ಇದ್ದಕ್ಕಿದ್ದಂತೆ ಕ್ಯಾನ್ಸರ್‌ಗೆ ತುತ್ತಾಗಿ ಕಳೆದ ಜೂನ್ ತಿಂಗಳಲ್ಲಿ ಎಲ್ಲರನ್ನೂ ಅಗಲಿದರು. ಅವರನ್ನೆಂದು ಬಹಳ ದಿನಗಳ ಕಾಲ ಬಿಟ್ಟಿರದಿದ್ದ ನಿರ್ಮಲಾರವರು ಐದು ತಿಂಗಳಲ್ಲೇ ರಾಮದಾಸರ ಜೊತೆಗೂಡಿದ್ದಾರೆ. ಪ್ರಾಯಶಃ ಮದುವೆಯಾದಾಗಿನಿಂದಲೂ ಅವರು ಇಷ್ಟು ದಿನಗಳ ಕಾಲ ಬೇರೆಬೇರೆ ಇದ್ದದ್ದು ಇದೇ ಮೊದಲು ಅನಿಸುತ್ತದೆ.

ಇವರಿಬ್ಬರ ಮಗಳು ಸ್ನೇಹ ಇನ್ನು ಕೆಲವೇ ತಿಂಗಳಲ್ಲಿ ತಾಯಿಯಾಗಲಿದ್ದಾಳೆ. ಆದರೆ ಮೊಮ್ಮಗುವನ್ನು ನೋಡುವ ಸಂತೋಷವನ್ನು ರಾಮದಾಸ್ ಮತ್ತು ನಿರ್ಮಲಾರಿಗೆ ವಿಧಿ ನಿರಾಕರಿಸಿದೆ; ಸ್ನೇಹಾಳನ್ನು ತಬ್ಬಲಿ ಮಾಡಿದೆ.

ತಮ್ಮ ಎಲ್ಲ ಆರೋಗ್ಯದ ಸಮಸ್ಯೆಗಳ ನಡುವೆಯೂ ನಗುನಗುತ್ತಿದ್ದ, ಪ್ರೀತಿಯಿಂದ ನನ್ನನ್ನು ಅಪ್ಪಿಕೊಳ್ಳುತ್ತಿದ್ದ ನಿರ್ಮಲಾರಿಗೆ ನನ್ನ ನಮನ.

* * * * * * *

"ಇದೆಂತಹ ವಿಪರ್ಯಾಸ ನೋಡಿ. ದೇವರು, ಧರ್ಮ ಎಂಬುದೇ ಇಲ್ಲ ಎನ್ನುವ ಕಮ್ಯುನಿಸ್ಟರು ಅಧಿಕಾರದಲ್ಲಿರುವ ಪಶ್ಚಿಮ ಬಂಗಾಳದಿಂದ ತಸ್ಲಿಮಾ ನಸ್ರೀನ್ ಎಂಬ ಲೇಖಕಿಯನ್ನು ಓಡಿಸಲಾಗಿದೆ. ಆಕೆಗೆ ಈಗ ಆಶ್ರಯ ನೀಡಿರುವುದು ದೇವರು, ಧರ್ಮ ಎಂಬವುಗಳನ್ನೇ ಬಂಡವಾಳ ಮಾಡಿಕೊಂಡಿರುವ ಬಿಜೆಪಿ ಅಧಿಕಾರದಲ್ಲಿರುವ ರಾಜಸ್ಥಾನ ಸರ್ಕಾರ! ಇದಕ್ಕೆ ಕಾರಣ ಇಲ್ಲದಿಲ್ಲ. ಕಮ್ಯುನಿಸ್ಟರಿಗೆ ಮೂಲಭೂತವಾದಿ ಮುಸ್ಲಿಮರ ವೋಟುಗಳು ಬೇಕು; ಹಿಂದೂತ್ವವಾದಿ ಬಿಜೆಪಿಗಳಿಗೆ ಮುಸಲ್ಮಾನ್ ಮೂಲಭೂತವಾದವನ್ನು ಖಂಡಿಸುವ ತಸ್ಲಿಮಾ ನಸ್ರೀನ್‌ರಂತಹ ಮುಸಲ್ಮಾನ್ ಮಹಿಳೆ ಬೇಕು!

ಇವತ್ತು ತಸ್ಲಿಮಾ ನಸ್ರೀನ್‌ರನ್ನು ಚೆಂಡಿನಂತೆ ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಒದೆಯುತ್ತಿದ್ದರೆ ಅದಕ್ಕೆ ಮೂಲಕಾರಣ ಪಶ್ಚಿಮ ಬಂಗಾಳದ ಕಮ್ಯುನಿಸ್ಟರು. ಆಕೆ 1994 ರಿಂದ ಭಾರತದಲ್ಲೇ ವಾಸಿಸುತ್ತಿದ್ದರೂ, ಬೆಂಗಾಳಿಗಳೇ ಇರುವ ಕೊಲ್ಕತ್ತಾದಲ್ಲೇ ಬೆಂಗಾಳಿ ಬರಹಗಾರ್ತಿಯಾದ ತಸ್ಲಿಮಾ ವಾಸಿಸುತ್ತಿದ್ದರೂ ಆಕೆಗೆ ಪಶ್ಚಿಮ ಬಂಗಾಳದ ಸರ್ಕಾರ ಇದುವರೆಗೂ ಪೌರತ್ವವನ್ನಾಗಲಿ, ಶಾಶ್ವತ ನಿವಾಸಿ ಸ್ಥಾನವನ್ನಾಗಲೀ ನೀಡಲು ಒಪ್ಪಿಗೆ ನೀಡಿಲ್ಲ. ರಾಜ್ಯ ಸರ್ಕಾರ ಅನುಮತಿ ನೀಡಿದರೆ ಮಾತ್ರ ಕೇಂದ್ರ ಸರ್ಕಾರ ಆಕೆಗೆ ಪೌರತ್ವವನ್ನು ನೀಡಬಹುದು. ಆದರೆ ಮೂಲಭೂತವಾದಿ ಮುಸಲ್ಮಾನರನ್ನು ಸಂತುಷ್ಟಗೊಳಿಸುವ ಉದ್ದೇಶದಿಂದ ಇವತ್ತಿನವರೆಗೂ ಪಶ್ಚಿಮ ಬಂಗಾಳ ಸರ್ಕಾರ ಅದನ್ನು ನಿರಾಕರಿಸಿದೆ. ಆದ್ದರಿಂದ ಕೇಂದ್ರ ಸರ್ಕಾರ ಆಕೆಯ ವೀಸಾ ಅನ್ನು ಆರು ತಿಂಗಳಿಗೊಮ್ಮೆ ಪರಿಷ್ಕರಿಸುತ್ತಾ ಬಂದಿದೆ.

ಇನ್ನೆರಡು ತಿಂಗಳಲ್ಲಿ ಆಕೆಯ ವೀಸಾ ಕೊನೆಗೊಳ್ಳಲಿದ್ದು ಅದನ್ನು ಮತ್ತೆ ವಿಸ್ತರಿಸಬೇಕಿದೆ. ಆದರೆ ಹಾಗೆ ಮಾಡದೆ ಆಕೆಯನ್ನು ದೇಶದಿಂದಲೇ ಒದ್ದೋಡಿಸಬೇಕೆಂದು ಹಲ ಮುಸ್ಲಿಮ್ ಮೂಲಭೂತವಾದಿಗಳು ಕೊಲ್ಕತ್ತಾದಲ್ಲಿ ಗಲಭೆ ನಡೆಸಿವೆ. ಪ್ರಜಾಪ್ರಭುತ್ವದಲ್ಲಿ ಮತ್ತೊಬ್ಬರ ಅಭಿಪ್ರಾಯ ನಮಗೆ ಸರಿ ಎನ್ನಿಸದಿದ್ದರೂ ಅವರಿಗೆ ಅದನ್ನು ವ್ಯಕ್ತಪಡಿಸುವ ಹಕ್ಕು ಇದ್ದೇ ಇರಬೇಕು. ಹಿಂದೂತ್ವವಾದಿಗಳ ವಿರುದ್ಧವೂ ನಮ್ಮ ನಿಲುವು ಇದೇ ಆಗಿದೆ. ಈ ಎಲ್ಲ ಹಿನ್ನೆಲೆಗಳಲ್ಲಿ ತಸ್ಲಿಮಾ ನಸ್ರೀನ್‌ರ ವೀಸಾವನ್ನು ವಿಸ್ತರಿಸಿ ಆಕೆಗೆ ನಮ್ಮ ಪ್ರಜಾಪ್ರಭುತ್ವ ದೇಶದಲ್ಲಿ ಆಶ್ರಯವನ್ನು ಖಂಡಿತವಾಗಿ ನೀಡಬೇಕಿದೆ.

-ಗೌರಿ ಲಂಕೇಶ್

ಕೊನೆಗೂ ಸಿಕ್ಕಿಬಿದ್ದ ರೆಡ್ಡಿ

(3ನೇ ಪುಟದಿಂದ)

ಸಲ್ಲಿಸಿದಾಗ ವಿಭಾಗೀಯ ಪೀಠ ಹೈಕೋರ್ಟ್ ತೀರ್ಪನ್ನೇ ಎತ್ತಿಹಿಡಿಯಿತು. ರೆಡ್ಡಿ ಛಲಬಿಡದ ತ್ರಿವಿಕ್ರಮನಂತೆ ಸುಪ್ರೀಂಕೋರ್ಟ್ ಮೊರೆ ಹೋದ. ಸುಪ್ರೀಂ ಕೋರ್ಟ್ ರೆಡ್ಡಿ ಮರುನೇಮಕಕ್ಕೇ ಅನರ್ಹ ಎಂದು ಆದೇಶಿಸಿತು. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ತಾವು ರಾಜೀನಾಮೆ ನೀಡುವ ಮುನ್ನಾ ದಿನಗಳಲ್ಲಿ ಬಿ. ಶ್ರೀನಿವಾಸರೆಡ್ಡಿಯನ್ನು ವ್ಯವಸ್ಥಾಪಕ ನಿರ್ದೇಶಕರನ್ನಾಗಿ ನೇಮಕ ಮಾಡಬೇಕೆಂದು ಆದೇಶಿಸಿದ್ದರು. ಕುಮಾರಣ್ಣ 'ಇದಕ್ಕೆಷ್ಟು ಲಂಚ ಕಿತ್ತರೋ ಗೊತ್ತಿಲ್ಲ.

ಬೆಂಗಳೂರಿನಲ್ಲೇ ಠಿಕಾಣಿ

ಸುಮಾರು 27 ವರ್ಷಗಳಷ್ಟು ಸುದೀರ್ಘ ಕಾಲ ಬೆಂಗಳೂರಿನಲ್ಲೇ ಠಿಕಾಣಿ ಹೂಡಿ 'ಅಮೋಘ' ಸೇವೆ ಸಲ್ಲಿಸಿರುವ ರೆಡ್ಡಿ ತನ್ನ ಅಧಿಕಾರವಧಿಯಲ್ಲಿ ನಡೆಸಿರುವ ಬಾನಗಡಿಗಳು ಒಂದೆರಡಲ್ಲ.

ಎಸ್.ಎಂ. ಕೃಷ್ಣರ ಅವಧಿಯಲ್ಲೇ ಈತನ ಒಲೈಕೆ ಕಾರ್ಯಶೈಲಿ ಯಾವ ಅತಿಗೆ ಹೋಯಿತೆಂದರೆ ತನಗಿಚ್ಛೆ ಬಂದಂತೆ ಉಪವಿಭಾಗಗಳನ್ನು ತೆರೆದುಬಿಟ್ಟ. ಬಿ.ಬಿ. ಚಿಮ್ಮನಕಟ್ಟಿ ಒಲೈಕೆಗೆ ಬಾಗಲಕೋಟೆ ವಿಭಾಗ, ಎಂ.ಎಸ್. ಪಾಟೀಲರ ಒಲೈಕೆಗೆ ರಾಯಚೂರು ವಿಭಾಗ, ಎಸ್.ಎಂ. ಕೃಷ್ಣರನ್ನು ಸಂತೃಪ್ತಿಪಡಿಸಲು ಮದ್ದೂರು ವಿಭಾಗ, ಮಂಡ್ಯ ವಿಭಾಗ, ಚಿತ್ರದುರ್ಗ ಉಪವಿಭಾಗ ಹೀಗೆ ಕಾರ್ಯಾರಂಭವಾದವು.



ಸದಾಶಿವನಗರದಲ್ಲಿರುವ ಶ್ರೀನಿವಾಸರೆಡ್ಡಿಯ ಬಂಗಲೆ

ತನ್ನ ನಿರ್ದೇಶಕಗಿರಿಯುದ್ದಕ್ಕೂ ಜಲಮಂಡಳಿಯ ನೌಕರರನ್ನು ಇನ್ನಿಲ್ಲದಂತೆ ಗೋಳು ಹುಯ್ದುಕೊಂಡು ಇತಿಹಾಸ ಸೃಷ್ಟಿಸಿದ್ದಾನೆ. ಇಚ್ಛೆ ಬಂದ ಕಡೆ ವರ್ಗಾವಣೆ ಮಾಡುವುದು, ಅಮಾನತು ಮಾಡುವುದು, ವಜಾ ಮಾಡುತ್ತ ಇಡೀ ನೌಕರರ ವೃಂದವನ್ನು ಸದಾ ಆತಂಕದ-ಅಭದ್ರತೆಯ ಸ್ಥಿತಿಯಲ್ಲಿಟ್ಟು ಕುಖ್ಯಾತಿ ಯನ್ನು ಮೈಗಂಟಿಸಿಕೊಂಡಿದ್ದ ಈ ಶ್ರೀನಿವಾಸರೆಡ್ಡಿ.

2000 ರಲ್ಲಿ ತನ್ನ ಸ್ವಜಾತಿಗೆ ಸೇರಿದ ಏಳೆಂಟು ಮಂದಿಯನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ಸಹಾಯಕ ಇಂಜಿನಿಯರುಗಳನ್ನಾಗಿ ನೇಮಿಸಿಕೊಂಡಿದ್ದ. ಇದಲ್ಲದೇ ಆಡಳಿತಾತ್ಮಕ ಅಗತ್ಯಗಳ ಹೆಸರಲ್ಲಿ ತನಗೆ ಬೇಕಾದವರನ್ನು, ಸ್ವಜಾತಿಗೆ ಸೇರಿದ 25 ಮಂದಿ ಡಾಟಾ ಎಂಟ್ರಿ ಆಪರೇಟರ್‌ಗಳು, ಚಾಲಕರುಗಳನ್ನು ನೇರವಾಗಿ ನೇಮಕಾತಿ ಮಾಡಿಕೊಂಡಿದ್ದ.

ಮಂಡಳಿಯಲ್ಲಿ ಶ್ರೀನಿವಾಸರೆಡ್ಡಿಯ ಆಕ್ಟೋಪಸ್ ಹಿಡಿತಕ್ಕೆ ಹೆದರಿ ಸೇವಾಜೇಷ್ಠತೆಯಲ್ಲಿ ಈತನಿಗಿಂತಲೂ ಹಿರಿಯರಾಗಿದ್ದ ಎ.ಕೆ. ಪ್ರಭಾಕರ್, ಡಿ.ಎಸ್. ನಾಗರಾಜರಾವ್, ಎಸ್. ವಿಶ್ವನಾಥ್‌ರವರುಗಳು ಈತನ ಕೆಳಹುದ್ದೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದರು. ಎಸ್. ರಾಮಮೂರ್ತಿ ಎಂಬುವವರು ಇನ್ನೂ ಒಂದೂವರೆ ವರ್ಷ ಸೇವೆ ಇದ್ದಾಗಲೇ ಸ್ವಯಂ ನಿವೃತ್ತಿ ಪಡೆದರು.

ರೆಡ್ಡಿ ಈಗಲಾದರೂ ಲೋಕಾಯುಕ್ತರ ಬಲೆಗೆ ಬಿದ್ದಿದ್ದಾನೆ. ಈತನ ನಡೆಸಿರುವ ಬಾನಗಡಿಗಳ ಇಂಚಿಂಚೂ ಮಾಹಿತಿ ಇದ್ದು ಯಾವ ಸರ್ಕಾರವೂ ಈತನಿಗೆ ಕಡಿವಾಣ ಹಾಕಲಿಲ್ಲವೆಂದರೆ ತಪ್ಪು ಶ್ರೀನಿವಾಸ ರೆಡ್ಡಿಯದ್ದು ಮಾತ್ರವೋ? ರೆಡ್ಡಿಯಂಥವನ ಮಟ್ಟಿಗಿನ ಭ್ರಷ್ಟತೆ ಸಹಿಸಿಕೊಂಡು ಬಂದ ಧೀಮಂತ ನಾಯಕರುಗಳ ... ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ.

-ಅತೋಬಲ

ಧಾರವಾಡ ಜೈಲ್: ಹೆಬ್ಬೆಟ್ ಮಂಜನಿಗೆ ಕೊರಂಗು ಸ್ಕೆಚ್


ಕುಖ್ಯಾತ ಭೂಗತ ಪಾತಕಿ ಹೆಬ್ಬೆಟ್ ಮಂಜ ಧಾರವಾಡ ಜೈಲಿನಲ್ಲಿರುವ ತನಕ ಅದಕ್ಕೆ ಅಂಟಿಕೊಂಡಿರುವ ಕಿರಿಕಾಟ ದೂರವಾಗುವಂತೆ ಕಾಣುತ್ತಿಲ್ಲ. ತನ್ನ ತಲೆ ತೆಗೆಯಲು ಬೆಂಗಳೂರಿನ ಕೊರಂಗು ಗ್ಯಾಂಗ್ ಸ್ಕೆಚ್ ಹಾಕಿ ಮಚ್ಚು ಮಸೆಯುತ್ತಿರುವ ಸುದ್ದಿ ತಿಳಿದ ಮೇಲಂತೂ ಧಾರವಾಡ ಜೈಲಿನ ನಾಲ್ಕನೇ ಬ್ಯಾರಕ್‌ನಲ್ಲಿ ಹೆಬ್ಬೆಟ್ ಮಂಜ 'ಕದಮ್ ತಾಲ್' ಶುರು ಮಾಡಿದ್ದಾನೆ; ತನ್ನ ಸೆಕ್ಯೂರಿಟಿಗಾಗಿ ಅಮಾಯಕರನ್ನೇ ಸೆಕ್ಯುರಿಟಿ ಗಾರ್ಡ್ ತಂದು ನಿಲ್ಲಿಸಿದ್ದಾನೆ.


ಹೆಬ್ಬೆಟ್ಟು ಮಂಜ

ಈಗ್ಗೆ ಸುಮಾರು ನಾಲ್ಕು ತಿಂಗಳ ಹಿಂದೆ ಧಾರವಾಡದ ಉಪಕಾರಾಗೃಹದಲ್ಲಿರುವ ಹೆಬ್ಬೆಟ್ ಮಂಜನ ಬ್ಯಾರಕ್‌ನಲ್ಲಿ ಗನ್, ಹಲವಾರು ಬುಲೆಟ್‌ಗಳು, ಎಂಟ್ಹತ್ತು ಮೊಬೈಲ್ ಫೋನ್‌ಗಳು ಸಿಕ್ಕಿ ರಾಜ್ಯಾದ್ಯಂತ ಸುದ್ದಿಯಾಗಿತ್ತು. ಅದನ್ನು ಒಂಚೂರು ಕೆದಕಿ ನೋಡಿದರೆ ಧಾರವಾಡ ಜೈಲಿನಲ್ಲಿ ಗ್ಯಾಂಗ್‌ವಾರ್ ನಡೆಸುವುದಕ್ಕೆ ಮೊದಲು ಟಾರ್ಗೆಟ್ ಮಾಡಿದ್ದು ಜೈಲರ್ ಲಕ್ಷ್ಮೀನಾರಾಯಣನನ್ನೆ.

ಜೈಲರ್ ಲಕ್ಷ್ಮೀನಾರಾಯಣ ಇಲ್ಲಿಂದ ಎತ್ತಂಗಡಿಯಾದರೆ ತಾನು ಸೇಫಾಗಬಹುದು ಎಂದುಕೊಂಡು ಎತ್ತಂಗಡಿ ಮಾಡಿಸುವುದಕ್ಕೆ ಏನೇನು ಮಾಡಬಹುದೋ ಅದನ್ನೆಲ್ಲಾ ಮಾಡತೊಡಗಿದ. ಲಕ್ಷ್ಮೀನಾರಾಯಣನ ಅವ್ಯವಹಾರಗಳನ್ನೆಲ್ಲಾ ತನ್ನ ಮೊಬೈಲ್‌ನ ಕ್ಯಾಮರಾದಲ್ಲಿ ಗುಪ್ತವಾಗಿ ಸೆರೆಹಿಡಿದ. ಲಕ್ಷ್ಮೀನಾರಾಯಣನ ಹೆಂಡತಿ ಮಕ್ಕಳ ಬಟ್ಟೆಗಳನ್ನು ಕೈದಿಗಳು ಇಸ್ತ್ರಿ ಮಾಡುತ್ತಿರುವುದರಿಂದ ಹಿಡಿದು ಜೈಲೊಳಗೆ ಗಾಂಜಾ, ಅಫೀಮುಗಳು ಸರಬರಾಜಾಗುತ್ತಿರುವುದರ ತನಕ ಎಲ್ಲವನ್ನೂ ಚಿತ್ರೀಕರಿಸಿಕೊಂಡು, ಹೊರಗಿನವರ ಸಹಾಯದಿಂದ ಅದನ್ನೆಲ್ಲಾ ಒಂದು ಸಿಡಿ ಮಾಡಿಸಿ, ಆ ಸಿಡಿಯ ಪ್ರತಿಗಳನ್ನು ಉನ್ನತ ಅಧಿಕಾರಿಗಳಿಗೆ ಕೊರಿಯರ್ ಮೂಲಕ ಕಳಿಸಿಬಿಟ್ಟ. ಈ ಸಿಡಿಯನ್ನು ಅವುಗಳನ್ನೆಲ್ಲ ಇಟ್ಟುಕೊಳ್ಳಲಾಗಿತ್ತು ಎಂಬ ಅಂಶ ಸ್ಪಷ್ಟವಾಗಿ ಕಾಣುತ್ತದೆ.

ಹೆಬ್ಬೆಟ್ ಮಂಜನನ್ನು ಮುಗಿಸುವುದಕ್ಕಾಗಿ ಕೊರಂಗು ಅಂದು ಕಾರಾಗೃಹದ ಜೈಲರ್ ಕುರ್ಚಿಯಲ್ಲಿ ವಿರಮಿಸುತ್ತಿದ್ದ ಪರಮ ಹೊಟ್ಟೆಬಾಕ ಲಕ್ಷ್ಮೀನಾರಾಯಣನೊಂದಿಗೆ ಡೀಲ್ ಕುದುರಿಸಿದ್ದ. ಇದರ ವಾಸನೆಯನ್ನು ಹೆಬ್ಬೆಟ್ ಮಂಜ ಹೇಗೋ ಹಿಡಿದುಬಿಟ್ಟ. ಕೊರಂಗುನಿಂದ ಸೇಫಾಗುಳಿಯುವುದಕ್ಕಾಗಿ ಹೊರಗಿನಿಂದ ರಿವಾಲ್ವಾರ್, ಗುಂಡುಗಳು, ಮೊಬೈಲ್‌ಗಳನ್ನು ತರಿಸಿಟ್ಟುಕೊಂಡ.


ಮುಲಾಮ

ಹೆಬ್ಬೆಟ್ ಮಂಜ ಜೈಲಿನಲ್ಲಿ ಗ್ಯಾಂಗ್‌ವಾರ್ ಸಾಮಗ್ರಿಗಳನ್ನು ಸಂಗ್ರಹಿಸುತ್ತಿರುವುದರ ಸುಳಿವು ಜೈಲರ್ ಲಕ್ಷ್ಮೀನಾರಾಯಣನಿಗೆ ಗೊತ್ತಾಗಿಬಿಟ್ಟಿತು. ತಕ್ಷಣ ಜಾಗೃತನಾದ ಈತ ಪೊಲೀಸರಿಂದ ರೇಡ್ ಮಾಡಿಸಿ ಹೆಬ್ಬೆಟ್ ಮಂಜನ ಸಾಮಗ್ರಿಗಳನ್ನೆಲ್ಲ ವಶಪಡಿಸಿಕೊಂಡುಬಿಟ್ಟ.

ಮೂಲತಃ ಶಿವಮೊಗ್ಗದವನಾದ ಹೆಬ್ಬೆಟ್ ಮಂಜ ಆವಸರಗೇಡಿ ಸ್ವಭಾವದವನು. ಈ ತಿಕ್ಕಲುತನವೇ ಅವನನ್ನು ಅಪರಾಧ ಜಗತ್ತಿಗೆ ದೂಡಿತು. ಶಿವಮೊಗ್ಗದಲ್ಲಿ ಮೆಕಾನಿಕ್ ಕೆಲಸ ಮಾಡಿಕೊಂಡಿದ್ದ ಈತ ಅದ್ಯಾವುದೋ ಆತುರದ ಕ್ಷಣದಲ್ಲಿ ರಾದ್ಧಾಂತ ಮಾಡಿಕೊಂಡು ಭೂಗತ ಲೋಕದೊಂದಿಗೆ ಸಂಪರ್ಕ ಸಾಧಿಸಿಬಿಟ್ಟ. ಹೆಬ್ಬೆಟ್ ಮಂಜನ ಪ್ರತಿಯೊಂದು ದುಷ್ಕೃತ್ಯದಲ್ಲಿ ಅವನ ಬೆನ್ನಿಗೆ ನಿಂತವನು ಮುಲಾಮ ಎಂಬ ಇನ್ನೊಬ್ಬ ಹಂತಕ. ಅಲ್ಲಿಂದ ಇಲ್ಲಿಯತನಕ ಮುಲಾಮನೇ ಹೆಬ್ಬೆಟ್ ಮಂಜನ ಅಪರಾಧ ಜಗತ್ತಿನ ಗುರುವಾಗಿದ್ದಾನೆ.

ಅದೊಂದು ಮುಲಾಮನ ಆಣತಿಯಂತೆ ಹೆಬ್ಬೆಟ್ ಮಂಜ ರೌಡಿ ಕೊರಂಗು ಕೃಷ್ಣನ ಮೇಲೆ ಮಚ್ಚು ಬೀಸಿದ್ದ. ಕೊರಂಗುನ ಅದೃಷ್ಟವೋ ಏನೋ ಅಂದು ಆತನಿಗೆ ಚಿಕ್ಕದೊಂದು ಗಾಯ ಮಾತ್ರ ಆಗಿ ಬದುಕುಳಿದುಬಿಟ್ಟ; ಹೆಬ್ಬೆಟ್ ಮಂಜನನ್ನು ಮುಗಿಸಿಯೇ ತೀರುತ್ತೇನೆಂದು ಶಪಥ ಅಂದೇ ಮಾಡಿದ.



ನಾರಾಯಣ ನಡುಮನಿ ಮತ್ತು ಲಕ್ಷ್ಮೀನಾರಾಯಣ

ಕೊರಂಗುನ ಮೇಲೆ ದಾಳಿ ಮಾಡಿದ್ದರಿಂದ ಪೊಲೀಸರು ಮಂಜನನ್ನು ಹಿಡಿದು ಜೈಲಿಗಟ್ಟಿದರು. ಇನ್ನೇನು ತನಗೆ ಜೈಲಿನಲ್ಲಿ ಯಾವುದೇ ಅಪಾಯವಿಲ್ಲವೆಂದುಕೊಂಡಿದ್ದ ಮಂಜನಿಗೆ ಮತ್ತೊಂದು ಮಚ್ಚು ಕಾದಿತ್ತು. ತನ್ನನ್ನು ಮುಗಿಸಲು ಭಯಾನಕವಾದ ಸ್ಕೆಚ್ ತಯಾರಿಸಿಟ್ಟು ಕೊರಂಗು ಚಿತ್ರದುರ್ಗ ಜೈಲು ಸೇರಿದ್ದು ಹೆಬ್ಬೆಟ್ ಮಂಜನಿಗೆ ಗೊತ್ತೇ ಇರಲಿಲ್ಲ. ಹೆಬ್ಬೆಟ್ ಮಂಜನ ಕತ್ತು ಕೊಯ್ಯಲು ಅವನ ಶಿಷ್ಯ ಲೋಕಿ ಅಲಿಯಾಸ್ ಲೋಕೇಶ್‌ನೊಂದಿಗೇನೇ ಕೊರಂಗು ಡೀಲ್ ಕುದುರಿಸಿದ್ದ. ಅದೊಂದು ದಿನ ಮಂಜ ಮಲಗಿರುವಾಗ ಸೈನೈಡ್ ಮೆತ್ತಿದ ಚಾಕುವಿನಿಂದ ಇರಿದು ಸಾಯಿಸುವುದಕ್ಕೆ ಲೋಕಿ ಮುಂದಾಗಿದ್ದ. ಆ ಟೈಮಲ್ಲಿ ಅವನಿಗೆ ಅದೇನು ಹೊಳೆಯಿತೋ ಗೊತ್ತಿಲ್ಲ, ಲೋಕಿ ಹೆಬ್ಬೆಟ್ ಮಂಜನನ್ನು ಕೊಲ್ಲದೇ ಅವನನ್ನು ಎಬ್ಬಿಸಿ ಎಲ್ಲಾ ಹೇಳಿಬಿಟ್ಟ. ಆವಾಗಲೇ ಮಂಜನಿಗೆ ಕೊರಂಗುನಿಂದ ಇರುವ ಆಪತ್ತಿನ ತೀವ್ರತೆಯ ಅರಿವಾದದ್ದು.

ಅಲ್ಲಿಂದಾಚೆಗೆ ಆತ ಪ್ರತಿಯೊಂದು ಹೆಜ್ಜೆಯನ್ನು ಬಹಳ ಎಚ್ಚರಿಕೆಯಿಂದ ಇಡತೊಡಗಿದ. ಅಷ್ಟುಹೊತ್ತಿಗಾಗಲೇ ಸೆಕ್ಯೂರಿಟಿ ಕಾರಣ ಕೊಟ್ಟು ಹೆಬ್ಬೆಟ್ ಮಂಜನನ್ನು ಧಾರವಾಡ ಜೈಲಿಗೆ ಅಟ್ಟಿದ ಶಿವಮೊಗ್ಗದ ಜೈಲು ಅಧಿಕಾರಿಗಳು ನಿರಾಳವಾದರು.

ಧಾರವಾಡದ ಜೈಲು ಹೆಬ್ಬೆಟ್ ಮಂಜನಿಗೆ ಹೇಳಿ ಮಾಡಿಸಿದಂತಿತ್ತು. ಇವನ ವಿರೋಧಿಗಳ ಸಣ್ಣ ನೆರಳೂ ಕೂಡ ಇಲ್ಲಿ ಸುಳಿಯಲು ಅವಕಾಶವಿರಲಿಲ್ಲ. ಅವರೆಲ್ಲರೂ ಚಿತ್ರದುರ್ಗ, ಪರಪ್ಪನ ಅಗ್ರಹಾರ, ಬಳ್ಳಾರಿ ಜೈಲುಗಳ ಪಾಲಾಗಿದ್ದರು. ಇದರಿಂದಾಗಿಯೇ ಮಂಜ ನಿರುಮ್ಮಳವಾಗಿ ಧಾರವಾಡ ಜೈಲಿನಲ್ಲಿ ಮಜಾ ಮಾಡುತ್ತಿದ್ದ. ಆದರೆ, ಕೊರಂಗು ಎಂಬ ಬೇತಾಳ ಅವನ ಬೆನ್ನು ಬಿಡಬೇಕಲ್ಲ? ಕೊರಂಗು ಕೃಷ್ಣ ತನ್ನ ಹೊರಗಿರುವ ಕಾಂಟ್ಯಾಕ್ಟ್‌ಗಳನ್ನು ಬಳಸಿಕೊಂಡು ಧಾರವಾಡ ಜೈಲರ್ ಲಕ್ಷ್ಮೀನಾರಾಯಣನೊಂದಿಗೆ ಡೀಲ್ ಕುದುರಿಸಿದ. ನಂತರ ಮಂಜನನ್ನು ಖತಂ ಮಾಡಲು ಕಲಘಟಗಿಯ ಪ್ರಕರಣ ಒಂದರಲ್ಲಿ ಬಂಧಿಯಾಗಿದ್ದ ಶಿವಪ್ಪನನ್ನು ಬಳಸಿಕೊಳ್ಳುವ ತಯಾರಿಯೂ ನಡೆಯಿತು. ಇದರ ವಾಸನೆ ಹಿಡಿದ ಮಂಜ ಮತ್ತೆ ನೆಮ್ಮದಿಯ ನಿದ್ದೆಯಿಂದ ಹೊರಬಿದ್ದ. ಅಂದಿನಿಂದ ಆತ ಉನ್ನತ ಅಧಿಕಾರಿಗಳು ನೋಡುತ್ತಿರುವಾಗಲೇ ಇತ್ತ ಲಕ್ಷ್ಮೀನಾರಾಯಣ ಹೊಸದೊಂದು ಕತೆ ಸೃಷ್ಟಿ ಮಾಡಿದ್ದ.

"ನನ್ನ ಕೈಕೆಳಗಿರುವ ಅಧಿಕಾರಿಗಳು ಸಮರ್ಥವಾಗಿ ಕಾರ್ಯನಿರ್ವಹಿಸದೇ ಜೈಲನ್ನು ಅರಾಜಕ ಸ್ಥಿತಿಗೆ ತಂದಿಟ್ಟಿದ್ದಾರೆ. ಅವರ ಬೇಜವಾಬ್ದಾರಿಯಿಂದಾಗಿ ಜೈಲಿನೊಳಗಡೆ ಶಸ್ತ್ರಾಸ್ತ್ರಗಳು, ಮಾದಕ ವಸ್ತುಗಳು ಸರಬರಾಜಾಗುತ್ತಿವೆ" ಎಂಬ ಒಂದು ರಿಪೋರ್ಟ್ ತಯಾರಿಸಿದ. ಪೊಲೀಸ್ ಕಮೀಷನರ್ ನಾರಾಯಣ ನಡುಮನಿ ಇದಕ್ಕೆ ತಲೆಯಲ್ಲಾಡಿಸಿ ವಿದ್ಯಾಗಿರಿ ಪೊಲೀಸ್ ಠಾಣೆಯ ಎಸ್ಸೈ ಮುರುಗೋಡ್ ಅವರಿಗೆ ವಿಚಾರಣೆ ನಡೆಸುವಂತೆ ಹೇಳಿದ. ಇಲ್ಲಿನ ಅವ್ಯವಹಾರಗಳ ಬಗ್ಗೆ ಎಲ್ಲ ಗೊತ್ತಿದ್ದರೂ ಮಳ್ಳನಂತೆ ತನಿಖಾ ನಾಟಕವಾಡಿದ ಮುರಗೋಡ್ ಲಕ್ಷ್ಮೀನಾರಾಯಣನನ್ನು ಬಚಾವ್ ಮಾಡಿ ಎಲ್ಲಾ ಅಪರಾಧಗಳನ್ನು ಜೈಲಿನ ಸಿಬ್ಬಂದಿಗಳಾದ ಜಾಫರ್‌ಸಾಬ್ ಸೈಯದ್, ಮುಖ್ಯ ವಾರ್ಡನ್‌ಗಳಾದ ಸಿದ್ರಾಮಯ್ಯ ಗರಜನಾಳ, ಮಹ್ಮದ್ ಫಾರೂಕ್ ಹಾಗೂ ಮುಖ್ಯ ಕಾವಲುಗಾರ ಶಂಕರ್ ರಾಠೋಡ್‌ರ ತಲೆಗೆ ಕಟ್ಟಿದ. ಮಂಜನ ಸಿಡಿಯಿಂದ ಬಚಾವಾಗಿದ್ದೇನೋ ಆಯಿತು, ಆದರೆ ಅವನ ಮಚ್ಚಿನಿಂದ ಬಚಾವಾಗುವುದು ಹೇಗೆ ಎಂಬ ಅನುಮಾನ ಲಕ್ಷ್ಮೀನಾರಾಯಣನನ್ನು ಕಾಡಿರಬೇಕು. ಹಾಗಾಗಿ ಕಳೆದ ಹದಿನೈದು ದಿನಗಳ ಅಂತರದಲ್ಲಿಯೇ ಬೇರೆಕಡೆ ವರ್ಗಮಾಡಿಸಿಕೊಂಡು ಜಾಗ ಖಾಲಿ ಮಾಡಿದ್ದಾನೆ.


ಕೊರಂಗು

ಒಟ್ಟಿನಲ್ಲಿ ಕೊರಂಗುನ ಎರಡನೇ ಪ್ಲಾನ್ ಕೂಡ ಫ್ಲಾಪ್ ಆಗಿದೆ. ಆದರೆ, ಹೆಬ್ಬೆಟ್ ಮಂಜನಿಗೆ ಚೆನ್ನಾಗಿ ಗೊತ್ತು, ಕೊರಂಗು ಬೇತಾಳನಂತೆ ತನ್ನ ಹಿಂದೆ ಬಿದ್ದಿದ್ದಾನೆಂದು. ಇಂದಲ್ಲ ನಾಳೆ ಅವರಿಬ್ಬರ ನಡುವೆ ಗ್ಯಾಂಗ್‌ವಾರ್ ನಡೆಯುವುದಂತೂ ಸತ್ಯ.

– ಹುರಳಿಕುಪ್ಪಿ ವಿನಯ

60,000 ಅಂದರ್-ಬಾಹರ್

ಹೆಬ್ಬೆಟ್ ಮಂಜ ಧಾರವಾಡ ಜೈಲಿಗೆ ಕಾಲಿಟ್ಟಾಗಿನಿಂದ ಜೈಲಿನ ವಾತಾವರಣವೇ ಬದಲಾಗಿ ಹೋಗಿದೆ. ಅವನು ಚಿತ್ರದುರ್ಗ, ಪರಪ್ಪನ ಅಗ್ರಹಾರ, ಬಳ್ಳಾರಿ, ಬೆಳಗಾವಿ, ಕೋಲಾರ ಜೈಲುಗಳೊಂದಿಗೆ ನಿಕಟ ಸಂಪರ್ಕವಿಟ್ಟುಕೊಂಡಿದ್ದಾನೆ. ಆ ಜೈಲುಗಳಲ್ಲಿ ನಡೆಯುವ ಬೆಳವಣಿಗೆಗಳು ದಿನಬೆಳಗಾಗುವುದರೊಳಗಾಗಿ ಇತರ ಜೈಲುಗಳ ಅಧಿಕಾರಿಗಳಿಗೆ ಗೊತ್ತಾಗುವ ಮುಂಚೆಯೇ ಹೆಬ್ಬೆಟ್ ಮಂಜನಿಗೆ ತಲುಪಿರುತ್ತವೆ. ತನ್ನ ಸಹವರ್ತಿಗಳಿಗೆ ಜೈಲೊಳಗಡೆಯೇ ಎಲ್ಲ ರೀತಿಯ ಸೌಲಭ್ಯಗಳು ದೊರಕುವ ವ್ಯವಸ್ಥೆಯನ್ನು ಹೆಬ್ಬೆಟ್ ಮಂಜ ಮಾಡಿದ್ದಾನೆ. ಈ ರೀತಿಯ ನೆಟ್‌ವರ್ಕ್ ಸ್ಥಾಪಿಸಿಕೊಳ್ಳುವುದಕ್ಕೆ ಜೈಲಧಿಕಾರಿಗಳಿಗೆ ಆತ ಕನಿಷ್ಟ ಎಂದರೂ ನಾಲ್ಕು ಲಕ್ಷ ಚೆಲ್ಲಿದ್ದಾನೆ.

ಚೆಮ್ಮನೂರು ಜುವೆಲ್ಲರಿ ಅಂಗಡಿಯನ್ನು ದರೋಡೆ ಮಾಡಿದ ಆನಂದ ನವಿಲೆ, ಕಮ್ಮರಡಿ ಹನೀಫ ಮತ್ತವರ ಗ್ಯಾಂಗ್ ಸದ್ಯ ಧಾರವಾಡ ಜೈಲಿನಲ್ಲಿಯೇ ಬೀಡುಬಿಟ್ಟಿದೆ. ಹೀಗಾಗಿ, ಜೈಲಿನೊಳಗಡೆಯೇ ಜೂಜಾಟದ ದಂಧೆಯೂ ಗರಿಗೆದರಿದೆ. ಹೆಬ್ಬೆಟ್ ಮಂಜನ ನೇತೃತ್ವದಲ್ಲಿ ನಡೆಯುತ್ತಿರುವ ಅಂದರ್ ಬಾಹರ್ ದಂಧೆಯಿಂದಾಗಿ ಪ್ರತಿದಿನ ಜೈಲಿನಲ್ಲಿ ಏನಿಲ್ಲವೆಂದರೂ ಅರವತ್ತು ಸಾವಿರ ಸದ್ದು ಮಾಡುತ್ತದೆ.


ಜೈಲು ಮತ್ತು ಆಸ್ಪತ್ರೆ ಮಾಫಿಯಾ

ಧಾರವಾಡ ಜೈಲು ಎಷ್ಟರಮಟ್ಟಿಗೆ ಅಧ್ವಾನವಾಗಿದೆಯೆಂದರೆ ದುಡ್ಡೊಂದಿದ್ದರೆ ಇಲ್ಲಿನ ಕೈದಿಗಳು ಏನು ಬೇಕಾದರೂ ಮಾಡಬಹುದು. ಹೆಂಡ, ಗಾಂಜಾ, ಅಫೀಮು, ಮೊಬೈಲು – ಹೀಗೆ ಒಂದೊಂದು ವಸ್ತುವನ್ನು ಸರಬರಾಜು ಮಾಡುವುದಕ್ಕೆ ಒಂದೊಂದು ರೇಟನ್ನು ಲಕ್ಷ್ಮೀನಾರಾಯಣ ಫಿಕ್ಸ್ ಮಾಡಿಟ್ಟು ಹೋಗಿದ್ದಾನೆ. ಜೈಲಿನಲ್ಲಿ ಇದು ಬೇಜಾರಾಯಿತೆಂದರೆ ಆಸ್ಪತ್ರೆಗೆ ಸೇರಿಕೊಂಡು ಆರಾಮಾಗಿರಬಹುದು. 8000 ದುಡ್ಡು ಕೊಟ್ಟರೆ ಸಾಕು ಜೈಲಿನ ವ್ಯಾನು ಕೈದಿಯನ್ನು ಎಸ್ಕಾರ್ಟ್ ಸಮೇತ ಕರೆದುಕೊಂಡು ಹೋಗಿ ಕೆಎಂಸಿ ಆವರಣದೊಳಕ್ಕೆ ಬಿಟ್ಟುಬರುತ್ತದೆ. ಮತ್ತೆ ನಾಲ್ಕು ಸಾವಿರ ಕೊಟ್ಟರೆ ಅದೇ ವ್ಯಾನು ಸಿವಿಲ್ ಆಸ್ಪತ್ರೆಯಲ್ಲಿ ಅಡ್ಮಿಟ್ ಮಾಡಿಬರುತ್ತದೆ. ಇದೆಲ್ಲಾ ನಾರಾಯಣ ನಡುಮನಿಗೂ ಗೊತ್ತು, ಆದರೂ ಸುಮ್ಮನಿದ್ದಾರೆಂದರೆ ಏನರ್ಥ?

ಉದಾಸಿಯ ಧನದಾಹಕ್ಕೆ ಸಂಗೂರು ಕಾರ್ಮಿಕನ ಬಲಿ



ಮುದಿ ರಾಜಕಾರಣಿ ಸಿ.ಎಂ. ಉದಾಸಿ ಮತ್ತು ಅವನ ಚೇಲಾ ಸದಾಶಿವ ಬೆಲ್ಲದ್ ನೇತೃತ್ವದ ಪಟಾಲಂ ಅಖಂಡ ಧಾರವಾಡ ಜಿಲ್ಲೆಯ ಏಕೈಕ ಸಕ್ಕರೆ ಕಾರ್ಖಾನೆ ವರದಾ ಷುಗರ್ಸ್‌ನ್ನು ಲೂಟಿ ಹೊಡೆದು ಹೇಗೆ ದಿವಾಳಿಯೆಬ್ಬಿಸಿದೆ ಎಂಬ ಬಗ್ಗೆ, ಕಾರ್ಖಾನೆ ಮುಚ್ಚಿದ ಪರಿಣಾಮವಾಗಿ ಕಬ್ಬು ಬೆಳೆದ ರೈತ ಬೀದಿಪಾಲಾದ ಬಗ್ಗೆ, ಕಾರ್ಖಾನೆಯಲ್ಲಿ ಕತ್ತೆಯಂತೆ ದುಡಿದರೂ ಕಳೆದ 19 ತಿಂಗಳಿಂದ ಸಂಬಳ ಕಾಣದೆ ಕಾರ್ಮಿಕರು ಬೀದಿಗೆ ಬಿದ್ದಿರುವುದರ ಬಗ್ಗೆ, ಕಾರ್ಖಾನೆಯನ್ನು ಪುನರಾರಂಭಿಸಿ ಎಂದು ಆಗ್ರಹಿಸಿ ಕಾರ್ಮಿಕರು ಹಗಲು ರಾತ್ರಿ ಎನ್ನದೆ ಮಕ್ಕಳುಮರಿಗಳ ಸಮೇತವಾಗಿ ಉಪವಾಸ ಸತ್ಯಾಗ್ರಹ ಕುಳಿತಿರುವುದರ ಬಗ್ಗೆ ಈ ಹಿಂದೆ ಹಲವಾರು ಬಾರಿ ಬರೆದಿದ್ದೆವು.


ಶಿವರಾಜ್ ಸಜ್ಜನ್

ಇದು ಅದರ ಮುಂದುವರೆದ ಭಾಗ.

ಕಾರ್ಮಿಕರ ಸತ್ಯಾಗ್ರಹ 35 ದಿನಗಳನ್ನು ದಾಟಿದರೂ ಸಿ.ಎಂ. ಉದಾಸಿಯಾಗಲೀ, ಆತನ ಪಟಾಲಂ ಆಗಲೀ, ಕಾರ್ಖಾನೆಯ ಆಡಳಿತ ಮಂಡಳಿಯಾಗಲೀ, ಜಿಲ್ಲಾಡಳಿತವಾಗಲೀ ಯಾರೂ ಕ್ಯಾರೆ ಅನ್ನಲಿಲ್ಲ. ಇದರಿಂದ ಭ್ರಮನಿರಸನಗೊಂಡ ದುರ್ಗಪ್ಪ ತಳವಾರ್ ಎಂಬ ಕಾರ್ಮಿಕ ಕಾರ್ಖಾನೆಯ ವರ್ಕ್‌ಶಾಪ್‌ನಲ್ಲಿಯೇ ವಿಷ ಕುಡಿದು ಸಾವನ್ನಪ್ಪಿದ್ದಾನೆ. ಸಾಯುವ ಮುನ್ನ ಕಾರ್ಮಿಕರ ಹೋರಾಟಕ್ಕೆ ಮಣಿಯದ ರಾಜಕಾರಣಿಗಳು, ಜಿಲ್ಲಾಡಳಿತ ಮತ್ತು ಕಾರ್ಖಾನೆಯ ಆಡಳಿತ ಮಂಡಳಿಯ ಜನರೇ ತನ್ನ ಸಾವಿಗೆ ಕಾರಣ ಎಂಬ ಡೆತ್‌ನೋಟ್ ಬರೆದಿಟ್ಟು ವಿಷಕುಡಿದಿದ್ದಾನೆ. ಅಂತೂ ಕೊನೆಗೂ ಬಿಜೆಪಿಗಳ ಅಟ್ಟಹಾಸಕ್ಕೆ ಸಂಗೂರು ಕಾರ್ಖಾನೆಯ ಕಾರ್ಮಿಕನೊಬ್ಬ ಬಲಿಯಾದಂತಾಯಿತು.

ದುರ್ಗಪ್ಪನ ಸಾವಿನ ಹಿಂದೆ....

ಪರ್ಸೆಂಟೇಜ್ ಮುಕ್ಕುವುದರಲ್ಲಿ ಪಿಎಚ್‌ಡಿ ಮಾಡಲು ಹೊರಟಿರುವ ಮುದಿ ನಾಯಕ ಉದಾಸಿ ಮತ್ತವನ ನಾಲ್ಕು ಪಟಾಲಂ ಶಾಸಕರ ಕೈಯಲ್ಲಿ ಸಿಕ್ಕಿರುವ ಹಾವೇರಿ ಜಿಲ್ಲೆ ಪರಿಸ್ಥಿತಿ ಹೇಳೋ ಅರಸಿಲ್ಲ, ಕೇಳೋ ಪ್ರಧಾನಿ ಇಲ್ಲ ಎಂಬಂತಾಗಿಬಿಟ್ಟಿದೆ. 'ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ, ಸಂಗೂರು (ವರದಾ ಷುಗರ್ಸ್)'ನಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆಹೊಡೆದು, ಕಾರ್ಖಾನೆಯನ್ನು ದಿವಾಳಿಯೆಬ್ಬಿಸಿ, ಅದಕ್ಕೆ ಬೀಗ ಜಡಿದು, ಕಬ್ಬನ್ನು ಖರೀದಿಸದೇ ಅತ್ತ ರೈತರ ಕುಟುಂಬಗಳನ್ನು, ಕಳೆದ 18 ತಿಂಗಳುಗಳಿಂದ ಸಂಬಳ ನೀಡದೇ ಇತ್ತ ಕಾರ್ಮಿಕರ ಕುಟುಂಬಗಳನ್ನು ಬೀದಿಗೆ ತಂದು ನಿಲ್ಲಿಸಿದ್ದಾರೆ.

ಕಾರ್ಮಿಕರು 'ನಾವು ದುಡಿದಿದ್ದಕ್ಕೆ ಸಂಬಳ ಕೊಡಿ' ಎಂದು ನ್ಯಾಯಯುತ ಬೇಡಿಕೆಯನ್ನಿಟ್ಟುಕೊಂಡು ಹಾವೇರಿ ಜಿಲ್ಲಾಧಿಕಾರಿಗಳ ಕಚೇರಿಯೆದುರು ಕುಟುಂಬ ಸಮೇತವಾಗಿ ಪ್ರತಿಭಟನೆಗಿಳಿದಿದ್ದರು. ಇವರ ಪ್ರತಿಭಟನೆಗೆ ಯಾವಾಗ ಜಿಲ್ಲಾಧಿಕಾರಿಗಳಾಗಲೀ, ಕಾರ್ಖಾನೆಯ ಆಡಳಿತ ಮಂಡಳಿಯಾಗಲೀ ಅಥವಾ ಉದಾಸಿಯಾಗಲೀ ಕ್ಯಾರೆ ಎನ್ನಲಿಲ್ಲವೋ ಆಗ ಕಾರ್ಮಿಕರು ವಿಷದ ಬಾಟಲಿಗಳನ್ನು ತಂದು 'ಸಂಬಳ ಕೊಡಿ ಅಥವ ವಿಷ ಕೊಡಿ' ಎಂದು ತಮ್ಮ ಪ್ರತಿಭಟನೆಗೆ ಹೊಸ ರೂಪ ಕೊಟ್ಟರು. ಆಗಲಾದರೂ ಉದಾಸಿ, ಅಧ್ಯಕ್ಷ ಸದಾಶಿವ ಬೆಲ್ಲದ್, ಶಿವರಾಜ ಸಜ್ಜನ ಮತ್ತು ಜಿಲ್ಲಾಧಿಕಾರಿ ವಸ್ತ್ರದ್ ಎಚ್ಚೆತ್ತುಕೊಳ್ಳಬೇಕಿತ್ತು.

ಅಷ್ಟು ಹೊತ್ತಿಗಾಗಲೇ ಕಾರ್ಮಿಕರ ಹೋರಾಟಕ್ಕೆ ಹತ್ತಾರು ಸಂಘ ಸಂಸ್ಥೆಗಳು ಕೈಜೋಡಿಸಿ ಪ್ರತಿಭಟನೆಯನ್ನು ಉಗ್ರ ರೂಪಕ್ಕೆ ತಂದಿದ್ದವು. ಇದನ್ನು ನೋಡಿಯೇ ಜಿಲ್ಲಾಡಳಿತ ಕಾರ್ಖಾನೆಯ ಎಂ.ಡಿ. ಗದ್ದನಕೇರಿಗೆ ಹೇಳಿ ಕಾರ್ಖಾನೆಯನ್ನು ಪುನರಾರಂಭಿಸಲು ಸೂಚನೆ ನೀಡಿಯಾಗಿತ್ತು. ಒಂದು ವೇಳೆ ಕಾರ್ಖಾನೆ ಪ್ರಾರಂಭವಾದರೆ ಉದಾಸಿಗೆ ಕ್ರೆಡಿಟ್ ಹೋಗುತ್ತದೆ, ಆತ ಮತ್ತೆ ರಾಜಕೀಯವಾಗಿ ಪ್ರಬಲನಾಗುತ್ತಾನೆ, ಕಾರ್ಮಿಕರು ಬಿಜೆಪಿಯ ಕಡೆ ವಾಲುತ್ತಾರೆ ಎಂದುಕೊಂಡ ಉದಾಸಿಯ ರಾಜಕೀಯ ಕಡುವೈರಿ ಮಾಜಿ ಮಂತ್ರಿ ಮನೋಹರ್ ತಹಶೀಲ್ದಾರ್ ಕಾರ್ಮಿಕರ ಹೋರಾಟದಲ್ಲಿ ಪಾಲ್ಗೊಂಡು ದಿನಕ್ಕೊಂದು ಹೇಳಿಕೆ ನೀಡಿ ಹೋರಾಟವನ್ನೂ, ಉದಾಸಿಯನ್ನೂ ದಿಕ್ಕು ತಪ್ಪಿಸಲು ಪ್ರಯತ್ನಿಸಿದ.


ಈ ಇಬ್ಬರು ರಾಜಕೀಯ ನಾಯಕರು ವರದಾ ಷುಗರ್ಸ್ ಕಾರ್ಮಿಕರ ವಿಚಾರವನ್ನು ತಮ್ಮ ರಾಜಕೀಯ ಬೇಳೆಕಾಳು ಬೇಯಿಸಿಕೊಳ್ಳಲು ಬಳಸಿಕೊಳ್ಳುತ್ತಾ ಕಾರ್ಮಿಕರ ಜೀವನದೊಂದಿಗೆ ಚೆಲ್ಲಾಟವಾಡುತ್ತಿರುವುದನ್ನು ಕಂಡು ಕಾರ್ಖಾನೆಯ ಕಾರ್ಮಿಕರು ಸಹಜವಾಗಿಯೇ ನೊಂದುಕೊಂಡಿದ್ದಾರೆ. ಆದರಲ್ಲೂ ದುರ್ಗಪ್ಪ ತಳವಾರ್ ಎಂಬ ಸೂಕ್ಷ್ಮ ಮನಸ್ಸಿನ ಕಾರ್ಮಿಕನಂತೂ ಈ ರಾಜಕಾರಣಿಗಳ ಬಗ್ಗೆ ಹೇವರಿಕೆಯ ಭಾವನೆ ತಾಳಿ ಆತ್ಮಹತ್ಯೆಯ ದಾರಿ ಹಿಡಿದಿದ್ದಾನೆ.

ಮಾಂಗಲ್ಯ ಮಾರಿ ವಿಷ ಕೊಂಡುಕೊಂಡ

ಕಾರ್ಮಿಕರ ಪ್ರತಿಭಟನೆ 35 ದಿನಗಳನ್ನು ದಾಟಿದರೂ ಮನೋಹರ್ ತಹಶೀಲ್ದಾರ್ ಮತ್ತು ಉದಾಸಿ ಇಬ್ಬರೂ ತಮ್ಮ ತಮ್ಮ ಪ್ರತಿಷ್ಠೆಗಾಗಿ ಬಡಿದಾಡಿಕೊಳ್ಳುತ್ತಿದ್ದರೇ ವಿನಃ ಕಾರ್ಮಿಕರ ಬಗ್ಗೆ ನೈಜ ಕಾಳಜಿಯನ್ನು ತೋರಲಿಲ್ಲ. ಇದನ್ನು ಕಂಡ ದುರ್ಗಪ್ಪ ತಳವಾರ ವಿಷ ಕುಡಿಯಲು ನಿರ್ಧರಿಸಿದ್ದಾನೆ. ಆದರೆ, ವಿಷ ಕೊಂಡುಕೊಳ್ಳುವುದಕ್ಕೆ ಹಣ ಬೇಕಲ್ಲ? ಕಳೆದ 19 ತಿಂಗಳುಗಳಿಂದ ಸಂಬಳವನ್ನೇ ಪಡೆಯದ ಆತ ಇಂದಲ್ಲ ನಾಳೆ ಕಾರ್ಖಾನೆ ಪುನರಾರಂಭವಾಗುತ್ತೆ ನಮ್ಮ ಸಮಸ್ಯೆ ಬಗೆಹರಿಯುತ್ತೆ ಎಂಬ ಆಶಾಭಾವನೆಯಿಂದ ಮನೆಯಲ್ಲಿ ಇದ್ದುಬದ್ದುದನ್ನು ಮಾರಿ ಇಲ್ಲಿಯ ತನಕ ಹೇಗೋ ಬದುಕು ಸಾಗಿಸಿದ್ದಾನೆ. ಈಗ ಭ್ರಮನಿರಸನಗೊಂಡು ಸಾಯುವುದಕ್ಕೆ ಮುಂದಾದರೂ ಕನಿಷ್ಠ ವಿಷ ಕೊಂಡುಕೊಳ್ಳುವುದಕ್ಕೂ ಆತನ ಬಳಿ ಹಣವಿಲ್ಲದಂತಾಗಿದೆ. ಕೊನೆಗೆ ಬೇರೆ ದಾರಿ ಕಾಣದೆ ಹೆಂಡತಿಯ ಕೊರಳಿಗೆ ತಾನೆ ಕಟ್ಟಿದ್ದ ಮಂಗಲ ಸೂತ್ರವನ್ನು ತೆಗೆದುಕೊಂಡು, ಹಾವೇರಿಯ ಸರಾಫರಿಗೆ ಮಾರಿ, ಬಂದ ಹಣದಲ್ಲಿ ಮನೆಗೆ ಒಂದಿಷ್ಟು ಕಿರಾಣಿ ಸಾಮಾನುಗಳನ್ನು ಖರೀದಿಸಿ ಉಳಿದ ಹಣದಲ್ಲಿ 'ರೋಗರ್' ಹೆಸರಿನ ವಿಷದ ಬಾಟಲಿಯನ್ನು ಕೊಂಡು ಕೊಂಡು ಮನೆಗೆ ತೆರಳಿದ್ದಾನೆ. ಮನೆಯಲ್ಲಿ ಸಾಮಾನುಗಳನ್ನು ಇಟ್ಟು, ವಿಷದ ಬಾಟಲಿಯನ್ನು ತೆಗೆದುಕೊಂಡು ಸೀದಾ ಕಾರ್ಖಾನೆಯ ವರ್ಕ್‌ಶಾಪ್‌ಗೆ ಬಂದು ವಿಷ ಕುಡಿದಿದ್ದಾನೆ. ವಿಷ ಕುಡಿಯುವ ಮೊದಲು, "ನನ್ನ ಹೆಂಡತಿಯ ಕೊರಳಲ್ಲಿದ್ದ ತಾಳಿಯನ್ನು ಮಾರಿ ವಿಷ ತಂದು ಕುಡಿಯುತ್ತಿದ್ದೇನೆ. ನನ್ನ ಸಾವಿಗೆ ಕಾರ್ಖಾನೆಯ ಅಧ್ಯಕ್ಷ ಸದಾಶಿವ ಬೆಲ್ಲದ್ ಮತ್ತು ಮಾಜಿ ಮಂತ್ರಿ ಸಿ.ಎಂ. ಉದಾಸಿಯೇ ಕಾರಣ" ಎಂದು ಸ್ಪಷ್ಟವಾಗಿ ಒಂದು ಡೆತ್‌ನೋಟ್ ಬರೆದಿಟ್ಟಿದ್ದಾನೆ.


ಗದ್ದನಕೇರಿ

ವಿಷ ಕುಡಿದ ಅರ್ಧ ಗಂಟೆಯ ನಂತರ ತನ್ನ ಕಾರ್ಮಿಕ ಸ್ನೇಹಿತರನ್ನು ಕರೆದು "ಈ ವ್ಯವಸ್ಥೆಯಿಂದ ನಾನು ರೋಸಿ ಹೋಗಿದ್ದೇನೆ. ಹೋರಾಟ ದಿನ ಕಳೆಯುತ್ತಿದೆಯಾದರೂ ಯಾವುದೇ ನಿರ್ಣಯಗಳಾಗಿಲ್ಲ, ನಾನು ವಿಷ ಸೇವಿಸಿದ್ದೇನೆ. ನನ್ನ ಸಾವಿನಿಂದಾದರೂ ಆಡಳಿತ ಮಂಡಳಿ ಎಚ್ಚೆತ್ತುಕೊಳ್ಳಲಿ, ಕಾರ್ಖಾನೆಯ ಸಮಸ್ಯೆ ಬಗೆಹರಿದು ಕಾರ್ಮಿಕರಿಗೆ ನ್ಯಾಯ ದೊರಕಲಿ, ನನ್ನ ಕುಟುಂಬದಂತೆ ಉಪವಾಸ ನರಳುತ್ತಿರುವ ನೂರಾರು ಕಾರ್ಮಿಕ ಕುಟುಂಬಗಳಿಗೆ ನ್ಯಾಯ ದೊರಕಲಿ" ಎಂದು ಹೇಳಿದ್ದಾನೆ. ತಕ್ಷಣ ಕಾರ್ಮಿಕರು ಆತನನ್ನು ಹಾವೇರಿಯ ಜಿಲ್ಲಾ ಆಸ್ಪತ್ರೆಗೆ ಸೇರಿಸಿದರೂ ಅಲ್ಲಿ ನೀಡಿದ ಪ್ರಾಥಮಿಕ ಚಿಕಿತ್ಸೆ ಫಲಕಾರಿಯಾಗಲಿಲ್ಲ, ನಂತರ ಅಲ್ಲಿಂದ ದಾವಣಗೆರೆಗೆ ಕರೆದುಕೊಂಡು ಹೊರಟಿದ್ದಾರೆ. ಅಷ್ಟು ಹೊತ್ತಿಗಾಗಲೇ ದುರ್ಗಪ್ಪನ ಮೈತುಂಬಾ ವಿಷ ಬೆರೆತು ಹೋಗಿತ್ತು, ದಾವಣಗೆರೆ ತಲುಪುವ ಮೊದಲೇ ಮಾರ್ಗ ಮಧ್ಯದಲ್ಲಿ ಹರಿಹರದ ಬಳಿ ಆತ "ಕಾರ್ಮಿಕ ಹೋರಾಟಕ್ಕೆ ಜಯ ಸಿಗಲಿ" ಎಂದಷ್ಟೇ ಹೇಳಿ ಸಾವನ್ನಪ್ಪಿದ್ದಾನೆ.



ದುರ್ಗಪ್ಪನ ಹೆಣದ ಸುತ್ತ ರಾಜಕೀಯ ರಣಹದ್ದುಗಳು

ದುರ್ಗಪ್ಪನ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಸಿ.ಎಂ. ಉದಾಸಿ, ಕಾರ್ಖಾನೆಯ ಆಡಳಿತ ಮಂಡಳಿಯ ಅಧ್ಯಕ್ಷ ಸದಾಶಿವ ಬೆಲ್ಲದ್ ಮತ್ತು ಶಿವರಾಜ್ ಸಜ್ಜನರ ತಳದಲ್ಲಿ ಒಂದು ಸಣ್ಣನೆಯ ನಡುಕ ಶುರುವಾಗಿದ್ದರೆ ಉದಾಸಿಯನ್ನು ದೂಷಿಸಲು ಒಂದು ಇಶ್ಯೂ ಸಿಕ್ಕಿತಲ್ಲ ಎಂದು ಕಾಂಗ್ರೆಸ್ಸಿನ ನಾಯಕರಿಗೆ ಖುಷಿಯೋ ಖುಷಿ. ಹೋರಾಟ ನಿರತ ಕಾರ್ಮಿಕರ ಬಳಿ ಎಂದೂ ಬರದ ಈ ಕಾಂಗ್ರೆಸ್ ನಾಯಕರು ದುರ್ಗಪ್ಪನ ಹೆಣದ ಮುಂದೆ ಬಂದು ಮೊಸಳೆ ಕಣ್ಣೀರು ಸುರಿಸಲಾರಂಭಿಸಿದರು.

ಆದರಲ್ಲೂ ಉದಾಸಿಯ ಕಡುವೈರಿ ಮಾಜಿ ಡೆಪ್ಯೂಟಿ ಸ್ಪೀಕರ್ ಕಾಂಗ್ರೆಸ್‌ನ ಮನೋಹರ್ ತಹಶೀಲ್ದಾರನಂತೂ "ದುರ್ಗಪ್ಪನ ಸಾವಿಗೆ ಕಾರಣನಾದ ಉದಾಸಿಯನ್ನು ಎಕ್ಕಡದಿಂದ ಹೊಡೆಯಿರಿ" ಎಂದು ಭರ್ಜರಿಯಾಗಿಯೇ ಭಾಷಣ ಬಿಗಿಯಲಾರಂಭಿಸಿದ. ಇನ್ನು ಶಿವರಾಜ್ ಸಜ್ಜನನ ಕಡುವೈರಿ ಹಾವೇರಿಯ ಬಸವರಾಜ ಶಿವಣ್ಣನವರ್‌ನ ನಟನೆಯನ್ನು ನೋಡಬೇಕು. ತಮ್ಮ ಸಂಬಂಧಿಯೇ ಸತ್ತುಹೋದಂತೆ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಾ ದುರ್ಗಪ್ಪನ ಸಾವಿಗೆ ಸಜ್ಜನನೇ ಕಾರಣ ಎಂದು ಜನರ ಸಿಟ್ಟನ್ನು ಶಿವರಾಜ ಸಜ್ಜನನ ವಿರುದ್ಧ ತಿರುಗಿಸಲು ಪ್ರಯತ್ನಿಸುತ್ತಿದ್ದ.

ಸಿದ್ದಪ್ಪ ಸರ್ಕಲ್ ಬಳಿ ಕಾಂಗ್ರೆಸ್ಸಿಗರೂ ಸುಮಾರು ಎರಡು ತಾಸಿಗೂ ಹೆಚ್ಚು ಕಾಲ ಪ್ರತಿಭಟನೆಯ ನೆಪದಲ್ಲಿ ತಮ್ಮ ತೀಟೆ ರಾಜಕಾರಣವನ್ನು ತೀರಿಸಿಕೊಂಡರು. ರೊಚ್ಚಿಗೆದ್ದ ಕಾರ್ಮಿಕರು ದುರ್ಗಪ್ಪನ ಶವವನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ತೆಗೆದುಕೊಂಡು ಹೋಗಿ ಆಡಳಿತ ಮಂಡಳಿಗೂ, ಜಿಲ್ಲಾಧಿಕಾರಿಗಳಿಗೂ ಹಿಡಿಶಾಪ ಹಾಕಿ ಸರಿಯಾದ ಪರಿಹಾರಕ್ಕಾಗಿ ಪ್ರತಿಭಟಿಸುತ್ತಿದ್ದರು. ತಹಶೀಲ್ದಾರ್, ಶಿವಣ್ಣನವರ್, ರುದ್ರಪ್ಪ ಲಮಾಣಿ ಮುಂತಾದ ಕಾಂಗ್ರೆಸ್ ಪುಡಾರಿಗಳು ಜನರ ಈ ಪ್ರತಿಭಟನೆಯ ದನಿಗೆ ಕೈಜೋಡಿಸುವುದನ್ನು ಬಿಟ್ಟು ಅದಕ್ಕೆ ಮಣ್ಣೆರಚುವುದಕ್ಕೆ ಪ್ರಯತ್ನಿಸಿದರು.

ದುರ್ಗಪ್ಪನ ಕುಟುಂಬಕ್ಕೆ ಐದು ಲಕ್ಷ ರೂಪಾಯಿ ಪರಿಹಾರ ಕೊಡಬೇಕೆಂದು ಕಾರ್ಮಿಕರು ಪಟ್ಟು ಹಿಡಿದಿದ್ದರೆ ಈ ಮಹಾನುಭಾವರು ಡಿ.ಸಿ. ಛೇಂಬರ್ ಒಳಗೆ ಡೀಲ್ ಕುದುರಿಸಿಕೊಂಡು ಕೇವಲ ಎರಡು ಲಕ್ಷ ಪರಿಹಾರಕ್ಕೆ ಒಪ್ಪಿಕೊಂಡು ಬಂದರು. ಹೇಗೂ ಕಾಂಗ್ರೆಸ್‌ನವರ ಬೆಂಬಲ ಇದೆ ಎಂದುಕೊಂಡ ಡಿಸಿ ವಸ್ತ್ರದ್ "ಈಗ 50 ಸಾವಿರ ಕೊಡ್ತೀನಿ, ಉಳಿದ್ದು ಮುಂದೆ ನೋಡೋಣ" ಎಂದು ರಾತ್ರಿ ಹತ್ತು ಗಂಟೆಗೆ ಹೇಳಿದ.


ಒಂದೇ ಮಾತಿನಲ್ಲಿ ಹೇಳುವುದಾದರೆ, ಸಂಗೂರು ಕಾರ್ಖಾನೆಯ ವಿಚಾರವೊಂದರಲ್ಲಿಯೇ ಹಾವೇರಿಯ ರಾಜಕಾರಣಿಗಳು ರೈತ-ಕಾರ್ಮಿಕರ ಎದುರು ಬೆತ್ತಲಾಗಿ ಹೋಗಿದ್ದಾರೆ. ಅದು ಕಾಂಗ್ರೆಸ್ ಇರಬಹುದು, ಬಿಜೆಪಿ ಇರಬಹುದು. ಇವರ ಆಟವನ್ನು ನೋಡಲಾರದೇ ದುರ್ಗಪ್ಪ ತನ್ನ ಪ್ರಾಣವನ್ನೇ ತೆಗೆದುಕೊಂಡಿರಬಹುದು. ಆದರೆ, ಉಳಿದ ಕಾರ್ಮಿಕರು ಹಾಗೆ ಮಾಡುತ್ತಾರೆಂದೇನಲ್ಲ, ತಮ್ಮ ಸಿಟ್ಟನ್ನು ರಟ್ಟೆಗೆ ತೆಗೆದುಕೊಂಡು ತಮಗೆ ಕಂಟಕರಾಗಿರುವ ಕಾಂಗ್ರೆಸ್-ಬಿಜೆಪಿ ರಾಜಕಾರಣಿಗಳನ್ನು ಬೀದಿಯಲ್ಲಿ ಅಟ್ಟಾಡಿಸಿಕೊಂಡು ಹೊಸಕಿ ಹಾಕಿದರೂ ಆಶ್ಚರ್ಯವಿಲ್ಲ. ■

ವಸ್ತ್ರದ್ ಎಂಬ ನಾಮರ್ಧ ಡಿಸಿ

ಒಂದು ಕಾಲದಲ್ಲಿ ಧಾರವಾಡದಲ್ಲಿ ಶಿಕ್ಷಣ ಆಯುಕ್ತನಾಗಿದ್ದುಕೊಂಡು ಶಿಕ್ಷಕರನ್ನು ಬೆದರಿಸಿ ಸುಲಿಯುತ್ತಿದ್ದ ಟಿ.ಎಸ್. ವಸ್ತ್ರದ್ ಎಂಬ ಹಣಬಾಕ ಹೆಗ್ಗಣವನ್ನು ಹಾವೇರಿಯ ಡಿಸಿಯನ್ನಾಗಿ ಕೂರಿಸಿದವನೇ ಉದಾಸಿ. ಮೊದಲೇ ಅಭಿವೃದ್ಧಿ ಕಾಣದೇ ಹಾಳು ಕೊಂಪೆಯಂತಿರುವ ಹಾವೇರಿಗೆ ಒಂದು ಗತಿ ಕಾಣಿಸಿಯೇ ತೀರಬೇಕೆಂದು ವಸ್ತ್ರದ್ ಮತ್ತು ಉದಾಸಿ ನಿಂತಂತಿದೆ.

ಕಳೆದ 30 ದಿನಗಳಿಂದ ತನ್ನ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದ ಕಾರ್ಮಿಕರ ಅಳಲನ್ನು ಒಮ್ಮೆಯಾದರೂ ಕೇಳುವುದಕ್ಕೆ ಈ ಮಹಾನುಭಾವನಿಗೆ ಮನಸ್ಸಾಗಿಲ್ಲ, ಹೋಗಲಿ, ಕಾರ್ಮಿಕರು ಹಗಲು ರಾತ್ರಿ ಎನ್ನದೇ ಪ್ರತಿಭಟನೆ ಮಾಡುತ್ತಿದ್ದರಿಂದ, "ರಾತ್ರಿ ಹೊತ್ತಿನಲ್ಲಿ ಚಳಿಯಾಗುತ್ತೆ ಕಚೇರಿಯ ಸಭಾಂಗಣವನ್ನು ಕೊಡಿ, ರಾತ್ರಿ ಅಲ್ಲಿಯೇ ಇರುತ್ತೇವೆ" ಎಂದು ಅವರು ಪರಿಪರಿಯಾಗಿ ಬೇಡಿಕೊಂಡರೂ ಅದಕ್ಕೆ ಆತ ಸ್ಪಂದಿಸಲಿಲ್ಲ, ಬದಲಾಗಿ, ಕಾರ್ಮಿಕರ ಮೇಲೆಯೇ ಕಳ್ಳತನದ ಆರೋಪ ಹೊರಿಸಿದ. ಕಾರ್ಮಿಕರು ಇವನ ಚೇಂಬರಿಗೆ ಬಂದು 'ದೀಪಾವಳಿಗಾಗಿ ಕನಿಷ್ಠ ಒಂದು ತಿಂಗಳ ಸಂಬಳವನ್ನಾದರೂ ಕೊಡಿ' ಎಂದು ಬೇಡಿಕೊಂಡಾಗ 'ಬೇಕಾದರೆ ಭಿಕ್ಷೆ ಬೇಡಿ ಬದುಕಿರಿ' ಎಂದು ದರ್ಪದಿಂದ ಬಯ್ದು ಕಾರ್ಮಿಕರನ್ನೆಲ್ಲಾ ಹೊರದಬ್ಬಿದ. ಇವನಿಗೆ ಆಡಳಿತದ ಗಂಧಗಾಳಿ ಮಾತ್ರ ಗೊತ್ತಿಲ್ಲ ಎಂದು ಹಾವೇರಿಯ ಜನ ಅಂದುಕೊಂಡಿದ್ದರು. ಆದರೆ, ಇವನ ಈ ದರ್ಪವನ್ನು ನೋಡಿದರೆ ಅವನಿಗೆ ಕನಿಷ್ಠ ಮಾನವೀಯತೆಯೂ ಇಲ್ಲ ಎಂಬುದು ಗೊತ್ತಾಗುತ್ತದೆ.

ಈಗ ವರದಾ ಷುಗರ್ಸ್ ಕಾರ್ಖಾನೆಯನ್ನು ದುರಸ್ತಿ ಮಾಡಿಸುವುದಕ್ಕೆ ಕನಿಷ್ಠ ಒಂದು ಕೋಟಿ ಬೇಕು. ಅಲ್ಲದೇ ಕಾರ್ಮಿಕರ ಬಾಕಿ ವೇತನ ನೀಡಲು ಕನಿಷ್ಠ 15 ಕೋಟಿ ಬೇಕು. ಕಾರ್ಖಾನೆಯ ಹೆಸರಿನಲ್ಲಿರುವ 64 ಬ್ಯಾಂಕ್ ಖಾತೆಯಲ್ಲಿ ನೈಯಾ ಪೈಸೆ ಇಲ್ಲ. ಒಂದು ವೇಳೆ ಕಾರ್ಖಾನೆಯ ಉದ್ಧಾರಕ್ಕೆ ಸರ್ಕಾರ ಮುಂದಾದರೂ ಅದರ ಅಭಿವೃದ್ಧಿಯ ಹೆಸರಿನಲ್ಲಿ ವಸ್ತ್ರದ್ ಎಂಬ ಹಣಬಾಕ ಅದೆಷ್ಟು ಕೋಟಿಗಳನ್ನು ನುಂಗಿ ನೀರು ಕುಡಿಯುತ್ತಾನೋ ಗೊತ್ತಿಲ್ಲ.



ಸಾಸ್ವೆಹಳ್ಳಿಗೆ ಬೆಂಕಿ ಹಚ್ಚಿದ ಕೋಮುವಾದಿಗಳು

ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿ ಕೋಮುಗಲಭೆಯಿಂದ ಹೊತ್ತಿ ಉರಿದಿದೆ! ಕರ್ನಾಟಕದಲ್ಲಿ ಪ್ರಥಮ ಬಾರಿಗೆ ಕೇವಲ ಏಳು ದಿನಗಳಷ್ಟೇ ಅಧಿಕಾರದಲ್ಲಿದ್ದ ಕೋಮುವಾದಿ ಬಜೆಪಿ ಚಿಡ್ಡಿಗಳು ಒಂದು ಸಣ್ಣ ಘಟನೆಯನ್ನು ನೆಪ ಮಾಡಿಕೊಂಡು ಅಕ್ಕ-ಪಕ್ಕದ ಹಳ್ಳಿಗಳಿಂದ ಟ್ರ್ಯಾಕ್ಟರ್‌ಗಳಲ್ಲಿ ಜನರನ್ನು ಸಾಸ್ವೆಹಳ್ಳಿಗೆ ಕರೆತಂದು ಗ್ರಾಮದಲ್ಲಿ ಪ್ರಕ್ಷುಬ್ಧ ವಾತಾವರಣವನ್ನು ನಿರ್ಮಿಸಿ, ಸುಮಾರು ಇಪ್ಪತ್ತು ಅಂಗಡಿಗಳನ್ನು ಸುಟ್ಟು ಹಾಕಿದ್ದಾರೆ. ಕೈಗೆ ಸಿಕ್ಕ ಅಮಾಯಕರ ಮೇಲೆ ಹಲ್ಲೆ ನಡೆಸಿ ಶಾಂತಿಯುತವಾಗಿ ಬದುಕುತ್ತಿದ್ದ ಸಾಸ್ವೆಹಳ್ಳಿಯ ಜನರ ಮೇಲೆ ಕರ್ಫ್ಯೂ ಹೇರಲು ಕಾರಣರಾಗಿದ್ದಾರೆ. ಕೋಮುಗಲಭೆ ನಡೆಸಿದ ನಂತರದ ಎರಡೇ ದಿನಗಳಲ್ಲಿ ಅಧಿಕಾರ ಕಳೆದುಕೊಂಡು ಮಣ್ಣು ಮುಕ್ಕುವುದನ್ನು ಮನಗಾಣದೇ ಅಧಿಕಾರಕ್ಕೆ ಬಂದ ತಕ್ಷಣ ಗುಜರಾತ್ ಮಾದರಿಯನ್ನು ಸಂಘ ಪರಿವಾರದ ಕೋಮುವಾದಿಗಳು ಪ್ರಯೋಗಕ್ಕಿಳಿಸಿದ ನೀಚ ಘಟನೆ ಇದಾಗಿದೆ. ಜೊತೆಗೆ ಹೊನ್ನಾಳಿ ಶಾಸಕ ರೇಣುಕಾಚಾರ್ಯ ಸಂಘ ಪರಿವಾರದ ನಾಯಕರನ್ನು ಪದೇಪದೇ ಹಳ್ಳಿಗೆ ಕರೆದುಕೊಂಡು ಬಂದು ಬಹಿರಂಗ ಸಭೆಗಳನ್ನು ನಡೆಸಿ ಕೋಮುಗಲಭೆಗೆ ವೇದಿಕೆಯನ್ನು ನಿರ್ಮಿಸಿಕೊಟ್ಟದ್ದರಿಂದಲೇ ಸಂಘ ಪರಿವಾರದ ಕೋಮುವಾದಿಗಳು ವ್ಯವಸ್ಥಿತವಾಗಿ ಕೋಮುಗಲಭೆ ನಡೆಸಲು ಸಾಧ್ಯವಾಗಿದೆ.

ಸುಮಾರು ಐದು ಸಾವಿರದಷ್ಟು ಜನಸಂಖ್ಯೆಯನ್ನು ಹೊಂದಿರುವ ದೊಡ್ಡಹಳ್ಳಿಯಾದ ಸಾಸ್ವೆಹಳ್ಳಿಯಲ್ಲಿ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಮುಸ್ಲಿಮರಿದ್ದಾರೆ. ಯಾವುದೇ ತಂಟೆ, ತಕರಾರು ಬಂದರೂ ಈ ಹಿಂದೂ-ಮುಸ್ಲಿಂ ಎರಡೂ ಕೋಮಿನವರು ಸೇರಿ ಸೌಹಾರ್ದತೆಯಿಂದ ಮಾತುಕತೆ ನಡೆಸಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಾರೆ. ವಿಶೇಷವೆಂದರೆ ಈ ಊರಿನ ಜನರು ತಪ್ಪು ಮಾಡಿದ ಯಾವುದೇ ಕೋಮಿನ ವ್ಯಕ್ತಿಗೆ ವಿಧಿಸಿದ ದಂಡದ ಮೊತ್ತವನ್ನು ದೇವಸ್ಥಾನ ಮತ್ತು ಮಸೀದಿಗೆ ಸಮಪಾಲು ಹಂಚಿಕೊಂಡು ಸಹಜೀವನ ನಡೆಸುತ್ತಾರೆ. ಈ ಹಿಂದೆ ನಡೆಯಬಹುದಾಗಿದ್ದ ಬಹಳಷ್ಟು ಗಲಭೆಗಳನ್ನು ಈ ರೀತಿಯ ಸೌಹಾರ್ದತೆಯ ಜೀವನದಿಂದಾಗಿ ಈ ಊರಿನ ಜನರು ತಡೆಹಿಡಿದಿದ್ದಾರೆ. ಹೀಗಾಗಿ ಹಿಂದೆಂದೂ ಈ ಊರಿನಲ್ಲಿ ಕೋಮುಗಲಭೆ ನಡೆದಿರಲಿಲ್ಲ.

ಕೋಮುವಾದಿಗಳು ಹಚ್ಚಿದ ಬೆಂಕಿ

ನ.16 ರಂದು ನನ್ನೂ ಎಂಬ ಮುಸ್ಲಿಂ ಹುಡುಗ ಹಿಂದೂ ಹುಡುಗಿಯನ್ನು ಚುಡಾಯಿಸಿದ ಎಂಬ ಪುಕಾರೆದ್ದು ಕೆಲವರು ಅವನನ್ನು ಥಳಿಸಲು ಪ್ರಾರಂಭಿಸಿದ್ದಾರೆ. ಹಿಂದೂಗಳ ಮನೆಯಲ್ಲಿ ಕುಳಿತು ಮಾತನಾಡುತ್ತಿದ್ದ ಗ್ರಾಮ ಪಂಚಾಯತಿಯ ಉಪಾಧ್ಯಕ್ಷ ಸುಲೇಮಾನ್‌ಸಾಬ್‌ಗೆ ಈ ವಿಷಯವನ್ನು ತಿಳಿಸಿದಾಗ 'ತಪ್ಪು ಮಾಡಿದರೆ ನಾಕು ತದುಕಲಿ ಬಿಡು' ಎಂದು ಆತ ಸುಮ್ಮನಾಗಿದ್ದಾರೆ. ಆದರೆ ಊರಿನ ಜನ ಸುಮ್ಮನಾಗಲು ತಯಾರಿದ್ದರೂ ಹೊನ್ನಾಳಿ ಶಾಸಕ ರೇಣುಕಾಚಾರ್ಯನ ಭಂಟರಾದ ಹಾಲೇಶಪ್ಪ ನರಸಿಂಹ, ಸಂತೋಷ, ರಂಗಪ್ಪ ಇನ್ನೂ ಮುಂತಾದ ಕಿಡಿಗೇಡಿಗಳು ಸುಮ್ಮನಿರಬೇಕಲ್ಲ? ಉರಿಯುವ ಕೋಮು ಬೆಂಕಿಗೆ ತುಪ್ಪ ಸುರಿಯಲು ಇಲ್ಲಸಲ್ಲದ ವದಂತಿಗಳನ್ನೆಬ್ಬಿಸಿ ಪಕ್ಕದ ಊರುಗಳಾದ ಕ್ಯಾಸನಕೆರೆ ಮತ್ತು ಕುಳಘಟ್ಟದಿಂದ ಟ್ರ್ಯಾಕ್ಟರ್‌ಗಳ ಮೂಲಕ ಸುಮಾರು ಇನ್ನೂರರಷ್ಟು ಮಂದಿ ಮನೆಹಾಳರನ್ನು ಕರೆದುಕೊಂಡು ಬಂದು ಮುಸ್ಲಿಮರ ಪೆಟ್ಟಿಗೆ ಅಂಗಡಿಗಳನ್ನೇ ಗುರಿಯಾಗಿಟ್ಟುಕೊಂಡು ಬೆಂಕಿ ಹಚ್ಚಲು ಪ್ರಾರಂಭಿಸಿದ್ದಾರೆ. ಸುಲೇಮಾನ್‌ಸಾಬ್‌ರ ಅಂಗಡಿಯು ಸೇರಿದಂತೆ ಇಪ್ಪತ್ತು ಅಂಗಡಿಗಳು ಭಸ್ಮವಾಗಿ ಹೋಗಿವೆ. ಇಡೀ ಊರಿಗೆ ಊರೇ ಪ್ರಕ್ಷುಬ್ಧಗೊಂಡಾಗ ಮುಸ್ಲಿಮರು ತಮ್ಮನ್ನು ರಕ್ಷಿಸಿಕೊಳ್ಳಲು ಮನೆಗಳನ್ನು ಸೇರಿಕೊಂಡು ಅಗಳಿ ಹಾಕಿಕೊಂಡಿದ್ದಾರೆ.


ಗಲಭೆ ನಡೆದ ಸ್ವಲ್ಪ ಸಮಯದ ನಂತರ ಪೊಲೀಸರು ಗಲಭೆಯಲ್ಲಿ ಯಾವುದೇ ರೀತಿಯಲ್ಲೂ ಪಾಲ್ಗೊಳ್ಳದ, ಹಿಂದೂಗಳ ಅಂಗಡಿಗಳಿಗೆ ಬೆಂಕಿ ಹಚ್ಚಲು ಮುಂದಾದ ಮುಸ್ಲಿಂ ಯುವಕರನ್ನು ಬೈದು ಅಡ್ಡಗಟ್ಟಿದ್ದ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಸುಲೇಮಾನ್‌ಸಾಬ್ ಮನೆಯ ಬಾಗಿಲು ಬಡಿಯಲು ಪ್ರಾರಂಭಿಸಿದ್ದಾರೆ. ಬಾಗಿಲು ತೆರೆದು ಹೊರಬಂದ ಅವರ ಮೇಲೆಯೇ ಪೊಲೀಸರು ಹಲ್ಲೆ ನಡೆಸಿ ಕೇಸು ದಾಖಲಿಸಿದ್ದಾರೆ. ಸುಲೇಮಾನ್‌ಸಾಬರ ಕುಟುಂಬದ ಏಳೆಂಟು ಮಂದಿಯೊಂದಿಗೆ ಒಟ್ಟು ಐವತ್ತು ಮಂದಿ ಈಗ ದಾವಣಗೆರೆ ಜೈಲಿನಲ್ಲಿದ್ದಾರೆ. ದೈನಂದಿನ ದುಡಿಮೆಯ ಮೇಲೆ ಬದುಕುತ್ತಿದ್ದ ಇವರ ಕುಟುಂಬಗಳೀಗ ಬೀದಿಗೆ ಬೀಳುವ ಪರಿಸ್ಥಿತಿ ಎದುರಾಗಿದೆ.

ಮೊನ್ನೆಯ ಘಟನೆ ನಡೆಯುವುದಕ್ಕೆ ಸರಿಯಾಗಿ ಇಪ್ಪತ್ತು ದಿನಗಳ ಮುಂಚೆ ಇಂತಹದೇ ಘಟನೆ ಸಾಸ್ವೆಹಳ್ಳಿಯಲ್ಲಿ ನಡೆದಿದೆ. ಆಗ ಊರಿನ ಮುಖಂಡರು ಸೇರಿ ತಪ್ಪು ಮಾಡಿದವರಿಗೆ ಬುದ್ಧಿ ಹೇಳಿ ಸರಿಪಡಿಸಿದ್ದಾರೆ. ನ. 16ರಂದು ನನ್ನೂ ಎಂಬ ಹುಡುಗ ಒಂದು ವೇಳೆ ತಪ್ಪು ಮಾಡಿದ್ದರೆ, ಅವನಿಗೆ ಊರವರು ಸೇರಿ ನಾಲ್ಕು ಬಾರಿಸಿ ನಡೆದಿರಬಹುದಾದ ಘಟನೆಯನ್ನು ಅಲ್ಲೇ ತಣ್ಣಗಾಗಿಸಬಹುದಾಗಿತ್ತು. ಆದರೆ ಸಣ್ಣ ಘಟನೆಗೆ ಉಪ್ಪುಖಾರ ಹಚ್ಚಿ ಅಧಿಕಾರದಲ್ಲಿದ್ದೇವೆಂಬ ಅಹಮ್ಮಿನಿಂದ ಸಂಘ ಪರಿವಾರದ ಕೋಮುವಾದಿಗಳು ಒಂದಾಗಿ ಬದುಕುತ್ತಿದ್ದ ಜನರ ನಡುವೆ ಕೋಮು ದ್ವೇಷದ ಬೆಂಕಿ ಹಚ್ಚಿದ್ದೇ ಅಲ್ಲದೇ ವಾಸ್ತವವಾಗಿ ಗಲಭೆಗೆ ನಾಯಕತ್ವ ನೀಡಿದ, ಗಲಭೆಯಲ್ಲಿ ಪಾಲ್ಗೊಂಡ ಬಹುತೇಕರನ್ನು ರಾಜಕೀಯ ಒತ್ತಡದ ಮೂಲಕ ಕೇಸಿನಿಂದ ಹೊರಗುಳಿಸಿಕೊಂಡು ಅಮಾಯಕರನ್ನು ಕೇಸಿನಲ್ಲಿ ಸಿಕ್ಕಿಸಿ ಜೈಲಿಗೆ ಹೋಗುವಂತೆ ಮಾಡಿದ್ದಾರೆ. ಇದಕ್ಕೆ ಪೂರಕವೆಂಬಂತೆ ಪೊಲೀಸರು 51 ಮಂದಿ ಮುಸ್ಲಿಂ ಪುರುಷರು, 9 ಮಂದಿ ಮಹಿಳೆಯರ ಮೇಲೆ ಕೇಸು ಹಾಕಿದ್ದರೆ, 40 ಮಂದಿ ಹಿಂದೂಗಳ ಮೇಲೆ ಕೇಸು ಹಾಕಿದ್ದಾರೆ. ದಾಳಿಗೊಳಗಾಗಿ ಒಪ್ಪೊತ್ತಿನ ಊಟದ ಆಸರೆಯಾಗಿದ್ದ ಗೂಡಂಗಡಿಗಳನ್ನು ಕಳೆದುಕೊಂಡವರನ್ನೇ ಹೆಚ್ಚಾಗಿ ಕೇಸುಗಳಲ್ಲಿ ಸಿಲುಕಿಸಿ, ಗಲಭೆ ನಡೆಸಿದವರನ್ನು ಕೇಸುಗಳಲ್ಲಿ ಕಡಿತಗೊಳಿಸಿರುವುದನ್ನು ನೋಡಿದರೆ ಪೊಲೀಸರು ಪಕ್ಷಪಾತಿಗಳಾಗಿ ವರ್ತಿಸಿರುವುದು ಮೇಲ್ನೋಟಕ್ಕೆ ತಿಳಿಯುತ್ತದೆ. ಗಲಭೆಗೆ ವಸ್ತುವಾದ ನನ್ನೂ ಎಂಬ ಹುಡುಗನನ್ನು ಥಳಿಸುತ್ತಾ ಎಳೆದುಕೊಂಡು ಹೋದರೆಂದು, ಅವನನ್ನು ಕೊಂದು ಹಾಕಿದ್ದಾರೆಂದು ವದಂತಿಗಳು ಹರಡುತ್ತಿವೆ-ನನ್ನೂ ಮಾತ್ರ ಇನ್ನೂ ಪತ್ತೆಯಾಗಿಲ್ಲ!

ಅಧಿಕಾರದಲ್ಲಿದ್ದಾಗಲೇ ಕೋಮುವಾದಿಗಳು ಸಾಸ್ವೆಹಳ್ಳಿಯ ಕೋಮು ಸೌಹಾರ್ದವನ್ನು ಬಲಿ ತೆಗೆದುಕೊಳ್ಳಲು ಹವಣಿಸಿದ್ದಾರೆ. ಈಗ ಅಧಿಕಾರವನ್ನು ಕಳೆದುಕೊಂಡಿದ್ದು ಅದನ್ನು ಮತ್ತೆ ಕಬಳಿಸುವುದಕ್ಕಾಗಿ ಮುಂದಿನ ದಿನಗಳಲ್ಲಿ ಕರ್ನಾಟಕದಾದ್ಯಂತ ಇಂತಹದೇ ಪ್ರಯೋಗಗಳನ್ನು ಮಾಡಿ ತಮ್ಮ ಬಲವನ್ನು ಹೆಚ್ಚಿಸಿಕೊಳ್ಳಲು ಸಂಘ ಪರಿವಾರದ ಕೋಮುವಾದಿಗಳು ಮುಂದಾಗುತ್ತಾರೆ. ಈ ಬಗ್ಗೆ ಜನರು ಎಚ್ಚರ ವಹಿಸದೇ ಇದ್ದರೆ, ಜನಸಾಮಾನ್ಯರ ನೆಮ್ಮದಿ ನಾಶವಾಗುವುದಂತೂ ಖಂಡಿತ ಸತ್ಯ!

■ ಚಂದ್ರಶೇಖರ ತೋರಣಘಟ್ಟ

ಕಿರಣ್ ಪಟೇಲ್ ಸಾವಿನ ಹಿಂದೆ?



ಪತಿ ಮಾಜಿ ಮಂತ್ರಿ ನಾಗಪ್ಪ ಕಾಡುಗಳ್ಳನಿಗೆ ಬಲಿಯಾದರು. ಅಳಿಯ ಕಿರಣ್ ಪಟೇಲ್‌ನನ್ನು ಆತನ ಯೌವನವೇ ತಿಂದು ತೇಗಿತು. ಇನ್ನೇನು ಮಂತ್ರಿಯಾಗುತ್ತಾರೆನ್ನುವಾಗಲೇ ಯಡ್ಡಿ ಸರ್ಕಾರವೇ ನೆಗಿದು ಬತ್ತು. ಪ್ರಾರಬ್ಧವೋ ಕರ್ಮವೋ ಹನೂರಿನ ಜೆಡಿಎಸ್ ಶಾಸಕಿ ಪರಿಮಳ ನಾಗಪ್ಪನವರ ಕಣ್ಣೀರಿಗೆ ಕೊನೆಯೆಂಬುದೇ ಇಲ್ಲ.

ಬಹುಶಃ ನವೆಂಬರ್ 19ರ ಸೋಮವಾರದ ರಾತ್ರಿ ಯಡ್ಡಿ ವಿಶ್ವಾಸಮತ ಗೆದ್ದಿದ್ದರೆ ಮರುದಿನಕ್ಕೇ ಪರಿಮಳ ಮಂತ್ರಿಯಾಗಬೇಕಿತ್ತು. ಏಟಿನ ಮೇಲೆ ಏಟು ಬಿದ್ದಂತೆ ಅದೇ ರಾತ್ರಿ ಅವರ ಅಳಿಯ ಕಿರಣ್‌ಪಟೇಲ್ ಹೆಣವಾಗಿದ್ದ!

ಈ ಕಿರಣ್ ಪಟೇಲ್ ಎಂಬ ಹೆಸರನ್ನು ಜನ ಕೇಳಿದ್ದೇ ಕಾಡುಗಳ್ಳ ವೀರಪ್ಪನ್ ಮಾಜಿ ಮಂತ್ರಿ ನಾಗಪ್ಪನವರನ್ನು ಅಪಹರಿಸಿದ ಮೇಲೆ. ಹುಂಬತನವೋ ಪ್ರಚಾರದ ಚಪಲವೋ; ನಾಗಪ್ಪನವರ ಬಿಡುಗಡೆಗೆ ಸಂಬಂಧಿಸಿದಂತೆ ಆಗಿನ ಎಸ್.ಎಂ. ಕೃಷ್ಣರ ಸರ್ಕಾರ ಏನೆಲ್ಲಾ ಕಸರತ್ತು ನಡೆಸಿತ್ತೋ ಅದೆಲ್ಲವನ್ನೂ ಕಿರಣ್ ಪಟೇಲ್ ಪತ್ರಿಕಾಗೋಷ್ಠಿ ಕರೆದು ಡಂಗುರ ಸಾರುತ್ತಿದ್ದ. ಒಂದು ಹಂತದಲ್ಲಿ ತಾನೇ ಕಾಡುಗಳ್ಳನ ಜೊತೆ ಸಂಧಾನಕ್ಕೆ ಹೋಗಿಬದ್ದೀನಿ ಎಂದು ಪೋಜನ್ನೂ ಕೊಟ್ಟ. ಮೊದಮೊದಲು ಕಾಂಗ್ರೆಸ್ ಸರ್ಕಾರ ಮತ್ತು ಎಸ್ಸೆಮ್ ಕೃಷ್ಣರ ವಿರುದ್ಧ ಕಿಡಿಕಾರುತ್ತಿದ್ದ ಕಿರಣ್ ಪಟೇಲ್ ಆನಂತರ ಜೆಡಿಎಸ್ ನಾಯಕರಿಂದಾಗಿಯೇ ತನ್ನ ಮಾವನವರನ್ನು ವೀರಪ್ಪನ್ ಕೊಂದು ಹಾಕಿದನೆಂದು ಪ್ಲೇಟು ಬದಲಾಯಿಸಿದ.

ಇದೆಲ್ಲಾ ಆತನ ಹುಂಬತನ ಮತ್ತು ಹುಚ್ಚಾಟಕ್ಕೆ ಸಾಕ್ಷಿಯಂತಿದ್ದರೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅತ್ತೆ ಪರಿಮಳ ನಾಗಪ್ಪ ಹನೂರಿನಿಂದ ಜೆಡಿಎಸ್ ಅಭ್ಯರ್ಥಿಯಾದರೆ, ತಾನು ಅವರ ವಿರುದ್ಧವೇ ಕಾಂಗ್ರೆಸ್ ಅಭ್ಯರ್ಥಿಯಾಗಲು ಹೊರಟಿದ್ದ ಕಿರಣ್ ಪಟೇಲ್!



ಕುಟುಂಬದೊಂದಿಗೆ ಕಿರಣ್

ವಿಪರೀತ ಕುಡಿತ, ಮಾದಕ ಡ್ರಗ್ ಚಟ, ಲೈಟ್ ಬ್ಯಾಂಡ್ ಹುಚ್ಚು, ಲಂಪಟ ಜೀವನ ಶೈಲಿ ಎಲ್ಲವೂ ಹೇಗೆ ಶ್ರೀಮಂತ ಯುವಕನೊಬ್ಬನನ್ನು ತಿಂದು ಹಾಕುತ್ತವೆ ಎಂಬುದಕ್ಕೆ ಈತನಿಗಿಂತ ಉದಾಹರಣೆ ಬೇಕಿಲ್ಲ. ಮೂಲತಃ ಜಿ.ಕೆ.ವಿ.ಕೆ.ಯಲ್ಲಿ ಪ್ರೊಫೆಸರ್ ಆಗಿದ್ದ ಡಾ. ರಾಮನಗೌಡ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಡಾಕ್ಟರಿಕೆ ಮಾಡಿಕೊಂಡಿದ್ದ ಡಾ. ಸುನಂದಾರ ಮೊದಲ ಮಗನೇ ಕಿರಣ್ ಪಟೇಲ್. ಈತನಿಗೆ ಸತೀಶ್ ಪಟೇಲ್ ಎಂಬ ತಮ್ಮನೂ ಇದ್ದಾನೆ.

ದಾವಣಗೆರೆಯ ಬಾಪೂಜಿ ಮೆಡಿಕಲ್ ಕಾಲೇಜಿನಲ್ಲಿ ಎಂಬಿಬಿಎಸ್ ಓದಿಕೊಂಡಿದ್ದ ಕಿರಣ್ ಪಟೇಲ್‌ಗೆ ಅಲ್ಲೇ ಮೆಡಿಕಲ್ ಓದುತ್ತಿದ್ದ ನಾಗಪ್ಪನವರ ಪುತ್ರಿ ಪ್ರಿಯಾಂಕಾ ಪರಿಚಿತಳಾಗಿದ್ದು, ಅದು ಪ್ರೇಮಕ್ಕೆ ತಿರುಗಿ, ಇಬ್ಬರೂ ಮದುವೆಯಾಗಿದ್ದು, ಇಷ್ಟವಿಲ್ಲದಿದ್ದರೂ ನಾಗಪ್ಪನವರೇ ನಿಂತು ಮದುವೆ ಮಾಡಿದ್ದು ಹಳೇ ಕತೆ.

ಸುಸಂಸ್ಕೃತ ಹಿನ್ನೆಲೆ, ಓದಿದ್ದು ಎಂಬಿಬಿಎಸ್ ಆದರೂ ಕಿರಣ್ ವೈದ್ಯವೃತ್ತಿಗೆ ನಿಲ್ಲದೇ ಬೆಂಗಳೂರಿನ ಶೋಕಿಗೆ ಬಿದ್ದ. ಬರುಬರುತ್ತಾ ವರದಕ್ಷಿಣೆಗಾಗಿ ಹೆಂಡತಿಯನ್ನು ಪೀಡಿಸುತ್ತಿದ್ದ. ವೀರಪ್ಪನ್ ತನ್ನನ್ನು ಹೊತ್ತೊಯ್ದು ಕಾಡಿನಲ್ಲಿಟ್ಟುಕೊಂಡಾಗಲೂ ತನ್ನ ಡೈರಿಯಲ್ಲಿ ಬೆಳ್ಳುಳ್ಳಿ ಮಾರಿ ಆತನಿಗೆ ದುಡ್ಡು ಕೊಡಿ ಎಂದು ನಾಗಪ್ಪ ಬರೆದಿದ್ದು ಬಹುಶಃ ಈ ಕಾರಣಕ್ಕೇ ಇರಬೇಕು.

ನಾಗಪ್ಪ ಪ್ರಕರಣ ಮುಗಿದ ನಂತರವೂ ಕಿರಣ್ ಪಟೇಲ್ ಬಗ್ಗೆ ಆತ ರೆಸಿಡೆನ್ಸಿ ರಸ್ತೆಯ ಚಾಚ ಟವರ್‌ನಲ್ಲಿ ಶುರುಹಚ್ಚಿಕೊಂಡ ಬ್ಯಾಂಡ್ ದಂಧೆಯ ಬಗ್ಗೆ ಪತ್ರಿಕೆಗಳು ಬರೆಯುತ್ತಲೇ ಇದ್ದವು. ವಯಸ್ಸು ಮೂವತ್ತಾರಾದರೂ ಕುಡಿದು ಮೈಯೆಲ್ಲಾ ಊದಿಕೊಂಡು ತಲೆ ಕೂದಲೆಲ್ಲ ಉದುರಿಹೋಗಿದ್ದ ಕಿರಣ್ ರೋಗಿಯಂತೆ, ಕೆಲವೊಮ್ಮೆ ಮುದುಕನಂತೆ ಕಾಣುತ್ತಿದ್ದ. ರೆಸಿಡೆನ್ಸಿ ರಸ್ತೆಯಲ್ಲಿ ಆ… ಲೈಸೆನ್ಸಿಲ್ಲದೇ ನಡೆಸುತ್ತಿದ್ದ ಲೈವ್‌ಬ್ಯಾಂಡ್‌ಗೆ ದೀಕೆ ಅಧಿಕಾರ… ಲ್ಲಿರುವಷ್ಟು ದಿನ ರಕ್ಷಣೆಯಿತ್ತು. ಕಾಂಗ್ರೆಸ್ ಸರ್ಕಾರ ಬಿದ್ದಿದ್ದೇ… ಕಿರಣ್ ಬೆಂಗಳೂರಿನ ಹೊರವಲಯದಲ್ಲಿ ಕದ್ದೂಮುಚ್ಚಿ ನಡೆಯುತ್ತಿದ್ದ ಬ್ಯಾಂಡ್ ದಂಧೆಗೆ ಕೈಯಿಟ್ಟ.

ಬಹುಶಃ ಯಲಹಂಕ ಹೊರವಲಯದ ಬಾಗಲೂರಿನ… ತನ್ನ ಸಂಬಂಧಿಯೊಬ್ಬರ ಎಸ್ಟೇಟಿನಲ್ಲಿ ಕಿರಣ್ ಬ್ಯಾಂಡ್ ದಂಧೆ ನಡೆಸುತ್ತಿದ್ದನೆ? ಸೋಮವಾರ ನಡುರಾತ್ರಿ ತನ… ಬ್ಯಾಂಡ್ ನಡೆಸಿ ತಾನೂ ಕಂಠಮಟ್ಟ ಕುಡಿದು ಬೆಳಗಿನ ಜಾವದ ಹೊತ್ತಿಗೆ ಬಂದು ಮಲಗಿದವನಿಗೆ ಹೃದಯಾಘಾತ… ವಾಯಿತೆ?

ಸದ್ಯ ಪೋಸ್ಟ್‌ಮಾರ್ಟಂ ಮಾಡಿದ ವೈದ್ಯರು ಕಿರಣ್ ಪಟೇಲ್ ಹೃದಯಾಘಾತಕ್ಕೀಡಾಗಿ ಸತ್ತಿದ್ದನ್ನು ಸಮರ್ಥಿಸುತ್ತ… ರಾದರೂ ಹಾರ್ಟ್ ಅಟ್ಯಾಕ್ ಆಗಲು ಇಂಥದ್ದೇ ಕಾರಣ… ಎಂದು ಗೊತ್ತಾಗಲು ಇನ್ನೂ ಸಮಯಬೇಕು. ಆದ… ಕಿರಣ್ ಪಟೇಲ್ ತಂದೆ ತಾಯಿ ಮಾತ್ರ ಆತನ ಪಾರ್ಟನರ್ ರಾಜೇಶ್ ಎಂಬಾತನೇ ಇಷ್ಟಕ್ಕೆಲ್ಲ ಕಾರಣ ಎನ್ನುತ್ತಾರೆ. ಈ… ರಾಜೇಶನೇ ಸೋಮವಾರ ರಾತ್ರಿ ಕಿರಣ್‌ನನ್ನು ಆತನ… ಮನೆಗೆ ಡ್ರಾಪ್ ಮಾಡಿ ಹೋದಾತ. ತಾನು ಪತ್ರಕರ್ತನೆಂದು ಪೋಜು ಕೊಡುವ ಈ ರಾಜೇಶ್, ಕಿರಣ್ ಪಟೇಲ… ಎಲ್ಲಾ ದಂಧೆಗಳ ಪಾಲುದಾರ. ನಾಗಪ್ಪ ಅಪಹರಣ… ಕಾಲಕ್ಕೆ ಗಂಟುಬಿದ್ದ ಈತನೇ ಕಿರಣ್‌ನನ್ನು ಲೈವ್‌ಬ್ಯಾಂಡ್ ದಂಧೆಗೆ ಎಳೆದ. ಅಸಲಿಗೆ ಈತ ಪತ್ರಕರ್ತನೇ ಅಲ್ಲವಾದರೂ… ಆಗಾಗ ಪ್ರೆಸ್‌ಕ್ಲಬ್ಬಿನಲ್ಲಿ ಅಡ್ಡೆ ಹಾಕುತ್ತಾನೆ. ಕಿರಣ್ ಪ… ಪ್ರಿಯಾಂಕಾ, ಆತನ ಮನೆಯವರು, ತಂದೆ-ತಾಯಿ ಎಲ್ಲ… ಜೊತೆಗೆ ವಿಪರೀತ ಸಲಿಗೆ ಸಾಧಿಸಿದ ರಾಜೇಶ್‌ನ ಪಾಲು… ದಾರಿಕೆಯಲ್ಲಿ ಕಿರಣ್ ಯಾವ್ಯಾವುದೋ ವ್ಯವಹಾರ… ಬಂಡವಾಳ ಹಾಕಿದ್ದ.

ಬಹುಶಃ ಇದೇ ಆತನ ಸಾವಿಗೆ ಮೂ… ವಾಯಿತೆ? ನಕಲಿ ಪತ್ರಕರ್ತ ರಾಜೇಶ್ ಮ… ಆತನ ಇನ್ನೊಬ್ಬ ಸಹಚರ ಮಹೇಶ್‌ರೇ ತಮ… ಮಗನ ಸಾವಿಗೆ ಕಾರಣ ಎಂಬ ಗುಮಾನಿ ತಂ… ಡಾ. ರಾಮನಗೌಡರಿಗಿದೆ. ಒಂದು ಪಕ್ಷ ಕಿರಣ್ ಕೊಲೆಯಾಗದೇ ಇದ್ದರೂ ಆತನ ಸಾವಿಗೆ, ಆತ… ಲಂಪಟ ಬದುಕಿಗೆ ಈ ರಾಜೇಶ್ ಎಂಬಾತನ… ಕಾರಣಕರ್ತ ಎಂಬುದಂತೂ ಸತ್ಯ. ಕಿರಣ್ ನಿಜಕ್ಕೂ… ತನ್ನ ಪತ್ನಿ ಪ್ರಿಯಾಂಕಾಳನ್ನು ಹಿಂಸಿಸುತ್ತಿದ್ದನೆ? ಆ… ಡ್ರಗ್ ವ್ಯಸನಿಯೆ? ಆತನಿಗೂ ಬೆಂಗಳೂರಿ… ಡಿಸ್ಕೋಥೆಕ್‌ಗಳಲ್ಲಿ ಡ್ರಗ್ ರ‍್ಯಾಕೆಟ್ ನಡೆಸುತ್ತಿದ್ದ ಸ… ಜೈಲಲ್ಲಿರುವ ಸಂಗೀತ್ ಎಂಬಾತನಿಗೂ ಏನು ಸಂಬಂಧ…

ಈ ಬಗ್ಗೆ ತನಿಖೆಯಾಗಬೇಕಿದೆ. ಎಲ್ಲಕ್ಕೂ ಮಿಗಿಲಾ… ಬೆಂಗಳೂರಿನ ಶೋಕಿಗೆ ಬಿದ್ದು ಕಿರಣ್ ಪಟೇಲ್ ಹೇ… ನಾಶವಾದ ಎಂಬುದು ಎಂ.ಪಿ. ಪ್ರಕಾಶ್‌ರ ಮಗ ರವೀಂ… ಕುಮಾರಸ್ವಾಮಿ ಮಗ ನಿಖಿಲ್ ಗೌಡ, ಸಿದ್ದು ಮ… ರಾಕೇಶ್, ಖರ್ಗೆ ಪುತ್ರ ಪ್ರಿಯಾಂಕ ಖರ್ಗೆ, ಚೆನ್ನಿಗ… ಮಗ ಗೌರಿಶಂಕರರಂಥವರಿಗೆ ಪಾಠವಾಗಬೇಕಿದೆ. ಜಾಫ… ಷರೀಫ್ ಮಗ ಮುನ್ನಾ ಸುಖಪಟ್ಟೇ ಕುಡಿದೇ ಸ… ಹೆಗಡೆ ಮಗ ಭರತ್ ಹೆಗಡೆ ಕುಡಿಕುಡಿದೇ ರೋಗಿಯಾ… ಕಟ್ಟಾನಾಯ್ಡು ಪುತ್ರ ಜಗದೀಶ್ ಶೋಕಿಗೆ ಬಿದ್ದೇ ಕುಲಗೆ… ಯಡ್ಡಿ ಮಕ್ಕಳದ್ದೂ ಇದೇ ಕತೆ. ತೀರ ಇತ್ತೀಚೆಗೆ ನೇಣ… ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡ ಹರಿಹರದ ಮಾ… ಮಂತ್ರಿ ನಾಗಪ್ಪರ ಪುತ್ರ ಕಿರಣ್, ಬಜೆಪಿ ನಾಯಕ ಈಶ್ವರ… ಮಗ ಕಾಂತೇಶ್, ಭದ್ರಾವತಿಯ ಮಾಜಿ ಶಾಸಕ ಅಪ್ಪಾ… ಗೌಡನ ಮಗ ಅಜೀತ್, ಮಾಜಿ ಮಂತ್ರಿ ಶಿವಪ್ಪನ ಮ… ನಾಗರಾಜ್, ಬಿ.ಟಿ. ಲಲಿತಾನಾಯಕ್ ಮಗ ಓಂಪ್ರಕಾ… ಇತ್ಯಾದಿಗಳೆಲ್ಲರದೂ ಒಂದೇ ಕತೆ, ಅದೇ ವ್ಯಥೆ!

ಸುಖದ ಬುಡದಲ್ಲೇ ಸಾವು ಮನೆ ಮಾಡು… ಎಂಬುದನ್ನು ಇವರಿಗೆ ತಿಳಿಸಿ ಹೇಳುವವರ‍್ಯಾರು?

■ ರಾ.ಸೋ…



ಬೀದರ್: ಭೂಗಳ್ಳರಿಗೆ ಡೈನಾಮಿಕ್ ಡಿಸಿ ಹರ್ಷಗುಪ್ತನ ಗುದ್ದು

ಬಹಳಷ್ಟು ವರ್ಷಗಳ ಅನಂತರವಾದರೂ ಬೀದರ ಜಿಲ್ಲೆಗೆ ಒಬ್ಬ 'ಡೈನಾಮಿಕ್ ಜಿಲ್ಲಾಧಿಕಾರಿ' ಹರ್ಷಗುಪ್ತ ಬಂದಿದ್ದಾರೆ. ಇಲ್ಲಿಗೆ ಬರುತ್ತಲೇ 'ಬುಲ್ಡೋಜರ್' ಹೊತ್ತುಕೊಂಡೇ ಬಂದರು ಎಂಬಂತೆ ಅಡ್ಡದಿಡ್ಡವಾಗಿ ಬೆಳೆದಿದ್ದ ನಗರದ ಮುಖ್ಯ ರಸ್ತೆಗಳನ್ನು ಮಟ್ಟಸಗೊಳಿಸುತ್ತಿದ್ದಾರೆ. ಮೆಡಿಕಲ್ ಕಾಲೇಜಿನ ಎದುರುಗಡೆಯ ಎಲ್ಲಾ ಅನಧಿಕೃತ ಕಟ್ಟಡಗಳನ್ನು ನೆಲಸಮಗೊಳಿಸಿದ್ದಾರೆ. ಪ್ರತಿಷ್ಠಿತ ನಾಯಕರಿಗೆ ಸಂಬಂಧಿಸಿದ ಅಶೋಕಾ ಹೋಟೆಲ್, ಮುದ್ದಣ್ಣಾ ಕಾಂಪ್ಲೆಕ್ಸ್ ತರಹದ ಕಟ್ಟಡಗಳನ್ನು 'ಡೆಮಾಲಿಶ್' ಮಾಡುವ ಮೂಲಕ ಭೂಗಳ್ಳರ ಸೊಂಟ ಮುರಿದಿದ್ದಾರೆ. ನಗರದ ಜನವಾಡ ರಸ್ತೆ, ಬಸವೇಶ್ವರ ವೃತ್ತದ ಚಿದ್ರಿರಸ್ತೆ, ಮಹಾವೀರ ವೃತ್ತದಿಂದ ಮನಳ್ಳಿ ರಸ್ತೆ, ಅಂಬೇಡ್ಕರ ವೃತ್ತದಿಂದ ಗವಾನಚೌಕ್, ನಯಾಕಮಾನದಿಂದ ಚೌಬಾರವರೆಗಿನ ಮುಖ್ಯ ದಾರಿಗಳನ್ನು ಹೆದ್ದಾರಿಯನ್ನಾಗಿ ಮಾಡಿದ್ದಾರೆ. ಹೀಗೆ ಮಟ್ಟಸಗೊಳಿಸುವಾಗ ಸರಕಾರಿ ಜಾಗವನ್ನು ತಮ್ಮ ಅಪ್ಪನ ಜಾಗವೆಂದೇ ಕಬಳಿಸಿಕೊಂಡಿದ್ದ ಖಬರಗೇಡಿ ರಾಜಕಾರಣಿಗಳ ಉಸಿರೆತ್ತುವುದಕ್ಕೂ ಆಸ್ಪದ ನೀಡಿಲ್ಲ. ಗುರುಪಾದಪ್ಪ ನಾಗಮಾರಪಲ್ಲಿ, ಬಂಡೆಪ್ಪ ಕಾಶಂಪುರ, ಲೋಕಸಭಾ ಸದಸ್ಯ ನರಸಿಂಗ್ ರಾವ್ ಸೂರ್ಯವಂಶಿ ಮುಂತಾದವರು ಬೇಕಾದಷ್ಟು ಎಕರಲಾಡಿದರೂ ಅವರ ಮಾತಿಗೆ 'ಕ್ಯಾರೆ' ಅನ್ನದೆ ತಮ್ಮ ಕೆಲಸವನ್ನು ಎಡೆಬಿಡದೆ ಮುನ್ನಡೆಸಿದ್ದಾರೆ. ಜಿಲ್ಲಾಧಿಕಾರಿಯ ಈ ಕಾರ್ಯಾಚರಣೆಯನ್ನು ಸಹಿಸದ ಮಾಜಿ ನಗರಸಭಾ ಅಧ್ಯಕ್ಷ ಚಂದ್ರಪ್ಪ ಪಾಟೀಲ ಅಡ್ಡಿಪಡಿಸಿದಾಗಲೂ ಅದಕ್ಕೆ ಹೆದರದೆ ಆತನನ್ನೇ ಜೈಲಿಗೆ ತಳ್ಳಿದ್ದಾರೆ.

ಜಿಲ್ಲೆಯ ತಾಲೂಕುಗಳಾದ ಔರಾದ, ಭಾಲ್ಕಿ, ಹುಮನಾಬಾದ, ಬಸವಕಲ್ಯಾಣ ಮುಂತಾದೆಡೆಗೂ ಈ ಕಾರ್ಯವನ್ನು ಈಗಾಗಲೇ ವಿಸ್ತರಿಸಿದ್ದಾರೆ. ಇದರಿಂದ ಸರಕಾರಿ ಭೂಮಿಯನ್ನು ಒತ್ತುವರಿಗೊಳಿಸಿಕೊಂಡಿರುವ ರಾಜಕಾರಣಿಗಳು ಒಳಗೊಳಗೆ ಕುಪಿತಗೊಂಡು ಬೆವರೊರೆಸಿಕೊಳ್ಳುತ್ತಿದ್ದಾರೆ. ಮಲ್ಲಿಕಾರ್ಜುನ ಖೂಬಾ ಎಂಬ ನರಸತ್ತ ಶಾಸಕನಂತೂ ಬಸವಕಲ್ಯಾಣದಲ್ಲಿ ಜಿಲ್ಲಾಧಿಕಾರಿಗಳ ಈ "ಡೆಮಾಲಿಶ್ ಕಾರ್ಯಾಚರಣೆಗೆ ಅವಕಾಶ ನೀಡುವುದಿಲ್ಲ" ಎಂದು ಬೊಗಳಿದ್ದಾನೆ. ಜೊತೆಗೆ "ಬಸವಕಲ್ಯಾಣ ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿ ಬರುವುದರಿಂದ ಸರಕಾರಿ ಜಾಗಗಳನ್ನು ತೆರವುಗೊಳಿಸುವ ಅಧಿಕಾರ ಜಿಲ್ಲಾಧಿಕಾರಿಗಳಿಗೆ ಇಲ್ಲ" ಎಂದು ಹೇಳಿ ತನ್ನ ದಡ್ಡತನ ಪ್ರದರ್ಶಿಸಿದ್ದಾನೆ. ಆದರೆ ಭಾಲ್ಕಿಯ ಜನತೆ ಮಾತ್ರ ಜಿಲ್ಲಾಧಿಕಾರಿಯ ಕಟ್ಟುನಿಟ್ಟಿನ ಈ ಆದೇಶಕ್ಕೆ ಬೆಲೆಕೊಟ್ಟು ಸ್ವಯಂಸ್ಫೂರ್ತಿಯಿಂದ ಸರಕಾರಿ ಒತ್ತುವರಿ ಭೂಮಿಯನ್ನು ತೆರವುಗೊಳಿಸಿದ್ದಾರೆ.

ಇದರಿಂದ ಸ್ಪಂದಿಸಿದ ಜಿಲ್ಲಾಧಿಕಾರಿ ಹರ್ಷಗುಪ್ತ ಕೂಡ ನಿರಾಶ್ರಿತರಿಗೆ ಪುನರ್ವಸತಿ ಕಲ್ಪಿಸುವ ಭರವಸೆಯನ್ನು ನೀಡಿದ್ದಾರೆ. ಈಗಾಗಲೇ ನೌಬಾದ ಹತ್ತಿರ 30 ಎಕರೆ ಭೂಮಿಯನ್ನು ಖರೀದಿಸಿ ಮುಕ್ತಾಸಿಕ್ ಜನರಿಗ ಆಟೋ ನಗರವನ್ನು ನಿರ್ಮಿಸುವ ಆಲೋಚನೆಯಲ್ಲಿದ್ದಾರೆ.

ಡೆಮಾಲಿಶನ್ ಕಾರ್ಯಾಚರಣೆಯ ಜೊತೆಗೆ ಸಾಮಾನ್ಯ ಜನರ ಸಂಕಟಗಳಿಗೆ ಕೂಡಲೇ ಸ್ಪಂದಿಸುವ, ಅವರ ನೋವುಗಳಿಗೆ ಧ್ವನಿಯಾಗುವ ಇಂಥ ಐಎಎಸ್ ಅಧಿಕಾರಿ ಎಲ್ಲೇ ಇದ್ದರೂ ಜನ ಬೆಂಬಲಿಸುತ್ತಾರೆ. ಆದರೆ ಇವರನ್ನು ಜಿಲ್ಲೆಯಿಂದಲೇ ಎತ್ತಂಗಡಿ ಮಾಡಿಸಬೇಕೆಂದು ಪುಢಾರಿಗಳು ಆಗಲೇ ಸ್ಕೆಚ್ ರೆಡಿಮಾಡಿಟ್ಟುಕೊಂಡಿದ್ದಾರೆ. ನಮ್ಮ ರಾಜ್ಯದ ರಾಜ್ಯಪಾಲರು ಪುಢಾರಿಗಳ ಧ್ವನಿಗೆ ಧ್ವನಿಯಾಗುತ್ತಾರೋ? ಜನಸಾಮಾನ್ಯರ ಆಶಯಗಳಿಗೆ ಸ್ಪಂದಿಸುತ್ತಾರೋ ? ಕಾದು ನೋಡಬೇಕು.

■ ವಿಶ್ವಾರಾಧ್ಯ ಸತ್ಯಂಪೇಟೆ

ಕೊಟ್ರೆ ಕೊಡ್ತಿವಿ ಇಲ್ಲಾಂದ್ರೆ ಇಲ್ಲ ಅಂತ ಹೇಳಿರಲಿಲ್ವ?

ಘೂತ್ತೇರಿ

■ ಯಾಹೂ

ಮನಸ್ಸಿಗೆ ಮುತ್ತಿಕೊಂಡ ಬೇಸರ ನೀಗಿಕೊಳ್ಳಲು ಯಾರಿಗಾದರೂ ಫೋನ್ ಮಾಡಿದರೆ ಹೇಗೆ ಅನ್ನಿಸಿತು. ಕುಮಾರಸ್ವಾಮಿ, ದೇವೇಗೌಡ, ಎಡೂರಪ್ಪ ಯಾರನ್ನ ಮಾತನಾಡಿಸಿದರೂ ಅವರು ಕೊಡುವ ಉತ್ತರಗಳೂ ಗೊತ್ತಿದ್ದರಿಂದ ದಿಕ್ಕು ಕಾಣದೆ ಮಿರಾಜುದ್ದೀನ್ ಪಟೇಲರಿಗೆ ಮಾಡಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಖುಷಿಯಾಯ್ತು, ಅನಿವಾರ್ಯವಾಗಿ ಫೋನ್ ಮಾಡಿದರೆ ಸಿಕ್ಕೇಬಿಟ್ಟರು.

"ಹಲೋ ಸಾರ್, ನಮಸ್ಕಾರ ಸಾರ್."

"ಯಾರು ಹೇಳಿ?"

"ನಾನು ಪತ್ರಕರ್ತ ಸಾರ್. ಒಂದೆರಡು ಮಾತಾಡಬೇಕು."

"ಪಾರ್ಟಿ ಆಫೀಸಿಗೆ ಬನ್ನಿ."

"ಅಲ್ಲಿಗೆ ಬಂದ್ರೆ ಲೇಟಾಗುತ್ತೆ ಸಾರ್, ಹೀಗೆ ಎರಡು ಮಾತಾಡಿ ಸಾರ್."

"ಎರಡು ಮಾತು ಏನು ನೂರ್‍ಗೆ ಕೇಳಿ ಹೇಳ್ತಿನಿ."

"ಏನ್ಸಾರ್ ತುಂಬ ಖುಷಿಯಾಗಿದ್ದೀರಿ?"

"ನಾನು ಏನಪ್ಪಾಂದ್ರ ಯಾವಾಗ್ಲು ಖುಷಿನೆ. ಅದ್ಕೆ ನಮ್ದು ಪಾರ್ಟಿ ಏನದಲ್ಲಾ ಅದ್ರಲ್ಲಿ ಇರೋ ಎಲ್ರೂ ಖುಷಿಯಾಗಿದ್ದಾರೆ."

"ಎಲ್ಲಿ ಸಾರ್ ಖುಷಿಯಾಗಿದ್ದಾರೆ? ಕೆಲವುರಾಗ್ಲೆ ಬಜೆಪಿ ಕಡೆ ಹೋಗ್ತಾಯಿದಾರೆ. ಇನ್ನು ಕೆಲವರು ಕಾಂಗ್ರೆಸ್ ಕಡೆ ನೋಡ್ತಾಯಿದಾರೆ?"

"ನೋಡ್ರಿ ಬಿಡಿ. ನಮ್ಗೆ ಏನಪ್ಪಾಂದ್ರ ನಮ್ದು ದೇವೇಗೌಡ ಸಾಹೇಬ್ರು ಏನಿದಾರಲ್ಲಾ, ಅವ್ರು ಯಾರ್‍ಗೆ ಹೋದ್ರು ಕೇರ್ ಮಾಡಲ್ಲ. ನಮ್ದು ರೇವಣ್ಣ ಸಾಹೇಬ್ರೂ ಅಷ್ಟೇ."

"ಆತ ಮೊದಲಿಂದ್ಲೂ ಒಬ್ನೆ ಅಲವ ಸಾರ್ ಇರೋದು?"

"ಎಲ್ಲಿ ಒಬ್ಬರೆ ಇದಾರೆ? ಅವ್ರುಗ್ಗ ತಮ್ಮ ಕುಮಾರಸ್ವಾಮಿ ಇದೆ, ಬಾಲಕಿಷ್ಣೇಗೌಡ ಇದೆ, ಡಾಕ್ಟರು ರಮೇಶ್‌ಗೌಡ ಇದೆ, ಅವುರು ಒಟ್ಟು ನಾಲ್ಕು ಜನ ಇದೆ. ಒಬ್ರೆ ಇಲ್ಲ."

"ಅಂಗಲ್ಲ ಸಾರ್ ನಾನೇಳಿದ್ದು, ರೇವಣ್ಣ ಯಾವಾಗ್ಲು ಒಬ್ನೆ ಇರೋದು, ಅಂತ ಸಂಘಟಕ ಅಲ್ಲ."

"ಸಂಗಟನೆ ಏನಪ್ಪಾಂದ್ರೆ ನಾವು ಮಾಡ್ತಿವಿ ಅಲ್ವಾ? ಅದ್ಕೆ ಅವುರು ಆರಾಮ್ಗೆ ಇದಾರೆ."

"ಕಡೆಗೂ ನೀವು ಬಜೆಪಿಗಳಿಗೆ ಕೈ ಕೊಟ್ಬೆ ಬಟ್ರಲ್ಲ ಸಾರ್?"

"ನಾನು ಮೊದ್ಲೆ ನಿಮ್ಗೆ ಹೇಳಿದ್ದೆ ಅಲವಾ? ನಾವು ಕೊಟ್ರೆ ಕೊಡ್ತಿವಿ ಇಲ್ಲ ಅಂದ್ರೆ ಇಲ್ಲ, ಈಗ ಅದೇ ಮಾಡಿದ್ದೀವಿ. ಅದ್ರಲ್ಲಿ ವಿಶೇಸ ಏನೂ?"

"ಅಂದ್ರೆ ನೀವು ಆಡಿದ ಮಾತ ಉಳಿಸಿಕೊಂಡ್ರಿ?"

"ಫಿರ್, ಮಾತು ಅಂದಮೇಲೆ ಮಾತು. ನಮ್ದು ಬಿಸಿನೆಸ್‌ನಲ್ಲಿ ನಾವು ಯಾರ್‍ಗೆ ಮೋಸ ಮಾಡಿಲ್ಲ. ಇಪ್ಪತ್ತು ತಿಂಗಳು ಕತಮ್ ಆಗುವಾಗ ಕೊಟ್ರೆ ಕೊಡ್ತಿವಿ, ಇಲ್ಲಾಂದ್ರೆ ಇಲ್ಲ ಅಂತ ನಾನು ಹೇಳಿದ್ದು ಮಾತು ನಮ್ದು ರಾಷ್ಟ್ರೀಯ ನಾಯಕ್ರು ದೇವೇಗೌಡ್ರು ಉಳಿಸಿಕೊಂಡಿದೆ."

"ಕುಮಾರಸ್ವಾಮಿ ಭವಿಷ್ಯ ಮುಗಿಸಿದರಲ್ಲಾ ಸಾರ್?"

"ಕುಮಾರಸ್ವಾಮಿದು ಭವಿಷ್ಯ ಏನಾಗಿಲ್ಲ! ಅವುರ್ದು ಚೆನ್ನಾಗಿ ಇದೆ. ನಮ್ಮ ರೇವಣ್ಣ ಸಾಹೇಬ್ರುದು ಚೆನ್ನಾಗಿದೆ. ನಮ್ಮ ರಾಷ್ಟ್ರೀಯ ನಾಯಕ್ರು ದೇವೇಗೌಡ್ರುದು ತುಂಬಾ ಚೆನ್ನಾಗಿದೆ."

"ಏನು ಚೆನ್ನಾಗಿದೆ ಸಾರ್?"

"ಭವಿಸ್ಯ ಕಂಡ್ರಿ, ರಾಜಕೀಯದ್ದು ಭವಿಸ್ಯ! ಏನಪ್ಪಾಂದ್ರೆ ಯಾರಿಗೆ ಇಲ್ಲ ಇವರಿಗೆ ಅಷ್ಟು ಚೆನ್ನಾಗಿದೆ."

"ಸರಿ, ಇವುರ ನಂಬದೋರ ಭವಿಷ್ಯ ಹೇಳಿ?"

"ಅವುರಿಗೆ ಎಲ್ಲಾ ಚೆನ್ನಾಗಿದೆ. ಎಂ.ಪಿ. ಪ್ರಕಾಶ್ ಅವುರು ನಮ್ಗೆ ನಾಯಕ್ರಾಗಿದ್ರು, ಅವುರ್ದು ಚೆನ್ನಾಗಿದೆ."

"ಅವುರು ಮುಂದೆ ಎಲೆಕ್ಷನ್‌ಗೆ ನಿಲ್ಲದಿಲವಂತೆ?"

"ನಿಲ್ಲೋದಿಲ್ಲ ಅಂದ್ರೆ ಏನಾತು? ಯಾರ್‍ಗೆ ಇಲಕ್ಷನ್‌ಗೆ ನಿಲ್ತರೆ, ಅವ್ರುದ್ದು ಕಾನ್ಸ್‌ಟುಯನ್ಸಿಗೆ ಹೋಗಿ ಬಾಸಣ ಮಾಡ್ತರೆ. ಗೈಡ್ ಮಾಡ್ತರೆ. ಎಲೆಕ್ಷನ್‌ದು ಪಾರಂ ಪಿಲಪ್ ಮಾಡಿ ಕೊಡ್ತರೆ. ಬಾಸಣಗೆ ಹೇಳಿಕೊಡ್ತರೆ. ನಮ್ದು ನಾಯಕರು ಕುಮಾರಸ್ವಾಮಿ ಸಿಎಂ ಆಗಿದ್ದಾಗ ಪರಕಾಶ್ ಏನೇನು ಸಪೋರ್ಟ್ ಮಾಡಿದ್ರು ಅದನ್ನ ಮುಂದೆ ಎಲ್ಲಾರ್‍ಗೆ ಮಾಡ್ತರೆ."

"ಅವುರ ಭವಿಷ್ಯ ಅಷ್ಟೆ ಅಂತಿರಾ?"

"ಇನ್ನೂ ಏನಾಗಬೇಕು? ಡಿಸಿಎಂ ಆಗಿದ್ರು, ಹೋಂ ಮಿನಿಸ್ಟರ್ ಆಗಿದ್ರು, ಅದು ನಮ್ದು ರಾಷ್ಟ್ರೀಯ ನಾಯಕ್ರು ದೇವೇಗೌಡ್ರು ಮನಸು ಮಾಡಿದ್ರಿಂದ ಪರಕಾಶ್‌ದು ನಸೀಬ್ ಚೆನ್ನಾಗಿ ನಡಿತು. ಮುಂದೆ ನಮ್ದು ಮೆಜಾರಿಟ ಬಂದಾಗ ಪರಕಾಶ್‌ಗೆ ಏನಪ್ಪಾಂದ್ರೆ ಡಿಸಿಎಂಗೆ ಆಗಬಹುದು."

"ನೀವೇನಾಗ್ತೀರಿ ಸಾರ್?"

"ನಂದು ಕಾತೆ ಬಗ್ಗೆ ನಾನು ಈಗ್ಲೆ ಹೇಳಲ್ಲ. ಪರಕಾಶ್ ನಂಗೆ ಡಿಸಿಎಂ ಬೇಡ ಅಂದ್ರೆ ದೇವೇಗೌಡಾಜಿಯವರು ನನ್ಗೆ ಅದು ಜವಾಬ್ದಾರಿ ಕೊಡಬವುದು. ರಾಜಕೀಯದಲ್ಲಿ ಏನು ಬೇಕಾದ್ರು ಆಗಬಹುದು."

"ಜನಗಳು ಬಜೆಪಿಗೆ ಯಾಕ್ ಸಪೋರ್ಟು ಮಾಡಲಿಲ್ಲ ಅಂದ್ರೆ ಏನೇಳ್ತೀರಿ ಸಾರ್?"

"ಅದು ಯಲ್ಲ ನಿಮ್ಗೆ ಯಾಕೆ? ಓಟು ಕೊಡಿ ಅಷ್ಟೆ ಅಂತ ಕೇಳ್ತೀವಿ. ಇನ್ನು ಕೇಳಿದ್ರೆ ಡಿಟೈಲಾಗಿ ಎಲ್ಲಾ ಹೇಳ್ತಿವಿ."

"ಏನ್ ಡಿಟೈಲ್ ಸಾರ್?"

"ಏನಪ್ಪಾ ಅಂದ್ರೆ, ಬಜೆಪಿಗಳಿಗೆ ನೋಡಿದ್ರೆ ಅಲುಪಸಂಖ್ಯಾತ, ಹಿಂದುಳಿದ ವರಗದವುರು, ದಲಿತ್ರು ಹೆದರತರೆ. ನಮ್ದು ನೋಡಿದ್ರೆ ಹೆದ್ರಲ್ಲ ಯಾಕೆ ಹೇಳಿ?"

"ನೀವೇ ಹೇಳಿ?"

"ನಾವು ಒಳ್ಳೆ ಜನ. ಯಾರ್‍ಗೆ ತೊಂದ್ರೆ ಮಾಡಲ್ಲ, ಯಾರ್‍ದು ಸವಾಸ್‌ಗೆ ಹೋಗಲ್ಲ, ನಮ್ದು ರಾಷ್ಟ್ರೀಯ ನಾಯಕ್ರ ದೇವೇಗೌಡ ಹೇಳಿದ್ದು ಕೇಳಿಕೊಂಡು ಸುಮ್ಮನೆ ಇದ್ದು ಬಡ್ತಿವಿ. ಅವುರು ಏನಪ್ಪಾಂದ್ರೆ ಕೆಲ್ಸ ಹೇಳಿದ್ರೆ ಮಾಡ್ತಿವಿ, ಇಲ್ಲ ಅಂದ್ರೆ ಸುಮ್ಗೆ ಇರ್ತಿವಿ. ಬೇರೆಯವರ್‍ಗೆ ತೊಂದ್ರೆ ಕೊಡಲ್ಲ, ಬಜೆಪಿಲಿ ಅಂಗೆ ಇದಿಯಾ?"

"ಅಲ್ಲೇನಿದೆ ಸಾರ್?"

"ಅಲ್ಲಿ ಏನಿದೆ ಎಲ್ಲಾರ್‍ಗೆ ಗೊತ್ತಲ್ಲ. ಅಲ್ಲಿ ಒಬ್ಬೊಬ್ಬರು ಒಂದು ಒಂದು ಕಾರ್ಯಕರಮ ಹೇಳ್ತರೆ. ಒಬ್ಬರು ದಲಿತ್ರಮನೆಗೆ ಹೆದ್ರಿಸಿ ಅಂತರೆ. ಮುಸ್ಲಿಂದು ಮನೆಗೆ ಬೆಂಕಿ ಹಾಕ್ಬಿಡಿ ಅಂತರೆ. ರಾಮುಂದು ಬ್ರಿಡ್ಜ್ ಮುಳುಗಿಬಿಟ್ಟದೆ ಆದರದ್ದು ಫೈಟ್ ಮಾಡಬೇಕು ಅಂತರೆ. ಹಿಂಗೆ ಅವುರು ಗಲಾಟೆದು ಕಾರ್ಯಕ್ರಮ ಹಾಕ್ತಾ ಹೋಗ್ತರೆ. ಅದ್ರಿಂದ ಏನಾಗ್ತದೆ? ದಲಿತ್ರಗೆ, ಅಲುಪಸಂಖ್ಯಾತ್ರಿಗೆ, ಹಿಂದುಳಿದ ವರಗದವ್ರಿಗೆ ಭಯ ಆಗ್ತದೆ. ಅದೇ ನಮ್ದು ಪಾರ್ಟಿಲಿ ಯಾರ್‍ಗೆ ಭಯ ಇಲ್ಲ. ಎಲ್ಲಾರೂ ಆರಾಮಾಗಿ ಇದ್ದಿವಿ."


"ಇನ್ನ ಮುಂದು ನೀವು ಆರಾಮಾಗಿ ಇರಬವುದಲ್ವ ಸಾರ್?"

"ನಿಮಗೆ ಯಾಕೆ ಡವುಟು? ಆರಾಮಂದ್ರೆ ಆರಾಮ."

"ತುಂಬ ಆಸ್ತಿ ಹಣ ಮಾಡಿಕೊಂಡು ಜೊತೆಗೆ ವೈರಿಗಳನ್ನ ಮಾಡಿಕೊಂಡಿರೊ ನಿಮ್ಮ ಪಾರ್ಟಿ ಅದ್ವೇಗೆ ಆರಾಮಾಗಿರುತ್ತೆ ಸಾರ್?"

"ನೋಡಿ. ಏನಪ್ಪಾಂದ್ರೆ, ನಿಮ್ದು ಪರಸ್ನೆ ಸರಿ. ಆದ್ರೆ ನೀವು ಹೇಳಿದ್ದು ನಮ್ದು ರಾಷ್ಟ್ರೀಯ ನಾಯಕ್ರು ದೇವೇಗೌಡ್ರು, ನಮ್ದು ರಾಜ್ಯ ನಾಯಕ್ರು ಕುಮಾರಸ್ವಾಮಿ ರೇವಣ್ಣ ಸಾಹೇಬರಿಗೆ ಸರಿ ಆಗ್ತದೆ. ನಾನು ಯಾಕೆ ತಲೆಗೆ ಕೆಡಿಸಿಕೊಳ್ಳನಿ? ದೇವೇಗೌಡ್ರುದು ವೈರಿ ನನ್ಗೆ ಏನು ಮಾಡ್ತನೆ? ಹೋಗೋ ಬೋಸುಡಿಕೆ, ನಂದು ಅತ್ರ ಏನು ಮಾತು, ದೇವೇಗೌಡರತ್ರ ಹೋಗಿ ಬಾತ್ ಕರೊ ಸಾಲೆ. ಅಂತೆನಿ. ಸರಿಯಲ್ಲ ಹೇಳಿ?"

"ಘೂತ್ತೇರಿ!!!"



■

ಅಲ್ರೀ ಯಡೂರಪ್ಪನ ಚೆಡ್ಡಿ ಆ ದ್ಯಾವೇಗೌಡನ ಕೈಗೇನಾದ್ರೂ ಸಿಕ್ಕಿದ್ರೆ ಮಾಟ ಮಾಡೋಕೆ ಈ ಶಿಕಾರಿಪುರಕ್ಯಾಕೆ ಬರ್‍ತಿದ್ದ? ಕೇರಳಕ್ಕೋ ತಮಿಳುನಾಡಿಗೋ ಹೋದ್ರೆ ಇದಕ್ಕಿಂತ ಠಾಮಠೂಮ ಮಾಡಿಕೊಡಾಕಿಲ್ವಾ? ದ್ಯಾವೇಗೌಡ ಏನು ಅಷ್ಟೊಂದು ದಡ್ಡನಾ?

ಹೀಗೆಂದು ಇಡೀ ಶಿಕಾರಿಪುರಕ್ಕೆ ಶಿಕಾರಿಪುರವೇ ಹೊಟ್ಟೆ ಹಿಡಕೊಂಡು ನಗಾಡುತ್ತಿದೆ!

ಶಿಕಾರಿಪುರದ ಹೆಲಿಪ್ಯಾಡಿನಲ್ಲಿ ದೇವೇಗೌಡರೇ ಮಾಟ ಮಾಡಿಸಿದ್ದಾರೆಂದೂ, ಅದು ಯಡ್ಡಿಯ ವಿನಾಶ ಕ್ಕಾಗೇ ಮಾಡಿಸಿದ ವಾಮಾಚಾರವೆಂದೂ ಆರೆಸ್ಸೆಸ್ ಪತ್ರಗಳು ಬೊಬ್ಬೆ ಇಟ್ಟಿದ್ದೂ ಅದನ್ನೇ ಯಥಾವತ್ತಾಗಿ ಪತ್ರಿಕೆಗಳು ಬರೆದದ್ದೂ ಒತ್ತಟ್ಟಿಗಿರಲಿ. ಹಾಗೊಮ್ಮೆ ಮಾಟ ಮಾಡಿಸಿ.ಯಡ್ಡಿಯನ್ನು ಮುಗಿಸಬಹುದೆಂಬ ಐಡಿಯಾ ದೇವೇಗೌಡರಿಗೆ ಗೊತ್ತಿದ್ದರೆ ಶಾಸಕರಿಗೆ ವಿಪ್ ಕೊಟ್ಟು ಏಕೆ ಸರ್ಕಾರ ಉರುಳಿಸಬೇಕಿತ್ತು?

ಬರಬೇಕಿತ್ತಾದ್ದರಿಂದ ಅವರು ಹೆಲಿಕಾಪ್ಟರ್ ಅಪಘಾತಕ್ಕೀಡಾಗಿ ಸಾಯಲಿ ಎಂದೇ ದೇವೇಗೌಡರು ಹೆಲಿಪ್ಯಾಡಿನಲ್ಲಿ ಮಾಟ ಮಾಡಿಸಿದ್ದಾರೆಂದು ಶಿಕಾರಿಪುರದ ಯಡ್ಡಿ ಶಿಷ್ಯ ದೊಡ್ಡಪೇಟೆ ಗಂಗಾಧರ, ಯಡ್ಡಿಯ ಬಲಗೈ ಬಂಟ ಮಾಜಿ ಎಮ್ಮೆಲ್ಸಿ ಶಾಂತವೀರಪ್ಪಗೌಡನ ಮಗ ಎಚ್.ಎಸ್. ರವೀಂದ್ರ ಉರ್ಫ್ ರಾಘು, ಲೋಕಲ್ ಬಿಜೆಪಿ ಪುಢಾರಿ ಸತೀಶ, ಯಡ್ಡಿಯ ಛೇಲಾ ಖದೀಮ ಕಂಟ್ರಾಕ್ಟರ್ ಕುಬೇರ, ಇತ್ಯಾದಿಗಳು ಕಂಡಕಂಡ ಪತ್ರಕರ್ತರನ್ನು ಕರೆದೊಯ್ದು ಬೊಬ್ಬೆ ಹೊಡೆದದ್ದು ನವೆಂಬರ್ 21 ರ ಬೆಳಿಗ್ಗೆಯೇ!

ಈ ಪೈಕಿ ಹಗಲುಕುಡುಕ ದೊಡ್ಡಪೇಟೆ ಗಂಗಾಧರ ಪತ್ರಕರ್ತರಿಗೆಲ್ಲ ಸುಟ್ಟು ಬಿದ್ದಿದ್ದ ಅಂಡರ್‌ವೇರ್ ತೋರಿಸಿ "ಇದು ಪಕ್ಕಾ ಯಡಿಯೂರಪ್ಪಂದೇ ಚೆಡ್ಡಿ. ದೇವೇಗೌಡನೇ ಮಾಟ ಮಾಡಿಸಿದ್ದಾನೆ" ಎಂದು ಆಣೆ ಪ್ರಮಾಣ ಮಾಡುತ್ತಿದ್ದ. "ಅಲ್ಲಪ್ಪಾ ಅದು ಯಡಿಯೂರಪ್ಪಂದೇ ಚೆಡ್ಡಿ ಅಂತ ನಿನಗೆ ಹೇಗೆ ಗೊತ್ತು?



ಶಿಕಾರಿಪುರ ಪೊಲೀಸ್ ಠಾಣೆಗೆ ಬಂದು ಎಸ್.ಐ. ದೊಡ್ಡೇಗೌಡರಿಗೆ ದೂರು ಕೊಟ್ಟಿದ್ದಾನೆ. ಸರ್ಕಲ್ ಇನ್ಸ್‌ಪೆಕ್ಟರ್ ಶಿವಕುಮಾರ್, ಯಡ್ಡಿಯ ಪಕ್ಕಾ ಬಂಟ ಡಿವೈಎಸ್‌ಪಿ ಪಾಟೀಲ ಎಲ್ಲರೂ ಜೇಬಿನಲ್ಲಿ ಬರುವ ಹೊತ್ತಿಗಾಗಲೇ ಅಲ್ಲಿ ಯಡ್ಡಿಯ ಚೆಡ್ಡಿ ಗ್ಯಾಂಗ್ ಗುಂಪುಗೂಡಿತ್ತು, ಕತೆ ಕೇಳಿದ ಪೊಲೀಸರು ಹೊಟ್ಟೆ ಹಿಡಿದು ನಕ್ಕಿದ್ದು ಬಿಟ್ಟರೆ ದೇವೇಗೌಡರ ವಿರುದ್ಧ ಅದೇನೆಂದು ಎಫ್‌ಐಆರ್ ಹಾಕಲು ಸಾಧ್ಯ?


ನವೆಂಬರ್ 17 ರ ರಾತ್ರಿಯೇ ದೇವೇಗೌಡರು ಮಾಟ ಮಾಡಿಸಿದ್ದರೆ, ಅದು ವಿಶ್ವಾಸಮತ ಬಿದ್ದುಹೋದ ನವೆಂಬರ್ 19 ರ ನಂತರ- ಅಂದರೆ ಮೂರು ದಿ... ಬಿಟ್ಟು-ಯಡ್ಡಿ ಶಿಷ್ಯರ ಗಮನಕ್ಕೆ ಬಂದಿದ್ದೇಕೆ? 18 ... ಬೆಳಿಗ್ಗೆಯೇ ಗೊತ್ತಾಗಬೇಕಿತ್ತು, ಸೋಮವಾರ ಯಡ್ಡಿ ದೇವೇಗೌಡರು ತನ್ನನ್ನು ಮುಗಿಸಲು ವಾಮಾ... ಮಾಡಿಸಿದ್ದಾರೆಂದು ಪತ್ರಿಕಾಗೋಷ್ಠಿಯಲ್ಲಿ ಬೊಬ್ಬೆ ಹೊಡೆದ ನಂತರವೇ ಶಿಕಾರಿಪುರದ ಹೆಲಿಪ್ಯಾಡಿನಲ್ಲಿ ನಡೆದ ಮಾಟ ಅದು.. ಯಡ್ಡಿ ಶಿಷ್ಯರಿಗೆ ಅದು ಮೊದಲು ಗೊತ್ತಾಗುತ್ತದೆ ಎಂದ... ಹಕೀಕತ್ತೇನೆಂಬುದನ್ನು ಯಾರಿಗೂ ಬಿಡಿಸಿ ಹೇಳಬೇಕಿಲ್ಲ, ಹಾಗೇ ಶನಿವಾರ ರಾತ್ರಿ ಹೆಲಿಪ್ಯಾಡಿನಲ್ಲಿ ಬೆಂಕಿಕಾಯಿಸುತ್ತಿದ್ದ ಮೂವರು ಅಪರಿಚಿತರನ್ನು ತಡೆದು ಪ್ರಶ್ನಿಸಿದ ಪಕ್ಕದ ಮನೆಯ ಸದಾಶಿವಪ್ಪ ಹೇಳಿಕೇಳಿ ವಿಜಯಕರ್ನಾಟಕದ ಲೋಕಲ್ ರಿಪೋರ್ಟರ್ ಆಶಿಷ್ ಪಟೇಲ್ ಉರ್ಫ್ ದಿನೇಶನ ಖಾಸಾ ತಂದೆ. ಈ. ದಿನೇಶ ಪಕ್ಕಾ ಆರೆಸ್ಸೆಸ್ ಕಾರ್ಯಕರ್ತ. ಹತ್ತು ಲಕ್ಷ ಮುಂಡಾಯಿಸಿ ಫಜೀತಿ ಮಾಡಿಕೊಂಡ ನಂತರವೇ ತನ್ನ ದಿನೇಶ ಎಂಬ ಹಳೇ ಹೆಸರನ್ನು ಬದಲಾಯಿಸಿಕೊಂಡು ಆಶಿಷ್ ಪಟೇಲ್ ಆದ.

ಶಿಕಾರಿಪುರದ 'ಹೆಲಿಪ್ಯಾಡ್ ಮಾಟ'ದ ಮರ್ಮ!

ಯಡ್ಡಿಯ ಚೆಡ್ಡಿ ಗೌಡರ ಕೈ ಸೇರಿದ್ದು ಹೇಗೆ?

ಇದು ಶಿಕಾರಿಪುರದ ಜೆಡಿಎಸ್ ಕಾರ್ಯಕರ್ತರ ಪ್ರಶ್ನೆಯಾದರೆ ಹಕೀಕತ್ತು ಇನ್ನೂ ತಮಾಷೆಯಾಗಿದೆ. ಶಿಕಾರಿಪುರದ ಚನ್ನಕೇಶವನಗರದ ಭದ್ರಾಪುರ ರಸ್ತೆಯ ಬಲಭಾಗಕ್ಕಿರುವ ಯಡ್ಡಿಯ ಹೆಲಿಪ್ಯಾಡಿನಲ್ಲಿ ಯಾರೋ ಮಾಟ ಮಾಡಿಸಿದ್ದಾರೆಂದು ಜನಕ್ಕೆ ಗೊತ್ತಾಗಿದ್ದೇ ನವೆಂಬರ್ 21 ರ ಬುಧವಾರದ ಬೆಳಿಗ್ಗೆ. ಅದಕ್ಕೂ ಒಂದು ದಿನದ ಮೊದಲೇ ಅಂದರೆ ವಿಶ್ವಾಸಮತ ಬಿದ್ದು ಹೋದ ನವೆಂಬರ್ 19 ರ ಸೋಮವಾರದ ಸಂಜೆಯೇ ತನ್ನ ಮುಖ್ಯಮಂತ್ರಿಗಿರಿ ಮಣ್ಣುಗೂಡಿಸಿದ ದೇವೇಗೌಡರನ್ನು ವಾಚಾಮಗೋಚರ ಬಯ್ಯಾಡುತ್ತಿದ್ದ ಯಡ್ಡಿ ಟೀವಿ ನೈನ್ ವರದಿಗಾರನ ಮುಂದೆ 'ದೇವೇಗೌಡರು ನನ್ನನ್ನು ಕೊಲ್ಲೋಕ್ಕೆ ಮಾಟ ಮಾಡಿಸಿದ್ದಾರೆ. ಹಾಗೊಮ್ಮೆ ನಾನೇನಾದ್ರೂ ಸತ್ತಿದ್ರೆ ಅದ್ರ ಅದಕ್ಕೆ ದೇವೇಗೌಡರೇ ಕಾರಣ ಎಂದು ವಿಲ್ ಬರೆದಿಟ್ಟೇ ಸಾಯ್ತೀನಿ....!' ಎಂದು ಬುಸುಗುಟ್ಟಿದ್ದರಲ್ಲ-

ಅದಕ್ಕೆ ತಕ್ಕಂತೆಯೇ ನವೆಂಬರ್ 21 ರ ಬೆಳಿಗ್ಗೆ ಶಿಕಾರಿಪುರದ ಹೆಲಿಪ್ಯಾಡಿನಲ್ಲಿ ನಡೆದದ್ದು ಈ ವಾಮಾಚಾರದ ದೊಂಬರಾಟ!



ಯಾವುದೋ ಮಂಡಲ ರಚಿಸಿ ಅದರಲ್ಲಿ ಚಿತ್ರವಿಚಿತ್ರ ರಂಗೋಲೆ ಹಾಕಿ, ಅದರೊಳಗೆ ಅನ್ನ ಸುರಿದು ಅದರ ಮೇಲೆ ಕುಂಕುಮ ಮತ್ತು ಅರಿಶಿನ ಚೆಲ್ಲಲಾಗಿತ್ತು. ಪಕ್ಕದಲ್ಲೇ ಮರದ ಗೊಂಬೆ ಬಿದ್ದಿತ್ತು, ಅದರ ಸುತ್ತ ಸುಟ್ಟ ಅಂಡರ್‌ವೇರ್, ಅರೆಬರೆ ಸುಟ್ಟ ಅಂಗಿಯ ತೋಳು, ಪುಟ್ಟ ಚಾಕು ಮತ್ತು ಅಲ್ಲಲ್ಲಿ ರಕ್ತದ ಕಲೆಗಳಿದ್ದವು. ಇದರರ್ಥ ಯಾರೋ ಕೋಳಿ ಕುಯ್ದು ಯಡಿಯೂರಪ್ಪನವರ ಒಳಚೆಡ್ಡಿ ಮತ್ತು ಅಂಗಿಯನ್ನು ಸುಟ್ಟು ಮಾಟ ಮಾಡಿಸಿದ್ದಾರೆ. ನವೆಂಬರ್ 18 ರಂದು ಭಾನುವಾರ ಯಡ್ಡಿ ಶಿಕಾರಿಪುರದ ಅಧಿದೇವತೆ ಹುಚ್ಚುರಾಯಸ್ವಾಮಿಯ ಪೂಜೆಗೆಂದು ಶಿಕಾರಿಪುರಕ್ಕೆ

ಅದ್ಯಾವತ್ತು ಯಡಿಯೂರಪ್ಪ ನಿನ್ನ ಮುಂದೆ ಬಟ್ಟೆ ಬಿಚ್ಚಿದ್ರು?" ಅಂತ ವರದಿಗಾರನೊಬ್ಬ ಕೇಳಿಯೇಬಿಟ್ಟ!

ಅಲ್ಲಿಗೆ ಹೆಲಿಪ್ಯಾಡ್ ವಾಮಾಚಾರದ ಮರ್ಮವೇನೆಂಬುದು ಬಂದಿದ್ದ ಪತ್ರಕರ್ತರಿಗೆಲ್ಲ ಮನದಟ್ಟಾಗಿಬಿಟ್ಟಿತ್ತು. ಬಂದಬಂದ ಪತ್ರಕರ್ತರಿಗೆಲ್ಲ ಕತೆ ಹೊಸೆಯುತ್ತಿದ್ದ ಹೆಲಿಪ್ಯಾಡ್ ಪಕ್ಕದ ಮನೆಯ ಸದಾಶಿವಪ್ಪನ ಪ್ರಕಾರ ನವೆಂಬರ್ 17 ರ ರಾತ್ರಿ ಯಾರೋ ಮೂರು ಮಂದಿ ಅಪರಿಚಿತ ವ್ಯಕ್ತಿಗಳು ಹೆಲಿಪ್ಯಾಡಿನಲ್ಲಿ ಬೆಂಕಿ ಹಾಕಿ ಚಳಿಕಾಯಿಸುತ್ತಿದ್ದರಂತೆ. ಮಾಟ ಮುಗಿಸಿ ವಾಪಸ್ಸಾಗುತ್ತಿದ್ದ ಅವರನ್ನು ತಡೆದು "ಅಲ್ಲಿ ಏನು ಮಾಡುತ್ತಿದ್ರಿ?" ಎಂದು ಸದಾಶಿವಪ್ಪ ಕೇಳಿದ್ದಕ್ಕೆ ಆ ಮೂವರು "ಅದು ನಿಮ್ಮ ಜಾಗವೆ?" ಎಂದು ದಬಾಯಿಸಿದರಂತೆ.

ಪಂಚೆ ಮತ್ತು ಪ್ಯಾಂಟ್ ಧರಿಸಿದ್ದ ಆ ಮೂವರು ಅನಾಮಿಕರು ದೇವೇಗೌಡರ ಆಸಾಮಿಗಳೆಂದು

ಶಾಂತವೀರಪ್ಪ ಗೌಡನ ಮಗ ರಾಘು ರೈಲುಬಿಡುತ್ತಿದ್ದ. ಅದರರ್ಥ ನವೆಂಬರ್ 18 ರ ಭಾನುವಾರ ಹುಚ್ಚುರಾಯಪ್ಪ ದೇವರ ಪೂಜೆಗೆಂದು ಶಿಕಾರಿಪುರಕ್ಕೆ ಹೆಲಿಕಾಪ್ಟರಿನಲ್ಲಿ ಬರಬೇಕಿದ್ದ ಯಡ್ಡಿಯನ್ನು ಮುಗಿಸಲು ಶನಿವಾರ ರಾತ್ರಿಯೇ ದೇವೇಗೌಡರು ಮಾಟ ಮಾಡಿಸಿದ್ದರೆ?

ಆದಾದ ಮೂರು ದಿನಗಳ ನಂತರ ಅಂದರೆ ನವೆಂಬರ್ 21 ರಂದು ಬುಧವಾರ ಯಡ್ಡಿಯ ಆಪ್ತ ಸಹಾಯಕ ಗುರುಮೂರ್ತಿಯ ಗಮನಕ್ಕೆ ಬಂದು ಆತ



ಶಿಕಾರಿಪುರದ ಹೆಲಿಪ್ಯಾಡ್‌ನಲ್ಲಿ ಮಾಟ ಮಂತ್ರ ಮಾಡಿಸಿದ್ದಾರೆನ್ನಲಾದ ದೃಶ್ಯ

ರಾ. ಸೋಮನಾಥ್

ಈತನ ತಂದೆ ಸದಾಶಿವಪ್ಪನೂ ಬಿಜೆಪಿ ಪುಢಾರಿ... ಯಡ್ಡಿಯ ಮತ್ತೊಬ್ಬ ಛೇಲಾ ಖದೀಮ ಕಂಟ್ರಾಕ್ಟರ್ ಕುಬೇರಪ್ಪ ಈತನ ಅಳಿಯ. ಇಡೀ ಶಿಕಾರಿಪುರ... ಮಾತಾಡಿಕೊಳ್ಳುವಂತೆ ಚೆಡ್ಡಿ ಕಂಟ್ರಾಕ್ಟರ್ ಕುಬೇರ... 'ಹೆಲಿಪ್ಯಾಡ್ ಮಾಟ'ದ ಹಿಂದಿನ ಕಾರಣಕರ್ತ. ಏಕೆಂ... ಯಡ್ಡಿ ಉಪಮುಖ್ಯಮಂತ್ರಿಯಾದ ಮೇಲೆ ಕ... ಕಾಮಗಾರಿಯಲ್ಲೇ ಕುಬೇರಪ್ಪ ರಾತ್ರೋರಾತ್ರಿ ಕುಬೇರನಾದ. ಮುಖ್ಯಮಂತ್ರಿಗಿರಿ ಕೈಬಿಟ್ಟದ್ದೇ ಗೌಡರ... ವಿರುದ್ಧ ಯಡ್ಡಿ ವಾಮಾಚಾರದ ಆರೋಪ ಮಾಡಿದರಲ್ಲ; ಅದಕ್ಕೊಂದು ಮರಮ್ಮತ್ತು ಮಾಡಲೆಂದೇ ಮಂಗಳವಾರ ರಾತ್ರಿ ತನ್ನ ಮಾವನ ಮನೆಯೆದುರೇ ಇ... ಹೆಲಿಪ್ಯಾಡಿಗೆ ಹೋ... ಕೋಳಿಕುಯ್ದು ಗೊಂಬೆ ಇಟ್ಟು ಚೆ... ಸುಟ್ಟಿದ್ದಾನೆ.

ಅದನ್ನು ಬುಧವಾರ ಬೆಳಿಗ್ಗೆ ಯಡ್ಡಿ ಶಿ... ಪತ್ರಕರ್ತರನ್ನೊಯ್ದು ಹುಯಿಲೆಬ್ಬಿಸಿದ್ದಾರೆ. ತಮಾ... ಯೆಂದರೆ ಸುಟ್ಟ ಅಂಡರ್‌ವೇರ್ ತೋರಿಸಿ ... ಯಡ್ಡಿಯದೇ ಚೆಡ್ಡಿ ಎಂದು ಆಣೆಪ್ರಮಾಣ ಮಾ... ದೊಡ್ಡಪೇಟೆ ಗಂಗಾಧರನಿಗೆ ಜನ ತನ್ನನ್ನು ಏನೆ... ಕೊಂಡಾರು ಎಂಬ ಕನಿಷ್ಠ ಪ್ರಜ್ಞೆ ಕೂಡ ಇಲ್ಲ.

ಹಾಗೊಮ್ಮೆ ಯಡ್ಡಿಯ ಚೆಡ್ಡಿ ದೇವೇಗೌ... ಕೈಗೇನಾದ್ರೂ ಸಿಕ್ಕಿದ್ರೆ ಬೆಂಗಳೂರಿನ ಡಾಲರ್ಸ್ ಕಾಲ... ಯಡ್ಡಿಯ ಮನೆ ಹಿಂದೆಯೋ ಅಥವಾ ವಿಧಾನಸೌ... ಅಕ್ಕ ಪಕ್ಕದಲ್ಲೋ ಮಾಟ ಮಾಡಿಸುತ್ತಿದ್ದರು. ಅಷ್ಟೊ... ರಿಸ್ಕ್ ತಗೊಂಡು ಶಿಕಾರಿಪುರಕ್ಕೆ ಬಂದು ... ಮಾಡುವಷ್ಟು ದಡ್ಡತನ ದೇವೇಗೌಡರಿಗಿಲ್ಲ. ... ತಮಾಷೆಯೆಂದರೆ ಯಡ್ಡಿಯ ಚೆಡ್ಡಿಯನ್ನು ದೇವೇಗೌ... ತಂದು ಕೊಟ್ಟಿದ್ದಾವರೂ ಯಾರು? ಇದು ಯಡ್ಡಿಯ... ಚೆಡ್ಡಿ ಎಂದು ಅಷ್ಟೊಂದು ಖಾತರಿಯಾಗಿ ಹೇ... ದೊಡ್ಡಪೇಟೆ ಗಂಗಾಧರನಿಗೂ ಯಡ್ಡಿಗೂ ಸಂಬಂಧ? ಅದು ಎಂಥ ಸಂಬಂಧ?

ವಿಲ್ ಬರೆದಿಟ್ಟ ಮಾತ್ರಕ್ಕೆ ದೇವೇಗೌಡರನ್ನು ಜೈಲಿಗೆ ಹಾಕ್ತಾರಾ?

ನವೆಂಬರ್ 19 ರ ಸೋಮವಾರದ ವಿಧಾನಸಭೆಯಲ್ಲಿ ವಿಶ್ವಾಸಮತದ ಮೇಲೆ ಚರ್ಚೆ ನಡೆಯುತ್ತಿತ್ತು, ಜೆಡಿಯು ಶಾಸಕ ಮಾಧುಸ್ವಾಮಿ ಮುಖ್ಯಮಂತ್ರಿ ಯಡಿಯೂರಪ್ಪನವರನ್ನುದ್ದೇಶಿಸಿ 'ಅಲ್ರೀ ಯಡಿಯೂರಪ್ಪ ನಿಮ್ಮ ಅನುಭವಕ್ಕೆ ನೀವು 15 ವರ್ಷದ ಹಿಂದೆಯೇ ಮುಖ್ಯಮಂತ್ರಿಯಾಗಬೇಕಿತ್ತು, ಏಕೆ ಆಗಲಿಲ್ಲ ಗೊತ್ತೆ? ಏಕೆಂದರೆ ನಿಮಗೆ ಅಂಥ ಪ್ರಬುದ್ಧತೆ ಇಲ್ಲ!'

ಹೀಗೆಂದು ಮಾಧುಸ್ವಾಮಿ ವಿಶ್ವಾಸಮತದ ಅಧಿವೇಶನದಲ್ಲಿ ಭಾಷಣ ಮಾಡಿದ ಹತ್ತೇ ನಿಮಿಷಕ್ಕೆ ನಡೆದ ಚರ್ಚೆಗೆ ಓರ್ವ ಮುಖ್ಯಮಂತ್ರಿಯಾಗಿ ತನ್ನ ಹೇಳಿಕೆಯನ್ನೂ ನೀಡದೆ ಯಡ್ಡಿ ರಾಜ್ಯಪಾಲರನ್ನು ಕಂಡು ರಾಜೀನಾಮೆ ಕೊಡುತ್ತಾರೆ. ಬಳಿಕ ಪತ್ರಿಕಾಗೋಷ್ಠಿ ಕರೆದು ದೇವೇಗೌಡರು ತನ್ನ ಕೊಲ್ಲುವುದಕ್ಕೆಂದೇ ಮಾಟ ಮಾಡಿಸಿದ್ದಾರೆಂದೂ ಹಾಗೊಮ್ಮೆ ನಾನೇನಾದ್ರೂ ಸತ್ತರೆ ಅದಕ್ಕೆ ದೇವೇಗೌಡರು ಮಾಟ ಮಾಡಿಸಿದ್ದೇ ಕಾರಣವೆಂದು ವಿಲ್ ಬರೆದಿಟ್ಟು ಸಾಯ್ತೀನಿ ಎಂದೂ ಪಕ್ಕಾ ಹುಂಬನಂತೆ ಪ್ರಲಾಪಿಸುತ್ತಾರೆ.

ಮಾಟ ಮಾಡಿಸಿದ ಮಾತ್ರಕ್ಕೇ ಏನು ಬೇಕಾದರೂ ಆಗುವುದಿದ್ದರೆ ವಿಧಾನಸೌಧದಲ್ಲೇ ಯಡ್ಡಿ ಮಾಡಿಸಿದ ಹವನಕ್ಕೆ ಫಲ ಸಿಗಬೇಕಿತ್ತು, ಮಾಟ ಮಾಡಿಸಿಯಾದರೂ ಯಡ್ಡಿ ತನ್ನ ಮುಖ್ಯಮಂತ್ರಿಗಿರಿ ಉಳಿಸಿಕೊಳ್ಳಬೇಕಿತ್ತು. ತಾನು ವಿಲ್ ಬರೆದಿಟ್ಟು ಸತ್ತ ಮಾತ್ರಕ್ಕೇ ಪೊಲೀಸರು ವಿಚಾರಣೆಯನ್ನೇ ಮಾಡದೇ ದೇವೇಗೌಡರನ್ನು ಜೈಲಿಗೆ ಹಾಕುವುದು ಎಲ್ಲಾದರೂ ಉಂಟಾ?

ರಾಜಕೀಯವಾಗಿ ಯಡ್ಡಿ ಪ್ರಬುದ್ಧನಲ್ಲ ಎಂಬ ಮಾಧುಸ್ವಾಮಿಯ ಮಾತನ್ನು ಯಡ್ಡಿಯೇ ನಿಜ ಸಾಬೀತುಮಾಡಿಬಿಟ್ಟರು.



ಮಾಧುಸ್ವಾಮಿ

2 ಕೋಟಿ ಕಮಿಷನ್

ಸೈಕಲ್ ಕಳ್ಳ ಯಡ್ಡಿ

'ನಾನು ಸೈಕಲ್ ಖರೀದಿಯಲ್ಲಿ ಕಮಿಷನ್ ಹೊಡೆದಿರುವುದೇ ನಿಜವಾದರೆ ನನ್ನ ವಂಶ ನಿರ್ವಂಶವಾಗಿ ಹೋಗಲಿ' ಅಂತ ಬಿಎಸ್ ಆ ಸುಲ್ತಾನ್ ಯಡಿಯೂರಪ್ಪ ಸ್ವಯಂ ಶಾಪ ಹಾಕಿಕೊಂಡು ಬಿಟ್ಟಿದ್ದಾರೆ.

ಸ್ವಲ್ಪ ಆವೇಶದ ಸ್ವಭಾವದ ಯಡ್ಡಿ ಅರ್ಜೆಂಟಾಗಿ ಈ ಶಪಥ ಮಾಡಿದ್ದಾರೆ ಅಂದುಕೊಂಡರೂ ಕೂಡ ಅವರ ಪುತ್ರರತ್ನ ರಾಘವೇಂದ್ರ ಮಾತ್ರ, ಈ ಶಾಪ ನಿಜವಾಗಿ ಬಿಟ್ಟರೆ ಗತಿ ಏನೆಂದು ಗಾಬರಿಯಾಗಿದ್ದಾನೆ ಅಂತ ಖಚಿತ ಸುದ್ದಿ ಇದೆ.

ಯಾಕೆಂದರೆ ಕಮಿಷನ್ ಕದ್ದವನು ಅವನೆ!

ಮುಖ್ಯಮಂತ್ರಿಯಾಗಿದ್ದ ಮೂರು ಮುಕ್ಕಾಲು ದಿನದಲ್ಲೇ ಈ ಯಡ್ಡಿ ನಾಲ್ಕೂವರೆ ಲಕ್ಷ ಸೈಕಲ್ ಖರೀದಿಗೆ ಆದೇಶ ನೀಡಿ ಒಟ್ಟು 95 ಕೋಟಿಯ ಡೀಲು ಕುದುರಿಸಿದ್ದು ನಿಜ. ಅದರ ಕಮಿಷನ್ ಮೊತ್ತವೇ ಎರಡೂಕಾಲು ಕೋಟಿ ಎಂಬುದೂ ಅಷ್ಟೇ ನಿಜ. ಆದರೂ ಈ ಬಿಜೆಪಿ ಖದೀಮರಿಗೆ ಆಣೆ ಪ್ರಮಾಣ ಮಾಡುವುದು, ದಿನಬೆಳಗಾದರೆ ದೇವರ ಪೂಜೆಗೆ ಕೂರುವುದು ಮಾಮೂಲಿ ವಿಚಾರ ಎಂಬಂತಾಗಿ ಹೋಗಿದೆ.

ಈ ಸೈಕಲ್ ಖರೀದಿ ಡೀಲಿನ ಕತೆಯೂ ಅಷ್ಟೆ. ಯಾಕೆಂದರೆ ರಾಜ್ಯದ ನಾಲ್ಕೂವರೆ ಲಕ್ಷ ಹೈಸ್ಕೂಲ್ ಮಕ್ಕಳಿಗೆ ಸೈಕಲ್ ವಿತರಿಸುವ ನಿರ್ಧಾರವೊಂದನ್ನು ಯಡ್ಡಿ ಸಿಎಂ ಆದ ಮಾರನೇ ದಿನವೇ ತರಾತುರಿಯಲ್ಲಿ ತೆಗೆದುಕೊಂಡಿದ್ದರು.

50 ರೂಪಾಯಿ ಬೆಲೆ ಹೆಚ್ಚಳ!

ಅಂದರೆ ನಾಲ್ಕೂವರೆ ಲಕ್ಷ ಸೈಕಲ್‌ಗಳಿಗೆ ತಲಾ 50 ರೂಪಾಯಿ ಜಾಸ್ತಿ ರೇಟಿನಲ್ಲಿ ಖರೀದಿಸುವುದೆಂದರೆ ಕನಿಷ್ಠ ಎರಡು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮುಫತ್ತಾಗಿ ಸೈಕಲ್ ಕಂಪನಿಗಳಿಗೆ ಕೊಟ್ಟಂತೆ ಲೆಕ್ಕ. ಈ ದುಡ್ಡು ಹೀರೋ, ಟಿಐ, ಎ-ಒನ್ ಹಾಗೂ ಅಟ್ಲಾಸ್ ಸೈಕಲ್ ಕಂಪನಿಗಳಿಗೆ ಹೋಗುತ್ತದೆ ಎಂಬುದೇನೊ ಸರಿ. ಆದರೆ ವಿನಾ ಕಾರಣ ಹೆಚ್ಚಿಸಿದ ಸೈಕಲ್ ರೇಟ್ ದುಡ್ಡು ಯಾರಪ್ಪನ ಮನೆಯದ್ದು? ಇದಕ್ಕೆ ಯಡ್ಡಿ ನಿಯಮಾನುಸಾರ ಟೆಂಡರ್ ಕರೆದಿದ್ದರಾ, ಖರೀದಿ ನಿಯಮ ಪಾಲಿಸಿದ್ದರಾ?


ಇಷ್ಟಕ್ಕೂ ನವೆಂಬರ್ 12 ಕ್ಕೆ ಸಿಎಂ ಆಗಿ ಇನ್ನು ಸದನದಲ್ಲಿ ಬಹುಮತ ಸಾಬೀತು ಆಗಿರದಿದ್ದಾಗ ಅಷ್ಟೊಂದು ಅರ್ಜೆಂಟಾಗಿ ನವೆಂಬರ್ 13 ರಂದೇ ಶಾಲಾ ಮಕ್ಕಳನ್ನು ಸೈಕಲ್ ಹತ್ತಿಸುವ ಜರೂರತ್ತು ಯಡ್ಡಿಗೇಕೆ ಬಂತು?

ಇದೇ ಶಾಲಾಮಕ್ಕಳಿಗೆ ಪಠ್ಯ ಪುಸ್ತಕ-ಯೂನಿಫಾರಂ ಸಕಾಲದಲ್ಲಿ ತಲುಪದೇ ಇದ್ದ ಸಂದರ್ಭದಲ್ಲಿ ಅದಕ್ಕೆ ಆದ್ಯತೆ ನೀಡುವುದನ್ನು ಬಿಟ್ಟು 100 ಕೋಟಿ ತೆತ್ತು ಸೈಕಲ್ ಖರೀದಿಸಬೇಕೆಂಬ ಬಿಜೆಪಿ ಕ್ಯಾಬಿನೆಟ್ ತೀರ್ಮಾನದ ಹಿಂದೆ ಸಿಕ್ಕಷ್ಟು ಲಂಚ ತಿಂದುಬಿಡೋಣ ಎಂಬ ಹಸಿವಿರಲಿಲ್ಲವೆ?

ಇದೇ ಯಡ್ಡಿ ನವೆಂಬರ್ 13 ರ ತನ್ನ ಮೊದಲ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಭಾಗ್ಯಲಕ್ಷ್ಮಿ ಯೋಜನೆ, ಶಿವಮೊಗ್ಗ ಏರ್‌ಪೋರ್ಟ್‌ಗೆ ಒಪ್ಪಿಗೆ ಹಾಗೂ 12.3 ಲಕ್ಷ ಬಿಪಿಎಲ್ ರೇಷನ್ ಕಾರ್ಡ್ ವಿತರಣೆಗೂ ಒಪ್ಪಿಗೆ ನೀಡಿತ್ತು.

ಇದರಲ್ಲಿ ನೆನಪಿಡಬೇಕಾದ ಮುಖ್ಯ ವಿಚಾರ ಏನೆಂದರೆ ಈ ತೀರ್ಮಾನಗಳಲ್ಲಿ ಸಮ್ಮಿಶ್ರ ಸರ್ಕಾರದ ಪಾರ್ಟನರ್ ಜೆಡಿಎಸ್‌ನ ಕ್ಯಾಬಿನೆಟ್ ಸಚಿವರೇ ಇರಲಿಲ್ಲ. ಅಸಲಿಗೆ ಅವರ್ಯಾರೂ ಪ್ರಮಾಣವಚನ ಸ್ವೀಕರಿಸಿರಲೇ ಇಲ್ಲ.

ಹಾಗೆ ಹೇಳಬೇಕೆಂದರೆ ನವೆಂಬರ್ 19 ರಂದು ಸದನದಲ್ಲಿ ಬಹುಮತ ಸಾಬೀತಿನ ಕಡೆ ಗಮನಹರಿಸಬೇಕಿದ್ದ ಯಡ್ಡಿ ಜುಜುಬಿ ಸೈಕಲ್ ಖರೀದಿ ಬಗ್ಗೆಯೇ ಜಾಸ್ತಿ ಗಮನ ಕೊಟ್ಟಿದ್ದು ಬೇರೆ ಯಾವ ಕಾರಣಕ್ಕೂ ಅಲ್ಲ, ಈ ಸೈಕಲ್ ಕಂಪನಿಗಳೊಂದಿಗೆ ಮಾಡಿಕೊಂಡಿದ್ದ ಹಳೇ ಡೀಲ್ ಪೂರ್ತಿಗೊಳಿಸಲು ಮತ್ತು ಗುಜರಾತ್ ಚುನಾವಣೆ ಖರ್ಚಿಗೆಂದು ಸಿಕ್ಕಷ್ಟು ಹಣ ಕದ್ದು ನರೇಂದ್ರ ಮೋದಿಗೆ ಕಳುಹಿಸಲು ಮಾತ್ರ.



ಇದೆಲ್ಲಾ ಶುರುವಾಗಿದ್ದು ಹೀಗೆ:

ಉಪಮುಖ್ಯಮಂತ್ರಿಯಾಗಿ ಸಿಕ್ಕಷ್ಟು ಗೆಬರಿಕೊಂಡು ಕಾಲ ಹಾಕುತ್ತಿದ್ದ ಯಡ್ಡಿಗೆ ಈ ಸೈಕಲ್ ಕಳ್ಳತನದ ಐಡಿಯಾ ಕೊಟ್ಟಿದ್ದು ಶಿವಮೊಗ್ಗದ ಭಾರದ್ವಾಜ್. ಅಲ್ಲಿನ ಶಂಕರಮಠ ರಸ್ತೆಯಲ್ಲಿ ಅಂಜನ್ ಆಟೋಮೊಬೈಲ್ ಎಂಬ ವ್ಯಾಪಾರ ನಡೆಸುತ್ತಿದ್ದ ಈ ಭಾರದ್ವಾಜ್ ನಷ್ಟ ಅನುಭವಿಸಿ ಬ್ಯಾಂಕ್ ಸಾಲಗಳಿಗೆ ಸಿಕ್ಕು ದಿವಾಳಿ ಹಂತಕ್ಕೆ ತಲುಪಿದ್ದ. ಇವನಿಗೆ ಸೈಕಲ್ ಮಾರಾಟದ ಡೀಲರ್‌ಶಿಪ್ ಕೂಡ ಇತ್ತು. ಆಗತಾನೇ ಡಿಸಿಎಂ ಆಗಿದ್ದ ಯಡ್ಡಿಗೆ ಈ ನಷ್ಟಜೀವಿ ಭಾರದ್ವಾಜ್ ಶಾಲಾ ಮಕ್ಕಳಿಗೆ ಸೈಕಲ್ ಹಂಚುವ ಸ್ಕೀಂ ಹೇಳಿಕೊಟ್ಟ. ಒಳ್ಳೇ ಕೆಲಸ ಮಾಡಿದ ಕೀರ್ತಿಯೂ ಬಂತು, ಜೇಬಿಗೆ ಕಮಿಷನ್ನೂ ಸಿಕ್ಕಿತೆಂದು ಖುಷಿಯಾದ ಯಡ್ಡಿ ತನ್ನ ಮೊದಲ ಬಜೆಟ್ ಭಾಷಣದಲ್ಲೇ ಈ ಸೈಕಲ್ ಸ್ಕೀಂ ಸೇರಿಸಿಬಿಟ್ಟರು. ಅದರಂತೆ ತರಾತುರಿಯಲ್ಲಿ ಸೈಕಲ್ ತಯಾರಿಕಾ ಕಂಪನಿಗಳೊಂದಿಗೆ ಮಾತಾಡಿ, ಡೀಲ್ ಕುದುರಿಸಿಕೊಂಡು ನೆಪಮಾತ್ರಕ್ಕೆ ಟೆಂಡರ್, ಕೊಟೇಷನ್ ಪ್ರಕ್ರಿಯೆ ಮುಗಿಸಿ 2006 ರ ಆಗಸ್ಟ್ 18 ರಂದು ಸೈಕಲ್ ಹಂಚಿಕೆ ಶುರು ಮಾಡಿಸಿಯೇ ಬಿಟ್ಟರು.

ಆಗ ಯಡ್ಡಿ ಖರೀದಿಸಿದ್ದು 1,75,558 ಸೈಕಲ್. ಬೆಲೆ ಪ್ರತಿ ಸೈಕಲ್‌ಗೆ 2000 ರೂ. ಇದೆಲ್ಲಾ ಎಷ್ಟು ತರಾತುರಿಯಿಂದ ಆಯಿತೆಂದರೆ ಹೀರೋ, ಎ-ಒನ್, ಅಟ್ಲಾಸ್ ಸೈಕಲ್ ಕಂಪನಿಗಳು ಒಪ್ಪಿಕೊಂಡಷ್ಟು ಸೈಕಲ್‌ಗಳನ್ನು ಸಕಾಲದಲ್ಲಿ ಪೂರೈಸಲಾಗದೆ ಪ್ರತಿ ಜಿಲ್ಲಾ ತಾಲ್ಲೂಕು ಲೆವೆಲ್ ಶಿಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲೇ ಶೆಡ್ ಹಾಕಿಸಿ, ಸೈಕಲ್ ಬಿಡಿ ಭಾಗ ತಂದು ಸುರಿದು, ಲೋಕಲ್ ಸೈಕಲ್ ರಿಪೇರಿಯವರನ್ನೇ ಕರೆಸಿ ಅಸೆಂಬಲ್ ಮಾಡಿಸಿ ಹಂಚಿಸಿದರು. ಕೊನೆಗೆ ಇದೂ ನೆಟ್ಟಗೆ ಪೂರ್ತಿಯಾಗದೇ ಸಾವಿರಾರು ಸೈಕಲ್‌ಗಳು ಮಳೆಯಲ್ಲಿ ನೆನೆದು, ತುಕ್ಕು ಹಿಡಿದು ಹೋದವು.

ಈ ಮಧ್ಯೆ [illegible] ಸೈಕಲ್ [illegible] ಡೀಲರ್ [illegible] 2007 ರ ಆರಂಭದಲ್ಲಿ ಶಿವಮೊಗ್ಗದಲ್ಲಿ 'ಮೈತ್ರಿ ಮೋಟಾರ್ಸ್' ಎಂಬ ಹೀರೋ ಹೊಂಡಾ ಶೋರೂಂ ಎದ್ದು ನಿಂತಿತು.

ದಿವಾಳಿ ಎದ್ದಿದ್ದ ಭಾರದ್ವಾಜ್‌ನ ಅಂಜನ್ ಆಟೋಮೊಬೈಲ್‌ಗೆ ಸೇರಿದ್ದ ಕಟ್ಟಡ ಅದು. ತನಗೆ ಸೈಕಲ್ ಕಮಿಷನ್ ಚೋರಬುದ್ಧಿ ಹೇಳಿಕೊಟ್ಟಿದ್ದವನ ಆಸ್ತಿಯನ್ನೇ ಯಡ್ಡಿ ವಶಪಡಿಸಿಕೊಂಡಿದ್ದರು. ಬ್ಯಾಂಕ್ ಸಾಲ ಕಟ್ಟಲಾಗದೇ ಹರಾಜಿಗೆ ಬಂದಿದ್ದ ಆ ಆಸ್ತಿಯನ್ನು ಹೀರೋ ಹೊಂಡಾ ಕಂಪನಿ ಕೊಟ್ಟಿದ್ದ ಲಂಚದ ದುಡ್ಡಿನಲ್ಲಿ ಯಡ್ಡಿ ಅಂಡ್ ಸನ್ಸ್ ಖರೀದಿಸಿದ್ದರು. ಅದೇ ಜಾಗದಲ್ಲೇ ಹೀರೋ ಹೊಂಡಾ ಕಂಪನಿ ಮೂಲಕ ಬೈಕ್ ಡೀಲರ್‌ಶಿಪ್ ಪಡೆದು ಹೊಸ ದಂಧೆ ಶುರು ಮಾಡಿದ್ದರು.

ಇದು ಲಂಚ ಅಲ್ಲವಾ?

ಈಗ ಸತ್ಯಹರಿಶ್ಚಂದ್ರನ ವಂಶಸ್ಥನಂತೆ 'ಕಮಿಷನ್ ಹೊಡೆದಿದ್ದರೆ ನನ್ನ ವಂಶ ನಿರ್ವಂಶವಾಗಿ ಹೋಗಲಿ' ಎಂದು ಚೀರಿಕೊಳ್ಳುತ್ತಿರುವ ಯಡ್ಡಿಗೆ ನೈತಿಕತೆ ಇರುವುದೇ ನಿಜವಾದರೆ ಏಕಾಏಕಿ ನಾಲ್ಕೂವರೆ ಲಕ್ಷ ಸೈಕಲ್ ಖರೀದಿಸಲು ಹೇಗೆ ಮತ್ತು ಏಕೆ ತರಾತುರಿಯಲ್ಲಿ ತೀರ್ಮಾನಿಸಿದರು ಎಂಬ ಬಗ್ಗೆ ರಾಜ್ಯದ ಜನರಿಗೆ ಸಮಜಾಯಿಷಿ ಕೊಡಲಿ. ವಿನಾಕಾರಣ ಸೈಕಲ್ ಒಂದಕ್ಕೆ 50 ರೂ. ಬೆಲೆ ಹೆಚ್ಚಿಸಿದ್ದು ಯಾಕೆ ಅಂತ ಹೇಳಲಿ. ಆ ಬಾಬ್ತಿನ 2.25 ಕೋಟಿ ಖಜಾನೆ ದುಡ್ಡು ಯಡ್ಡಿಯ ಅಪ್ಪನ ಮನೆಯದಲ್ಲ ಅಲ್ಲವೆ?

ಜೊತೆಗೆ ನೂರಾರು ಕೋಟಿ ಬೆಲೆಯ ಈ ಖರೀದಿಗೆ ನಿಯಮಾನುಸಾರ ಟೆಂಡರ್ ಕರೆದಿದ್ದರಾ? ಪಾರದರ್ಶಕ ನಿಯಮ ಪಾಲಿಸಲಾಗಿತ್ತಾ? ಎಂಬ ಬಗ್ಗೆಯೂ ವಿವರಣೆ ಕೊಡಲಿ.

ಮೂರು ಮುಕ್ಕಾಲು ದಿನ ಮುಖ್ಯಮಂತ್ರಿಯಾಗಿದ್ದಾಗಲೇ ಇಷ್ಟು ಅವ್ಯವಹಾರ ನಡೆಸಿದ ಯಡ್ಡಿ ಇನ್ನು 19 ತಿಂಗಳು ಕರ್ನಾಟಕದ ಮುಖ್ಯಮಂತ್ರಿಯಾಗಿ ಉಳಿದುಬಿಟ್ಟಿದ್ದರೆ ಇಡೀ ಖಜಾನೆ ಲೂಟಿ ಮಾಡದೆ ಬಿಡುತ್ತಿದ್ದನಾ- ನೀವೇ ಯೋಚಿಸಿ?


–ಬಿಳಿದಾಳೆ ಈಶ



ಶಿವಮೊಗ್ಗದ ಮೈತ್ರಿ ಮೋಟಾರ್ಸ್

ಬಿಜೆಪಿ ಪುಡಾರಿ ಸದಾಶಿವಪ್ಪ ಶನಿವಾರ ರಾತ್ರಿಯೇ ಹೆಲಿಪ್ಯಾಡಿನಲ್ಲಿ ನಡೆಯುತ್ತಿದ್ದ ವಾಮಾಚಾರವನ್ನು ಕಂಡಿದ್ದರೆ ಅದನ್ನು ಬುಧವಾರದ ತನಕ ಕಾಯ್ದು ಆನಂತರವೇ ಬಹಿರಂಗಪಡಿಸಿದ್ದೇಕೆ? ಅದೂ ತನ್ನ ಮಗ ವಿ.ಕ.ದ. ಲೋಕಲ್ ರಿಪೋರ್ಟರ್ ಈ ಆರೆಸ್ಸೆಸ್ ಗಿರಾಕಿ ದಿನೇಶ್ ಉರ್ಫ್ ಆಶಿಷ್ ಪಟೇಲನಿಗೇ ಮೊದಲು ಹೇಳಿದ್ದೇಕೆ? ಸದಾಶಿವಪ್ಪನ ಅಳಿಯ ಕಂಟ್ರಾಕ್ಟರ್ ಕುಬೇರಪ್ಪನೇ ಪೊಲೀಸರಿಗಿಂತಲೂ ಮೊದಲು ಅದನ್ನು ಗಮನಿಸಿದ್ದೇಕೆ?

ಸಾಮಾನ್ಯವಾಗಿ ಮಾಟ ಮಾಡುವುದು ಅಮಾವಾಸ್ಯೆ ಅಥವಾ ಹುಣ್ಣಿಮೆಯ ರಾತ್ರಿ ಮಾತ್ರ. ಆದರೆ ನವೆಂಬರ್ 17 ರ ಶನಿವಾರ ರಾತ್ರಿ ಅಮಾವಾಸ್ಯೆಯೂ ಅಲ್ಲ, ಹುಣ್ಣಿಮೆಯೂ ಇರಲಿಲ್ಲ. ಅದೂ ಭಾನುವಾರ ಬೆಳಗ್ಗೆ ಯಡ್ಡಿ ಶಿಕಾರಿಪುರಕ್ಕೆ ಬರಲಿದ್ದಾರೆಂಬುದು ದೇವೇಗೌಡರಿಗಿರಲಿ ಅಸಲಿ ಅಲ್ಲಿನ ಬಿಜೆಪಿ ಕಾರ್ಯಕರ್ತರಿಗೇ ಗೊತ್ತಿರಲಿಲ್ಲ. ಬರಬೇಕಿದ್ದದ್ದು ನಿಜವೇ ಆಗಿದ್ದರೆ ಭಾನುವಾರವಾದರೂ ಯಡ್ಡಿ ಏಕೆ ಬರಲಿಲ್ಲ?



ರಾಘವೇಂದ್ರ



ಶಾಂತವೀರಗೌಡ

ಅಷ್ಟಕ್ಕೂ ಮುಖ್ಯಮಂತ್ರಿ ಯಡ್ಡಿ ಬರಬೇಕಿದ್ದದ್ದು ಶಿಕಾರಿಪುರದ ಅಧಿದೇವತೆ ಹುಚ್ಚುರಾಯಪ್ಪನ ಪೂಜೆಗಂತೆ!

ಊರಿನ ಎಮ್ಮೆಲ್ಲೇ ರಾಜ್ಯದ ಮುಖ್ಯಮಂತ್ರಿಯಾಗಿ ನಾನೂರು ಕೋಟಿಯ ಪ್ಯಾಕೇಜನ್ನು ಕಳಪೆ ಕಾಮಗಾರಿಯಲ್ಲಿ ಮುಂದಾಲೋಚದರೂ ಇಡೀ ಶಿಕಾರಿಪುರಕ್ಕೆ ಶಿಕಾರಿಪುರವೇ ಕೈಕಟ್ಟಿಕೂತಿದೆಯಲ್ಲ; ಆ ಊರಿನ ದೇವರು ನಿಜಕ್ಕೂ ಹುಚ್ಚುರಾಯಸ್ವಾಮಿಯಲ್ಲದೇ ಮತ್ತೇನು?

ಹಾಗಂತ ಜನ ಹುಚ್ಚರಲ್ಲ, ಯಡ್ಡಿ ಶಿಷ್ಯರ ಮಾಟದ ಕತೆಯನ್ನು ನಂಬುವಷ್ಟು ದಡ್ಡರೂ ಅಲ್ಲ.


ಲೂಟಿ ಹೊಡೆದ ಕಂಪನಿಗಳು

ಈ ಯಡ್ಡಿ ಶಾಲಾ ಮಕ್ಕಳಿಗೆ ತಾನೇನೊ ಮಹಾನ್ ಉಪಕಾರ ಮಾಡುತ್ತಿರುವವನಂತೆ ಸೈಕಲ್ ವಿತರಣೆ ಸ್ಕೀಂ ಬಗ್ಗೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದಾರೆ. ಅನೇಕ ಸ್ಥಳಗಳಲ್ಲಿ, ಬಸ್ ಸೌಲಭ್ಯ ಇರದ ಕಡೆ ವಿದ್ಯಾರ್ಥಿಗಳಿಗೆ ಇದರಿಂದ ಉಪಯೋಗ ಆಗಿರುವುದು ನಿಜವಾದರೂ ಬಹುಸಂಖ್ಯಾತ ಪಾಲಕರು ಈ ಸೈಕಲ್ ಬದಲಾಗಿ ಬಸ್ ಸೌಲಭ್ಯ ನೀಡಿ, ರಿಯಾಯಿತಿ ಬಸ್ ಪಾಸ್ ಒದಗಿಸಿ ಎಂದು ಶಿಕ್ಷಣ ಇಲಾಖೆ ಅಧಿಕಾರಿಗಳನ್ನು ಕೋರಿದ್ದಾರೆ.

ಆದರೆ ಬಸ್ ಪಾಸ್ ದರ ಇಳಿಸಿದರೆ ಕೋಟಿಗಟ್ಟಲೆ ಕಮಿಷನ್ ಎಲ್ಲಿ ಸಿಗುತ್ತದೆ?

ಹಾಗಾಗಿಯೇ ಯಡ್ಡಿ ಸೈಕಲ್ ಖರೀದಿಗೆ ಹೊರಟಿದ್ದು. ಬೇಕಿದ್ದರೆ ಯಡ್ಡಿಯ ಬಿಜೆಪಿಗಳು ಅಧಿಕಾರಕ್ಕೆ ಬಂದ ಮೇಲೆ ವಿದ್ಯಾರ್ಥಿ ಬಸ್‌ಪಾಸ್ ದರ ಎಷ್ಟು ಜಾಸ್ತಿಯಾಯಿತೆಂಬುದನ್ನು ನೀವೊಮ್ಮೆ ಚೆಕ್ ಮಾಡಿ ನೋಡಿ.

ಸೈಕಲ್ ಖರೀದಿಗೆ ನೂರಿನ್ನೂರು ಕೋಟಿ ಖರ್ಚು ಮಾಡಲು ಹಿಂಜರಿಯದ ರಾಜಕಾರಣಿಗಳು ಜುಜುಬಿ 50 ರೂಪಾಯಿ ರಿಯಾಯಿತಿ ಪಾಸ್ ಕೊಡಲು ಒಪ್ಪುತ್ತಿಲ್ಲ. ಇವರು ಅಷ್ಟೊಂದು ವಿದ್ಯಾಪಕ್ಷಪಾತಿಗಳಾದರೆ ಬೇಕಿದ್ದವರಿಗೆ ಸೈಕಲ್ಲೂ ಕೊಟ್ಟು, ರಿಯಾಯಿತಿ ದರದಲ್ಲಿ ಬಸ್ ಪಾಸ್ ಒದಗಿಸಿ [illegible]



ಬರ್ಬಾದ್ ಆಗಿರುವ ಗುಲ್ಬರ್ಗಾ ಸರಕಾರಿ ಮುದ್ರಣಾಲಯ

ಹೈ... ಕರ್ನಾಟಕ ಸಂಸ್ಕೃತಿ ಪ್ರದೇಶ ... ಕೂಗು ಬಹಳಷ್ಟು ವಿಷಗಳಿಂದಲೂ ಕೇಳಿ ...ತ್ತಿದೆ. ಈ ಅಸಮಾನತೆಯನ್ನು ಹೋಗಲಾಡಿಸಲು ... ಕೈಗೊಳ್ಳಬೇಕಾದ ಅಭಿವೃದ್ಧಿ ಕಾರ್ಯಗಳು ಯಾವ್ಯಾವು ಎಂಬ ಬಗ್ಗೆ ಮಾಹಿತಿ ಕಲೆಹಾಕಲು ಡಾ. ಡಿ. ಎಂ. ನಂಜುಂಡಪ್ಪ ಸಮಿತಿಯನ್ನು ನೇಮಿಸಿತು. ಈ ಸಮಿತಿಯು ಕೂಲಂಕಷವಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕಾದ ಅನ್ಯಾಯವನ್ನು ಕರಾರುವಾಕ್ಕಾಗಿ ಗುರುತಿಸಿ, ಅದೆಲ್ಲವನ್ನು ಸರಕಾರಕ್ಕೆ ವರದಿ ಮಾಡಿತ್ತು. ಆದರೆ ಆ ವರದಿ ಮಾತ್ರ ಸರಕಾರ ದಲ್ಲಿ ಇವತ್ತಿಗೂ ಧೂಳು ತಿನ್ನುತ್ತ ಕೊಳೆ ಯುತ್ತಿದೆ.

ವಿಚಿತ್ರವೆಂದರೆ ಸರಕಾರಗಳ ಇಂಥ ಅಸಮರ್ಪಕ ನೀತಿಯ ವಿರುದ್ಧ ಗುಟುರು ಹಾಕಬೇಕಾದ ಹೈದ್ರಾಬಾದ್ ಕರ್ನಾಟಕದ ರಾಜಕಾರಣಿಗಳೆಲ್ಲ ತೆಪ್ಪಗೆ ಕೂತಿದ್ದಾರೆ. ಈ ಭಾಗದವರೇ ಆಗಿರುವ ಧರ್ಮಸಿಂಗ್-ಖರ್ಗೆ ಎಂಬ ಕರಟಕ ದಮನಕಗಳಂತೂ ತಮಗೆ ಬೇಕಾದಾಗ ಮಾತ್ರ ಬಾಯಿ ತೆರೆದು ಬೇಕಿಲ್ಲ ದಾಗ ಗಡದ್ದಾಗಿ ನಿದ್ರೆಗೆ ಜಾರುತ್ತವೆ. ಇನ್ನು ಎಂ.ವೈ.ಪಾಟೀಲ, ಶರಣಬಸಪ್ಪ ದರ್ಶನಾಪುರ, ಚಂದ್ರಶೇಖರ ಪಾಟೀಲ ರೇವೂರ, ಶರಣಪ್ರಕಾಶ ಪಾಟೀಲ, ವಲ್ಲಾಪುರೆ, ವಿಶ್ವನಾಥ ಪಾಟೀಲ ಹೆಬ್ಬಾಳ, ಬಿ.ಆರ್. ಪಾಟೀಲ, ವೈಜನಾಥ ಪಾಟೀಲ, ನರಸಿಂಹನಾಯಕ ಮುಂತಾದವರಿಗೆ ಇದೀ ಹೈದ್ರಾಬಾದ್ ಕರ್ನಾಟಕದ ಪರಿ ಕಲ್ಪನೆಯೇ ಇದ್ದಂತಿಲ್ಲ. ಇದನ್ನರಿತ ಸರಕಾರಗಳು ನಿರಂತರವಾಗಿ ಈ ಭಾಗಕ್ಕೆ ಮಲತಾಯಿಧೋರಣೆಯನ್ನು ಅನುಸರಿಸುತ್ತ ಬಂದಿವೆ.

ಇಂಥ ಅವಿವೇಕಿಗಳ ದಡ್ಡತನದಿಂದಾಗಿಯೇ 1977 ರಲ್ಲಿ ಕಲಬುರ್ಗಿಯಲ್ಲಿ ಸ್ಥಾಪಿತವಾಗಿದ್ದ ರಾಜ್ಯದ ಎರಡನೆ ಸರಕಾರಿ ಮುದ್ರಣಾಲಯ ಈಗ ಚಿರನಿದ್ರೆಗೆ ಜಾರುವ ಎಲ್ಲಾ ಲಕ್ಷಣಗಳು ಕಾಣುತ್ತಿವೆ. ಸುಮಾರು ಎರಡು ದಶಕಗಳ ಹಿಂದೆ ಚಂದ್ರಶೇಖರ ಪಾಟೀಲ ಕ್ರೀಡಾಂಗಣದ ಸಮೀಪದಲ್ಲಿರುವ ಎರಡು ಎಕರೆ ಜಮೀನಿನಲ್ಲಿ ಆರಂಭವಾದ ಮುದ್ರಣಾಲಯ ಆ ದಿನಗಳಲ್ಲಿ ಕುಂಟುತ್ತ ಸಾಗಿತ್ತು. ಇದನ್ನು ಮನಗಂಡು ಅಂದೇ ಚಿಕಿತ್ಸೆ ನೀಡಿದ್ದರೆ ಬಹುಶಃ ಅದು ಈಗ ಸತ್ತುಹೋಗುವ ದುಸ್ಥಿತಿಗೆ ಬಂದು ನಿಲ್ಲುತ್ತಿರಲಿಲ್ಲ.

ಯಾವಾಗ ಎಚ್.ಗಂಗಯ್ಯ ಎಂಬ ನಿರ್ದೇಶಕ ಈ ಸರಕಾರಿ ಮುದ್ರಣಾಲಯಕ್ಕೆ ತಗುಲಿಕೊಂಡನೋ ಆಗಿನಿಂದಲೇ ಇಲ್ಲಿಯ ಒಂದೊಂದೆ ಯಂತ್ರಗಳು



ಹಾಳಾಗಿರುವ ಕೋಟ್ಯಂತರ ರೂಪಾಯಿ ಮೌಲ್ಯದ ಮುದ್ರಣ ಯಂತ್ರ

ಮಂಗಳೂರು, ಶಿವಮೊಗ್ಗ ಹಾಗೂ ಮೈಸೂರಿನ ಮುದ್ರಣಾಲಯಕ್ಕೆ ಶಿಫ್ಟ್ ಆಗಿ ಹೋದವು. 51 ಜನ ಸಿಬ್ಬಂದಿಗಳಿಂದ ತುಂಬಿರಬೇಕಾಗಿದ್ದ ಮುದ್ರಣಾಲಯ ಆರಂಭದಲ್ಲೂ ಕೇವಲ 19 ಜನಗಳಿಂದ ಮಾತ್ರ ನಡೆಯುತ್ತಿತ್ತು. ಇದೇ ಭಾಗದಿಂದ ಶಾಸಕನಾಗಿ ಆಯ್ಕೆಯಾಗಿದ್ದ ಬಾಬುರಾವ್ ಚವ್ಹಾಣ ಅಂದು ಮುದ್ರಣಾಲಯ ಮಂತ್ರಿ ಆಗಿದ್ದರೂ, ಆತನೂ ವ್ಯವಸ್ಥಿತವಾಗಿ ಪ್ರೆಸ್ ಮುಚ್ಚುವ ಮೂರ್ಖ ಕೆಲಸಕ್ಕೆ ಮುಂದಾಗಿದ್ದ. ಆದರೆ ಅದೃಷ್ಟವಶಾತ್ ಅದು ಅಂದು ಕೈಗೂಡಿರಲಿಲ್ಲ.

ಆದರೆ ಮುದ್ರಣಾಲಯದ ಹಣೆಬರಹ ಮಾತ್ರ ಬದಲಾಗಲಿಲ್ಲ. ಮೊದಲಿನಿಂದಲೂ ಸಿಬ್ಬಂದಿ ಕೊರತೆ ಯಿಂದ ನರಳುತ್ತಿದ್ದ ಮುದ್ರಣಾಲಯಕ್ಕೆ ಸಾಕಷ್ಟು ಜನರನ್ನು ಭರ್ತಿಮಾಡಿ ಅದಕ್ಕೊಂದು ಕಾಯಕಲ್ಪ ಒದಗಿಸಬೇಕಿದ್ದ ಮಂತ್ರಿ ಮಹೋದಯರೆಲ್ಲಾ ಬರುಬರುತ್ತ ಇಲ್ಲಿದ್ದ ಅಲ್ಪಸ್ವಲ್ಪ ಸಿಬ್ಬಂದಿಗಳನ್ನೇ ಬಡ್ತಿಯ ನೆವದ ಮೇಲೆ ಬೇರೆ ಕಡೆ ವರ್ಗ ಮಾಡಿದರು. ಈಗ ಇಲ್ಲಿ ಕೇವಲ ಮೂರು ಜನ ಮಾತ್ರ ಇದ್ದು ಅವರೆಲ್ಲ ಅಕ್ಷರಶಃ ಧೂಳು ಹಿಡಿದುಹೋಗಿರುವ ಯಂತ್ರಗಳನ್ನು ನೋಡಿಕೊಂಡು ಸುಮ್ಮನೆ ಕೈಕಟ್ಟಿ ಕೂಡಬೇಕಾಗಿದೆ.

ಸುಮಾರು 2 ಕೋಟಿ ರೂಪಾಯಿ ಮೌಲ್ಯಗಳ ವೆಬ್ ಮುದ್ರಣಯಂತ್ರ, ಗಣಕಯಂತ್ರ, ಪ್ಲೇಟ್ ಮೇಕಿಂಗ್, ಎಕ್ಸ ಪೋಸಿಂಗ್ ಮಶೀನ್, ಕಟಿಂಗ್ ಮಶೀನ್ ಮತ್ತು ಪಿನ್ನಿಂಗ ಯಂತ್ರ ಎಲ್ಲವೂ ತುಕ್ಕು ಹಿಡಿದಿದೆ. ತಂದಾಗಿನಿಂದಲೂ ಯಾವುದೇ ಕೆಲಸ ಬೊಗಸೆ ಮಾಡದೆ ಹಾಗೆ ಇಟ್ಟಿರುವ ಮತ್ತೊಂದು ಶೀಟ್ ಫೆಡ್ ಮಶೀನ್ ಕೂಡ ಇಟ್ಟಲ್ಲೇ ಜಂಗು ತಿನ್ನುತ್ತಿದೆ. ಇರುವ ಹತ್ತೆಂಟು ರೂಲರ್ ಕಾಗದಗಳು ಇಟ್ಟಲ್ಲೇ ಇಟ್ಟು ಗೆದ್ದಲು ಹತ್ತಿಹೋಗುತ್ತಿವೆ. ಕಟ್ಟಡವಂತೂ ಸುಮಾರು 30 ವರ್ಷಗಳಿಂದ ಸುಣ್ಣ ಬಣ್ಣ ಕಾಣದೆ ಭೂತಬಂಗಲೆಯಂತಾಗಿದೆ. ಆದರೂ ಈ ಕಡೆ ಸರಕಾರವಾಗಲಿ, ಈ ಭಾಗದ ನಾಮರ್ಧ ನಾಯಕರಾಗಲಿ ಇಣುಕಿಯೂ ನೋಡುತ್ತಿಲ್ಲ.



ತುಕ್ಕು ಹಿಡಿದಿರುವ ಕಟ್ಟಿಂಗ್ ಮಿಷನ್ ಮತ್ತು ಎಕ್ಸ್‌ಪೋಜಿಂಗ್ ಯುನಿಟ್

ತಮಾಷೆಯೆಂದರೆ ಸರಕಾರಿ ಪಠ್ಯ ಪುಸ್ತಕಗಳನ್ನು ಟೆಂಡರ್ ಮೂಲಕ ಖಾಸಗಿಯವರಿಗೆ ಒದಗಿಸಿ ಹರಾಮಿ ಕಮಿಷನ್ ಗಿಟ್ಟಿಸುತ್ತಿರುವ ಅಧಿಕಾರಿಗಳು ಕಾಲುಚಾಚಿ ಕೂತಿದ್ದಾರೆ. ಆ ಮೂಲಕ ಸರಕಾರದ ಕಣ್ಣಿಗೆ ಮಣ್ಣೆರಚಿದ್ದಾರೆ. ಈ ಅವಗಡವನ್ನು ಸರಕಾರದ ಗಮನಕ್ಕೆ ತಂದು ತರಾಟೆಗೆ ತೆಗೆದುಕೊಳ್ಳಬೇಕಾದ ಈ ಭಾಗದ ಶಾಸಕರು ಕೌದಿ ಹೊದ್ದುಕೊಂಡು ಗಡದ್ದಾಗಿ ನಿದ್ದೆ ಹೊಡೆಯುತ್ತಿದ್ದಾರೆ.

ಅಷ್ಟೇ ಅಲ್ಲ, 371 ಕಲಂ ಜಾರಿಗೆ ತರಬೇಕು, ಇಲ್ಲದೆ ಹೋದರೆ ಪ್ರತ್ಯೇಕ ರಾಜ್ಯ ಸ್ಥಾಪನೆಗೂ ನಾವು ತಯಾರಿದ್ದೇವೆ ಎಂದು ಅರಚುತ್ತಿರುವ ವೈಜನಾಥ ಪಾಟೀಲ, ಹಣಮಂತರಾವ ದೇಸಾಯಿ, ಮುದ್ನಾಳ ವಿಶ್ವನಾಥರೆಡ್ಡಿ, ವಿದ್ಯಾಧರ ಗುರೂಜಿ ಎಂಬ ಮುದಿ ಗೊಡ್ಡುಗಳ ಕಣ್ಣಿಗೆ ಈ ಮುದ್ರಣಾಲಯದ ದುಃಸ್ಥಿತಿ ಕಾಣುತ್ತಿಲ್ಲವೆ? ಸರಕಾರಿ ಮುದ್ರಣಾಲಯವೊಂದು ಜೀರ್ಣಾವಸ್ಥೆಯಲ್ಲಿದ್ದರೂ ಆ ಕಡೆ ಹೊರಳಿ ನೋಡದ ಜನ ಹೊಸ ರಾಜ್ಯ ಸ್ಥಾಪಿಸಿ ಕಟ್ಟಿ ಕಡಿದು ಹಾಕುವುದು ಅಷ್ಟರಲ್ಲೇ ಇದೆ.

ಹೀಗೆ ಎಲ್ಲರ ಕಣ್ಣೆದುರೆ ಮುದ್ರಣಾಲಯವೊಂದು ಖಬರಗೇಡಿ ರಾಜಕಾರಣಿಗಳು ಹಾಗೂ ಕುಲಗೆಟ್ಟ ಸರಕಾರಿ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದಿಂದ ಬರ್ಬಾದ್ ಆಗುತ್ತಿರುವುದಂತೂ ಖರೆ ಆಗಿದೆ. ಇದನ್ನು ರಕ್ಷಿಸುವವರು ಯಾರು?

–ವಿಶ್ವಾರಾಧ್ಯ ಸತ್ಯಂಪೇಟೆ

ಮತ್ತೊಂದು ನಂದಿಗ್ರಾಮವಾಗುತ್ತಿರುವ ಕೊಪ್ಪಳ

ಅತ್ತ ಪಶ್ಚಿಮ ಬಂಗಾಳದ ನಂದಿಗ್ರಾಮ ವಿಶೇಷ ಆರ್ಥಿಕ ವಲಯ ವಿರೋಧಿಸಿ ರಣರಂಗವಾಗುತ್ತಿದ್ದರೆ ಇತ್ತ ಕೊಪ್ಪಳ ಆ ನಿಟ್ಟಿನಲ್ಲಿ ಹೊರಟಿದೆ.


ನಂದಗುಡಿ, ಶಿವಮೊಗ್ಗ, ಮಂಗಳೂರು, ಹಾಸನ, ಬೆಳಗಾವಿ ಸೇರಿದಂತೆ ಕೊಪ್ಪಳದಲ್ಲಿಯೂ ಪರೋಕ್ಷವಾಗಿ ವಿಶೇಷ ಆರ್ಥಿಕ ವಲಯ ನೀತಿಯನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಎಲ್ಲ ಕೆಲಸ ಕಾರ್ಯಗಳು ಮುಗಿದುಹೋಗಿದೆ. ಪುಣ್ಯಾತ್ಮ ಎಚ್.ಡಿ. ಕುಮಾರಸ್ವಾಮಿ ಇಪ್ಪತ್ತು ತಿಂಗಳ ತನ್ನ ಅವಧಿಯಲ್ಲಿಯೇ 35 ವಿಶೇಷ ಆರ್ಥಿಕ ವಲಯಗಳ ಸ್ಥಾಪನೆಗೆ ಅನುಮತಿ ನೀಡಿ ಹೋಗಿದ್ದಾನೆ. ಈಗಾಗಲೇ ಬರಗಾಲದಿಂದ, ಬೆಳೆಹಾನಿಯಿಂದ, ಬ್ಯಾಂಕ್‌ನವರ ಸಾಲ ವಸೂಲಿ ರೀತಿಗೆ ಹೆದರಿ ಕೊಪ್ಪಳದ ರೈತರು ಆತ್ಮಹತ್ಯೆಯ ದಾರಿ ಹಿಡಿದಿದ್ದಾರೆ. ಇನ್ನು ಎಸ್‌ಇಝಡ್ ಬಂದು ಅವರ ಭೂಮಿಯನ್ನೂ ನುಂಗಿಹಾಕಿದರೆ ಅವರ ಗತಿ ಏನಾಗುತ್ತದೆ ಎಂಬುದನ್ನು ಯಾರಾದರೂ ಊಹಿಸಿಕೊಳ್ಳಬಹುದು.

...ರಿಸ್ಸಾದ ಕರಾವಳಿ ತೀರವನ್ನು ...ಇಝಡ್‌ಗಳು ನುಂಗಿಹಾಕಿರುವಂತೆ, ... ತುಂಗಭದ್ರಾ ಜಲಾಶಯದ ಸುತ್ತ ಮುತ್ತಲಿನ ಸಾವಿರಾರು ಎಕರೆ ಭೂಮಿ ...ಇಝಡ್‌ಗಳ ಪಾಲಾಗಿದೆ. ಈಗಾಗಲೇ 17 ಕಂಪನಿಗಳು 16 ಟಿಎಂಸಿಯಷ್ಟು ರೈತರ ... ಕುಡಿಯುತ್ತಿವೆ. ರೈತರ ಪಾಲಿಗೆ ...ನಿಯಾದ ತುಂಗಭದ್ರಾ ನದಿಯೇ ಈಗ ... ಗಂಡಾಂತರ ತಂದೊಡ್ಡಿದೆಯೇನೋ ...ನುಮಾನ ಸಹಜವಾಗಿ ಮೂಡ ...ದೆ.

ರೈತರ ಭೂಮಿಯನ್ನು ನುಂಗುತ್ತಿರುವ ಕಂಪೆನಿಗಳಲ್ಲಿ ಗಣಿ ಮಾಲೀಕ ಬಲ್ಡೋಟಾನ ಎಂ.ಎಸ್.ಪಿ.ಎಲ್, ಕಾಂಗ್ರೆಸ್ ಮುಖಂಡ ಆರ್.ವಿ. ದೇಶಪಾಂಡೆಯ ದೈವದೇಶ ಪ್ರೈ ಲಿ., ಕಳಪೆ ಗೊಬ್ಬರ ತಯಾರಿಕೆಗೆ ಪ್ರಸಿದ್ಧಿಯಾಗಿರುವ, ಕಾಸನಗಂಡಿಯ ರಕ್ಷಿತ ಅರಣ್ಯ ಪ್ರದೇಶವನ್ನೇ ಹಾಳುಗೆಡವುತ್ತಿರುವ ಮಾರುತಿ ಪೆಟ್ರೋ ಕೆಮಿಕಲ್ಸ್ ಕೂಡ ಸೇರಿವೆ.

ಕೊಪ್ಪಳ ಬಳಿಯ ಗಿಣಿಗೇರಿ, ಬಗನಾಳ, ಕುಣಿಕೇರಿ, ಅಲ್ಲಾನಗರ, ಕಾಸನಕಂಡಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಈ ಕಾರ್ಖಾನೆಗಳ ದುರುಳರು ಜಾತಿಗೊಂದು ಗುಡಿ, ಧರ್ಮಕ್ಕೊಂದು ಮಂದಿರ ಕಟ್ಟಿಸಿಕೊಟ್ಟು, ಬಿಜೆಪಿಯವರು ಮಾಡುತ್ತಿದ್ದ ಜನ ವಿಭಜನೆ ಕೆಲಸವನ್ನು ಮಾಡುತ್ತಿದ್ದಾರೆ. ಆ ಮೂಲಕ ಜನರ, ರೈತರ ಒಗ್ಗಟ್ಟನ್ನು ಮುರಿದು ಫಲವತ್ತಾದ, ಬೆಲೆಬಾಳುವ ಭೂಮಿಯನ್ನು ಒಂದೆರಡು ಲಕ್ಷಕ್ಕೆ ಲೂಟಿ ಹೊಡೆಯುವ ಪ್ಲ್ಯಾನ್ ಹಾಕಿದ್ದಾರೆ. ಭೂಮಿಯನ್ನು ರೈತರಿಂದ ಒಂದು ಎಕರೆಗೆ 30 ಲಕ್ಷದಂತೆ ಖರೀದಿಸಲಾಗಿದೆ ಎಂದು ವಿಶ್ವ ಬ್ಯಾಂಕ್‌ಗೆ ಸುಳ್ಳು ದಾಖಲೆ ಕೊಡುತ್ತಿದ್ದಾರೆ.

ಈ ನಡುವೆ ಕೈಗಾರಿಕೆ ಸ್ಥಾಪಿಸುವ ನೆಪದಲ್ಲಿ ಕೊಪ್ಪಳದ ಹೊರವಲಯದಲ್ಲಿ ನವನಗರ ನಿರ್ಮಾಣದ ರಹಸ್ಯ ಕಾರ್ಯಸೂಚಿ ಇಟ್ಟುಕೊಂಡು ಕಡಿಮೆ ಬೆಲೆಗೆ ರೈತರ ಭೂಮಿಯನ್ನು ಕಬಳಿಸುತ್ತಿದ್ದಾರೆ. ಇವುಗಳಲ್ಲಿ ಮುಂಚೂಣಿಯಲ್ಲಿರುವುದು ಸ್ಕ್ಯಾನ್ ಇಸ್ಪಾತ್ ಕಂಪನಿ. ಇದು ಈಗಾಗಲೇ ಕೈಗಾರಿಕೆ ಹೆಸರಲ್ಲಿ ಗಿಣಿಗೇರಿ ಬಳಿ ನೂರಕ್ಕೂ ಹೆಚ್ಚು ಎಕರೆ ಭೂಮಿಯನ್ನು ಲಪಟಾಯಿಸಿದ್ದು, ಇಲ್ಲಿವರೆಗೆ ಅಲ್ಲಿ ಏನನ್ನೂ ಮಾಡಿಲ್ಲ. ಈ ಕಂಪನಿ ಈ ಜಾಗದಲ್ಲಿನ ಹಳ್ಳಿಗಳನ್ನು ನಾಶಗೊಳಿಸಿ, ಅಲ್ಲಿನ ಸಹಜ ಬದುಕು, ಸೌಹಾರ್ದದ ನೆಮ್ಮದಿಗೆ ಬೆಂಕಿ ಇಟ್ಟು, ಜನರನ್ನೆಲ್ಲ ಒಕ್ಕಲೆಬ್ಬಿಸಿ ಹೈಟೆಕ್ ಅಪಾರ್ಟ್‌ಮೆಂಟ್ ನಿರ್ಮಾಣದ ಗುರಿ ಹೊಂದಿದಂತಿದೆ.




'ಜಲ್ಲೆ ಉಳಿಸಿ' ಸಮಾವೇಶದಲ್ಲಿ ಗಣ್ಯರು ಮಾತನಾಡುತ್ತಿರುವುದು

ಒಟ್ಟು 131 ಟಿಎಂಸಿಯಷ್ಟು ನೀರು ಸಂಗ್ರಹಿಸುವ ಬೃಹತ್ ತುಂಗಭದ್ರಾ ಆಣೆಕಟ್ಟು ಇಂದು ಹೂಳಿನಿಂದ 31 ಟಿಎಂಸಿಯಷ್ಟು ನೀರು ಕಳೆದುಕೊಳ್ಳುತ್ತಿದೆ. ಬರಗಾಲದಲ್ಲಿ ತುಂಬಿದ ಡ್ಯಾಂನಿಂದ ಪ್ರತಿವರ್ಷ ಇಲ್ಲಿ 16 ಬೃಹತ್ ಕೈಗಾರಿಕೆಗಳು 16 ಟಿಎಂಸಿ ನೀರು ಕುಡಿಯುತ್ತಿವೆ. ಕಾರ್ಖಾನೆಗಳು ಸ್ಥಾಪನೆಯಾದರೆ ಸ್ಥಳೀಯ ಜನರಿಗೆ ಉದ್ಯೋಗ ಸೃಷ್ಟಿಯಾಗುತ್ತದೆ ಎಂದು ಬೊಗ... ಬೇರೆ ಬಿಡಲಾಗುತ್ತಿದೆ. ರೈತರಿಂದ ಸಾವಿರಾರು ಎಕ... ಭೂಮಿ ಕಿತ್ತುಕೊಂಡಿದ್ದಾರೆ. ಆದರೆ ಇಲ್ಲಿ ಉದ್ಯೋ... ಸಿಕ್ಕಿರುವುದು ಕೇವಲ ಎರಡೂವರೆ ಸಾವಿರ ಜನ... ಮಾತ್ರ. ಅದರಲ್ಲೂ ಅರ್ಧದಷ್ಟು ಜನ ಹೊರ ರಾ... ದವರು.

ಸ್ಥಳೀಯ ಬಡ ರೈತ ಕುಟುಂಬಗಳ ಒಬ್ಬೊಬ್ಬರಿ... ಕೇವಲ 2000 ರೂ. ಸಂಬಳದ ಚಿಕ್ಕಪುಟ್ಟ ಕೆ... ಕೊಟ್ಟು ಕಣ್ಣೊರೆಸಲಾಗಿದೆ. ಈಗಿರುವ ಕಂಪೆನಿಗಳ... ಬೇವಿನಹಳ್ಳಿ, ಗಿಣಿಗೇರಿ, ಅಲ್ಲಾನಗರ ಗ್ರಾಮಗ... ಬದುಕನ್ನೇ ನರಕವಾಗಿಸಿದ್ದು ಸಾಲದೆಂಬಂತೆ ಮತ್ತೆ 2... ಹೊಸ ಕಾರ್ಖಾನೆಗಳು ಲಗ್ಗೆ ಹಾಕುವುದಕ್ಕೆ ತಯಾ... ನಡೆಸಿವೆ. ರೈತರಿಂದ 3200 ಎಕರೆ ಫಲವತ್ತಾ... ಭೂಮಿಯನ್ನು ಕಿತ್ತುಕೊಂಡು, 3000 ಕೋ... ರೂಪಾಯಿ ಬಂಡವಾಳ ಹೂಡಲು ಹೊರಟಿರು... ಈ ಕಾರ್ಖಾನೆಗಳು ಇಲ್ಲಿ ಸ್ಥಾಪನೆಯಾದರೆ ಒಟ... ಮೂರು ಲಕ್ಷ ಜನರು ಬೀದಿಪಾಲಾಗುತ್ತಾರೆ.

ಈ ಕಾರ್ಖಾನೆಗಳು ಎಷ್ಟು ಜನರಿಗೆ ಉದ್ಯೋ... ನೀಡುತ್ತವೆ ಗೊತ್ತೇ? ಕೇವಲ 2,300 ಜನರಿಗೆ. ಅದು ಸ್ಥಳೀಯರಿಗಲ್ಲ. ಎಂಜಿನಿಯರಿಂಗ್, ಡಿಪ್ಲೊಮಾಗಳ... ಪದವಿ ಪಡೆದ ತಾಂತ್ರಿಕ ನೈಪುಣ್ಯತೆ ಇರುವವ... ಮಾತ್ರ. ಸ್ಥಳೀಯರ ಕಣ್ಣೊರೆಸುವುದಕ್ಕೆ ಕಸ ಬಳಿಯು... ನೀರು ಹಾಯಿಸುವ ಒಂದೆರಡು ಕೆಲಸ ಕೊಡಬಹುದ... ಅಲ್ಲದೇ ಈ ಕಾರ್ಖಾನೆಗಳು ಹೆಚ್ಚುವರಿಯಾಗಿ 2... ಟಿಎಂಸಿ ನೀರನ್ನು ಕುಡಿಯುವುದರಿಂದ ತುಂಗಭದ್ರಾ ಡ್ಯಾಂ ಮುಂದಿನ ಪ್ರದೇಶದ ಸುಮಾರು 20 ಲ...

ಕಾಮತರ ಹಿಂದೂತ್ವ ಮತ್ತು ಖೈರ್ಲಾಂಜಿ



ಎಂ.ವಿ.ಕಾಮತ್


ಎಂ.ವಿ. ಕಾಮತ್ ಈ ದೇಶದ ಹೆಸರಾಂತ ಪತ್ರಕರ್ತರು. ನಮ್ಮ ಕನ್ನಡನಾಡಿನವರೆ ಆದ ಅವರು ದೇಶವಿದೇಶಗಳಲ್ಲಿ ಸೇವೆ ಸಲ್ಲಿಸಿ ಇದೀಗ ಮತ್ತೆ ಮಣಿಪಾಲಕ್ಕೆ ಬಂದು ನೆಲೆಸಿದ್ದಾರೆ. ಪತ್ರಿಕೆಗಳಿಗೆ ಆಗಾಗ ಅಂಕಣಗಳನ್ನು ಬರೆಯುತ್ತಾರೆ. ಇತ್ತೀಚೆಗೆ ಬರೆದ ಒಂದು ಲೇಖನದಲ್ಲಿ ಹಿಂದೂ ನಾಡಿನಲ್ಲಿ ದುರ್ಭರವಾಗುತ್ತಿರುವ ಹಿಂದೂಗಳ ಬದುಕು ಎಂಬ ತಲೆ ಬರಹವನ್ನು ಕೊಟ್ಟಿದ್ದಾರೆ. ತಲೆಬರಹಕ್ಕೆ ತದ್ವಿರುದ್ಧವಾದ ಅಂಶ ಈ ಲೇಖನದಲ್ಲಿತ್ತು. ಈಗಿನ ಹಿಂದೂಗಳು 16 ನೇ ಶತಮಾನದ ಹಿಂದೂಗಳಂತಲ್ಲ ಈಗ ಅವರಲ್ಲಿ ಒಗ್ಗಟ್ಟು ಮೂಡಿದೆ ಎಂದು ಅವರು ಹೇಳಿಕೊಂಡಿದ್ದಾರೆ.

ಎಂಭತ್ತರ ದಶಕದ ಆರಂಭದಲ್ಲಿ ಹುಬ್ಬಳ್ಳಿಯಲ್ಲಿ ನಡೆದ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮ್ಮೇಳನಕ್ಕೆ ಈ ಎಂ.ವಿ. ಕಾಮತ್‌ರನ್ನು ನಾವು ಆಹ್ವಾನಿಸಿದ್ದೆವು. ಆಗ ಬಂದು ಪತ್ರಿಕೋದ್ಯಮದ ವಿವಿಧ ಆಯಾಮಗಳ ಬಗ್ಗೆ ಮಾತಾಡಿದ್ದ ಕಾಮತರಲ್ಲಿ ಹಿಂದೂತ್ವದ ವಾಸನೆಯೇನೂ ಹೊಡೆಯುತ್ತಿರಲಿಲ್ಲ. ಆದರೆ ನಂತರ ಅವರು ಬದಲಾಗತೊಡಗಿದರು. ಅಯೋಧ್ಯೆಯ ಬಾಬರಿ ಮಸೀದಿ ನಾಶ ಅವರಲ್ಲಿ ಹೊಸ ಸ್ಫೂರ್ತಿಯನ್ನು ನೀಡಿತು. ಈಗ 'ಹಿಂದೂತ್ವ'ದ ಪ್ರಮುಖ ವಕ್ತಾರರಾಗಿ ಅವರು ಮಿಂಚುತ್ತಿದ್ದಾರೆ.

ಹಿಂದೂ ಎಂದರೆ ಅದೊಂದು ಸಂಸ್ಕೃತಿ, ಒಂದು ನಾಗರಿಕತೆ ಎಂದು ಒಂದೆಡೆ ಹೇಳುವ ಕಾಮತರು ಮುಂದಿನ ಪ್ಯಾರಾದಲ್ಲಿ ಹಿಂದೂತ್ವವೆಂದರೆ ಅದೊಂದು ಶಿಷ್ಟಧರ್ಮ ಅದು ಅತ್ಯಂತ ಹೆಚ್ಚು ಸಹನೆಯುಳ್ಳದ್ದು ಎನ್ನುತ್ತಾರೆ. ಈ ಶತಮಾನದ ಭಾರತದ ಸಾಧನೆಯನ್ನು ಮಾಹಿತಿ ತಂತ್ರಜ್ಞಾನ, ಉಪಗ್ರಹ ಸಂವಹನ, ಉನ್ನತಶಿಕ್ಷಣ ಹೀಗೆ ಬಹುತೇಕ ಕ್ಷೇತ್ರದಲ್ಲಿ ದೇಶದ ಸಾಧನೆಗಳನ್ನು ಹಿಂದೂಗಳ ಸಾಧನೆ ಎಂದು ಅವರು ವಿಶ್ಲೇಷಿಸುತ್ತಾರೆ. ಈ ಅಭಿವೃದ್ಧಿಯಲ್ಲಿ ಅಲ್ಪಸಂಖ್ಯಾತ ಸಮುದಾಯದ ಪಾತ್ರವನ್ನು ಅತ್ಯಂತ ಜಾಣತನದಿಂದ ಅವರು ತಳ್ಳಿ ಹಾಕುತ್ತಾರೆ.

ಆದರೆ 'ಹಿಂದೂತ್ವ' ಎಂದರೆ ಅದು ಧರ್ಮವೆ? ಸಂಸ್ಕೃತಿಯೇ? ಜೀವನ ವಿಧಾನವೇ? ನಾಗರಿಕತೆಯೇ? ಎಂಬ ಬಗ್ಗೆ ಸಂಘಪರಿವಾರದ ಹಿಂದೂವಾದಿಗಳಲ್ಲೇ ಗೊಂದಲವಿದೆ. ಯಾಕೆಂದರೆ ಈ ನೆಲದ ನಾಲ್ಕು ವೇದಗಳಲ್ಲಿ, ಹನ್ನೊಂದು ಉಪನಿಷತ್ತುಗಳಲ್ಲಿ, 18 ಪುರಾಣಗಳಲ್ಲಿ 'ಹಿಂದೂ' ಅಥವಾ 'ಹಿಂದೂತ್ವ' ಎಂಬ ಶಬ್ದದ ಉಲ್ಲೇಖ ಎಲ್ಲೂ ಇಲ್ಲ. ರಾಮಾಯಣ, ಮಹಾಭಾರತ ಹಾಗೂ ಭಗವದ್ಗೀತೆಗಳಲ್ಲೂ 'ಹಿಂದೂ' ಶಬ್ದದ ಪ್ರಸ್ತಾಪವಿಲ್ಲ, ಹಾಗಿದ್ದರೆ ಈ ಹಿಂದೂ ಎಂಬ ಶಬ್ದ ಹೇಗೆ ಯಾವಾಗ ಬಳಕೆಗೆ ಬಂತು ಎಂಬುದನ್ನು ಕಾಮತರೇ ಹೇಳಬೇಕು.

ಕಳೆದ ಶತಮಾನದ ಮೂರನೇ ದಶಕದಲ್ಲಿ 'ಹಿಂದೂತ್ವ' ಎಂಬ ಶಬ್ದವನ್ನು ಮೊದಲು ತಂದವರು ವಿನಾಯಕ ದಾಮೋದರ್ ಸಾವರ್ಕರ್. ಇಂಗ್ಲೆಂಡ್‌ನಿಂದ ವ್ಯಾಸಂಗ ಮಾಡುತ್ತಿದ್ದಾಗ ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಧುಮುಕಿದ ಸಾವರ್ಕರ್ ಅಂಡಮಾನಿನಲ್ಲಿ ಸೆರೆವಾಸ ಅನುಭವಿಸಿ ಕ್ಷಮಾಯಾಚನೆ ಪತ್ರ ಬರೆದು ಹೊರಬಂದ ಸಂಗತಿ ಎಲ್ಲರಿಗೂ ಗೊತ್ತಿದೆ. ಆಗ ಒಂದೆಡೆ ಗಾಂಧೀಜಿ ನೇತೃತ್ವದಲ್ಲಿ ಇನ್ನೊಂದೆಡೆ, ಭಗತ್‌ಸಿಂಗ್ ನೇತೃತ್ವದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಯ ಬಿಸಿ ತೀವ್ರಗೊಂಡಿತ್ತು. ಹಿಂದೂ-ಮುಸಲ್ಮಾನ-ಕ್ರೈಸ್ತರು ಒಂದುಗೂಡಿ ಈ ಹೋರಾಟಕ್ಕೆ ಇಳಿದಿದ್ದರು. ಆಗ 'ಹಿಂದೂತ್ವ'ದ ಸಿದ್ಧಾಂತದ ಮೂಲಕ ಈ ಆಂದೋಲನದಲ್ಲಿ ಬಿರುಕು ಮೂಡಿಸಲು, ಆ ಮೂಲಕ ಬ್ರಿಟಿಷರಿಗೆ ಅನುಕೂಲ ಮಾಡಲು ಈ ಹುನ್ನಾರ ನಡೆಯಿತು.



ಅದೇ ಸಂದರ್ಭದಲ್ಲಿ ಮಹಾರಾಷ್ಟ್ರದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ 'ಹಿಂದೂತ್ವ' ಸೋಗಿನ ಪುರೋಹಿತಶಾಹಿ ಪಿತೂರಿ ವಿರುದ್ಧ ಸಿಡಿದೆದ್ದಿದ್ದರು. ದಲಿತ ಹಿಂದುಳಿದವರ ಪ್ರತಿಭಟನೆಯ ಭಾರಿ ಅಲೆ ಈ ಜಾತಿ ವ್ಯವಸ್ಥೆಯ ಕೋಟೆಗೆ ಅಪ್ಪಳಿಸಿತು. ಚಾತುರ್ವರ್ಣ ಸಿದ್ಧಾಂತ ಪ್ರತಿಪಾದಕರಿಗೆ ತಮ್ಮ ರೋಗಗ್ರಸ್ತ ವ್ಯವಸ್ಥೆಯನ್ನು ಕಾಪಾಡಲು 'ಹಿಂದೂತ್ವ'ದ ಅಗತ್ಯವಿತ್ತು. ಆಗ ಮಹಾರಾಷ್ಟ್ರದ ಡಾ. ಮೂಂಜೆ ಹಾಗೂ ಕೆಬಿ ಹೆಡ್ಗೆವಾರ್ ಆರ್‌ಎಸ್‌ಎಸ್ ಸ್ಥಾಪನೆ ಮಾಡಿದರು. ಜರ್ಮನಿಯಲ್ಲಿ ನಾಜಿ ಪಾರ್ಟಿ ಮಾಡಿದ್ದ ಅಡಾಲ್ಫ್ ಹಿಟ್ಲರ್ ಹಾಗೂ ಇಟಲಿಯಲ್ಲಿ ಫ್ಯಾಸಿಸ್ಟ್ ಪಾರ್ಟಿ ಕಟ್ಟಿದ ಮುಸೋಲೋನಿ ಇವರಿಗೆ ಆದರ್ಶವಾಗಿದ್ದಾರೆ. ಡಾ. ಮೂಂಜೆ ಜರ್ಮನಿ ಹಾಗೂ ಇಟಲಿಗೆ ಹೋಗಿ ಹಿಟ್ಲರ್ ಮತ್ತು ಮುಸೋಲೋನಿಯನ್ನು ಭೇಟಿ ಮಾಡಿ ಬಂದರು.



ಬಜೆಪಿಯನ್ನು ಹೊರತುಪಡಿಸಿ ಇನ್ಯಾವ ಪಕ್ಷವೂ ಹಿಂದೂಗಳನ್ನು ಪ್ರತಿನಿಧಿಸುವುದಿಲ್ಲ ಎಂದೆಲ್ಲಾ ಕಾಮತರು ವ್ಯಾಖ್ಯಾನಿಸಿದ್ದಾರೆ. ಆದರೆ ಹಿಂದೂಗಳೆಂದರೆ ಯಾರು? ಎಂಬ ಬಗ್ಗೆ ಅವರು ಸ್ಪಷ್ಟ ಉತ್ತರ ನೀಡಬೇಕಾಗಿದೆ. ಅವರೇ ವಿಶ್ಲೇಷಿಸಿದಂತೆ ಮಾಹಿತಿ, ತಂತ್ರಜ್ಞಾನ, ಬ್ಯಾಂಕಿಂಗ್, ಉನ್ನತ ಶಿಕ್ಷಣ ಮುಂತಾದ ಕ್ಷೇತ್ರದಲ್ಲಿ ಹಿಂದೂಗಳು ಮುಂದುವರಿದಿದ್ದಾರಂತೆ! ನಿಜ, ಕಾಮತರ ಸ್ವಜಾತಿ ಬಾಂಧವರು ಈ ಕ್ಷೇತ್ರದಲ್ಲಿ ಸಂಪೂರ್ಣ ಹಿಡಿತ ಸಾಧಿಸಿದ್ದಾರೆ. ಆ ಬಗ್ಗೆ ಕಾಮತರಿಗೆ ಸಂತೋಷವಾಗುವುದು ಸಹಜ.

ಈಗ ಮುಸ್ಲಿಂ ಆಡಳಿತವಿಲ್ಲ, ಹಿಂದೂಗಳು ಆತ್ಮವಿಶ್ವಾಸದಿಂದ ಬೀಗುತ್ತಿದ್ದಾರೆ ಎಂದು ಕಾಮತರು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ. ಆದರೆ ಕಳೆದ ವರ್ಷ ಮಹಾರಾಷ್ಟ್ರದ ಖೈರ್ಲಾಂಜಿ ಎಂಬಲ್ಲಿ ಬೂತಮಾಂಗೆ ಎಂಬ ದಲಿತ ಕುಟುಂಬದ ಮೇಲೆ ನಡೆದ ಪೈಶಾಚಿಕ ದೌರ್ಜನ್ಯ ಅತ್ಯಾಚಾರಗಳು ಕಾಮತರ ಕಾಮಾಲೆ ಕಣ್ಣಿಗೆ ಕಾಣಿಸುವುದಿಲ್ಲ. ಈ ಕುಟುಂಬದ ತಾಯಿ, ಮಗಳನ್ನು ಹಾಡುಹಗಲೇ ಬೆತ್ತಲೆ ಮಾಡಿ ನಡುರಸ್ತೆಯಲ್ಲಿ ರೇಪ್ ಮಾಡಲಾಯಿತು. ತಡೆಯಲು ಬಂದ ಸೋದರರನ್ನು ಕೊಲ್ಲಿ ಹಾಕಲಾಯಿತು. ಈ ಪ್ರಕರಣದಲ್ಲಿ ಸಾಕ್ಷ್ಯಾಧಾರ ಕೂಡ ಯಾರಿಗೂ ಸಿಗಲೇಬಾರದೆಂದು ಇವರನ್ನೆಲ್ಲಾ [illegible] ಕತ್ತರಿಸಿ ಸುಟ್ಟು, ನದಿಗೆ [illegible]

ಈ ದಲಿತ ಸೋದರಿಯರ ಮೇಲೆ ಈ ರೀತಿ ಪೈಶಾಚಿಕ ದೌರ್ಜನ್ಯ ನಡೆಸಿದವರು ಬೇರಾರೂ ಅಲ್ಲ, ಅನ್ಯ ಧರ್ಮದವರೂ ಅಲ್ಲ, ಇದೇ ಕಾಮತರು ಹೆಮ್ಮೆಯಿಂದ ಬೀಗುವ ಹಿಂದೂಗಳು. ಬರೀ ಹಿಂದೂಗಳಲ್ಲ ಹಿಂದೂತ್ವದ ಆತ್ಮವನ್ನು ಪ್ರತಿನಿಧಿಸುವ ಏಕೈಕ ಪಕ್ಷ ಎಂದು ಕಾಮತರು ವರ್ಣಿಸುವ ಬಿಜೆಪಿ ಸ್ಥಳೀಯ ನಾಯಕರು. ಈ ಪ್ರಕರಣದಲ್ಲಿ ಯಾವೊಬ್ಬ ಅಪರಾಧಿಗೂ ಶಿಕ್ಷೆಯಾಗಿಲ್ಲ, ವಿಶ್ವಹಿಂದೂ ಪರಿಷತ್ತಿನ ಯಾವ ನಾಯಕರೂ ಇದನ್ನು ಪ್ರತಿಭಟಿಸಲಿಲ್ಲ, ಉಡುಪಿ ಪೇಜಾವರ ಶ್ರೀಗಳ ಹೃದಯವೂ ಕರಗಲಿಲ್ಲ.

ಬರಿ ಒಂದು ಖೈರ್ಲಾಂಜಿ ಕಥೆ ಅಲ್ಲ, ಈ ದೇಶದ ಸಾವಿರಾರು ಹಳ್ಳಿಗಳು ಖೈರ್ಲಾಂಜಿಗಿಂತ ಭಿನ್ನವಾಗಿಲ್ಲ, ದಲಿತರ ಗುಡಿಸಲಿಗೆ ಬೆಂಕಿ ಹಚ್ಚುವುದು, ಬದುಕಿಗೆ ಕೊಳ್ಳಿ ಇಡುವುದು, ಅಸ್ಪೃಶ್ಯ ಮಹಿಳೆಯರ ಮೇಲೆ ಅತ್ಯಾಚಾರ ಮಾಡುವುದು ಇವೆಲ್ಲಾ ನಿತ್ಯವೂ ವರದಿಯಾಗುತ್ತದೆ. ಕಂಬಾಳಪಲ್ಲಿಯಲ್ಲಿ ದಲಿತ ಬಾಂಧವರನ್ನು ಜೀವಂತ ಸುಟ್ಟು ಹಾಕಿದವರು, ಬೆಂಡಿಗೇರಿಯಲ್ಲಿ ಅಸ್ಪೃಶ್ಯರಿಗೆ ಮಲ ತಿನ್ನಿಸಿದವರು, ಇವರ್ಯಾರು ಅನ್ಯಮತೀಯರಲ್ಲ, ಇದೇ ಕಾಮತರು ಹೆಮ್ಮೆಪಟ್ಟುಕೊಳ್ಳುವ ಉಚ್ಚ ಜಾತಿಯ ಹಿಂದೂಗಳು.

ಆಧುನಿಕ ಮಾಹಿತಿ ತಂತ್ರಜ್ಞಾನ, ಬ್ಯಾಂಕಿಂಗ್ ಮುಂತಾದ ಕ್ಷೇತ್ರದಲ್ಲಿ ವಿಜೃಂಭಿಸುತ್ತಿರುವವರು ಈ ದೇಶದ ಶೂದ್ರ ಸಮುದಾಯಕ್ಕೆ ಸೇರಿದವರಲ್ಲ, ಕಾಮತರ ವಿಪ್ರ ಸಮುದಾಯಕ್ಕೆ ಸೇರಿದವರು. ಈ ಸಂಭ್ರಮದಲ್ಲಿ ಪಾಲ್ಗೊಳ್ಳುವ ಸ್ಥಿತಿಯಲ್ಲಿ ದಲಿತ ಸಮುದಾಯವಿಲ್ಲ. ಈ ದೇಶದ ಸಕಲ ಸಾಮಾಜಿಕ ಗೌರವ ಮತ್ತು ವಿತ್ತಸಂಪನ್ಮೂಲಗಳನ್ನು ಅನುಭವಿಸುತ್ತಿರುವವರು ಅಂಬಾನಿ, ಬಿರ್ಲಾ, ನಾರಾಯಣಮೂರ್ತಿಗಳಂಥ ಶೇ. 3 ರಷ್ಟು ಜನ ಮಾತ್ರ. ಉಳಿದ 90 ರಷ್ಟು ಜನ ಇದಕ್ಕಾಗಿ ಹೆಮ್ಮೆಪಟ್ಟುಕೊಳ್ಳಬೇಕೇನು.

ಹೋಮಹವನಗಳನ್ನು ವಿರೋಧಿಸುವವರು ದೇಶ ಬಿಟ್ಟು ತೊಲಗಬೇಕೆಂದು ಬಜೆಪಿ ಅಧ್ಯಕ್ಷ ಸದಾನಂದ ಗೌಡರು ಇತ್ತೀಚೆಗೆ (ತಾವೂ ಶೂದ್ರರೆಂಬುದನ್ನು ಮರೆತು) ಅಪ್ಪಣೆ ಕೊಡಿಸಿದರು. ಈ ಮಾತಿನಿಂದ ಕೆಂಡಾಮಂಡಲರಾದ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ವಿಧಾನಸಭೆಯಲ್ಲಿ ತರಾಟೆಗೆ ತೆಗೆದುಕೊಂಡರು. ಈ ದೇಶದ ಮೂಲ ನಿವಾಸಿಗಳು ನಾವು ನೀವು ನಿಮ್ಮ ಆರ್ಯ ಸಂಸ್ಕೃತಿ, ಆರ್‌ಎಸ್‌ಎಸ್ ಹೊರಗಿನಿಂದ ಬಂದದ್ದು ಆದ್ದರಿಂದ ನೀವು ಇಲ್ಲಿಂದ ಜಾಗ ಖಾಲಿ ಮಾಡಿ ಎಂದು ಹೇಳಿದಾಗ ವಿಶ್ವಾಸಮತ ಪಡೆಯಲಾಗದೆ ದಿಗ್ಭ್ರಾಂತರಾಗಿ ಕುಳಿತಿದ್ದ ಬಜೆಪಿ ಶಾಸಕರು ಬಾಯಿ ಮುಚ್ಚಿಕೊಂಡಿದ್ದರು.

ಹಿಂದೂತ್ವದ ಮಾತನಾಡುವ ಎಂ.ವಿ. ಕಾಮತ್‌ರಿಗೆ ಹಾಗೂ ಅವರ ಪರಿವಾರದವರಿಗೆ ಈ ದೇಶದ ಶೇ. 80 ರಷ್ಟು ಜನ ಈ ಪ್ರಶ್ನೆಯನ್ನು ಕೇಳಬೇಕಾಗಿದೆ. ನಾವು ದುಡಿಯುವ ಜನ ನಮ್ಮ ಬೆವರಿನಿಂದ ಕಟ್ಟಿದ ದೇಶವಿದು. ದ್ರಾವಿಡರು, ಶೂದ್ರರು, ಅಲ್ಪಸಂಖ್ಯಾತರು ತಮ್ಮ ರಕ್ತ ನೀರು ಮಾಡಿಕೊಂಡು ಈ ಭಾರತವನ್ನು ಮುನ್ನಡೆಸಿದ್ದಾರೆ. ಈ ದೇಶದ ಭವಿಷ್ಯ ನಿರ್ಧರಿಸುವವರು ನಾವು. ಮಂತ್ರ ಹೇಳಿ ಗಂಟೆ ಬಾರಿಸುವ ಪುರೋಹಿತರು, ಜಗದ್ಗುರುಗಳಲ್ಲ ಎಂದು ಸಾರಿ ಹೇಳಬೇಕಾಗಿದೆ.

ಈ ದೇಶದ ಎಂಬತ್ತರಷ್ಟು ಜನರ ಬದುಕು ದುರ್ಭರವಾಗಿರುವುದು ಶೇ. ಮೂರರಷ್ಟಿರುವ ಶೋಷಕ ವರ್ಗಗಳಿಂದ. ನಮ್ಮ ನಡುವೆ ಹಿಂದೂ-ಮುಸ್ಲಿಂ-ಕ್ರೈ[illegible] ಎಂದು ಒಡಕಿನ ವಿಷಬೀಜ ಬಿತ್ತುವವರು ನೀವು [illegible] ದೇಶದಿಂದ ನೀವು [illegible]

-ಸನತ್ ಕುಮಾರ್ ಬೆಳಗಲಿ

ಎಕರೆ ನೀರಾವರಿಗೆ ಕುತ್ತು ಬೀಳುತ್ತದೆ.

ಕೊಪ್ಪಳ ಜಿಲ್ಲೆಯಲ್ಲಿ ರೈತ ಸಂಘದ ಹೆಡ್ಡಾಫೀಸಿನಂತಿದ್ದ ಮೀಟರ್ ವಾಪಸಾತಿ ಚಳವಳಿಯಲ್ಲಿ ಲಾಠಿ ಪೆಟ್ಟು ತಿಂದು ರಾಜ್ಯದ ತುಂಬ ಖ್ಯಾತಿ-ಕುಖ್ಯಾತಿ ಪಡೆದ ಹಿರೇಬಗನಾಳ ಸುತ್ತ ಕಾರ್ಖಾನೆಗಳೇ ಬೀಡುಬಿಟ್ಟಿವೆ. ರೈತ ಸಂಘ ಇಂದೂ ಕೂಡ ಇದೆಯಾದರೂ ಅದರಲ್ಲಿ ಮೊದಲಿನ ಕಸುವು ಇಲ್ಲ.



'ಜಾಗತೀಕರಣ ಅಳಿಸಿ, ಜಿಲ್ಲೆ ಉಳಿಸಿ' ಕಾರ್ಯಕ್ರಮದಲ್ಲಿ ಜಾಗೃತಿ ಮೂಡಿಸುತ್ತಿರುವ ಜಿಲ್ಲೆಯ ರೈತರು

ಕೈಗಾರಿಕೆ ಹೆಸರಿನಲ್ಲಿ ರೈತರ ಭೂಮಿ ಕಿತ್ತುಕೊಳ್ಳುವುದನ್ನು ವಿರೋಧಿಸಿ ಸರ್ಕಾರಿ ಭೂಮಿಯನ್ನು ಬಡವರಿಗೆ ನೀಡುವಂತೆ ಆಗ್ರಹಿಸಿ ಕರ್ನಾಟಕ ರೈತ ಸಂಘವು ಪ್ರತಿಭಟನಾ ರ್‍ಯಾಲಿ ನಡೆಸಿದೆ. ಮಾತ್ರವಲ್ಲ 'ಜಾಗತೀಕರಣ ಅಳಿಸಿ, ಜಿಲ್ಲೆ ಉಳಿಸಿ' ಎಂಬ ಹೆಸರಿನಲ್ಲಿ ನಾಲ್ಕು ತಿಂಗಳ ಧರಣಿ ನಡೆಸಿ, ನೆಲೋಗಿಪುರಕ್ಕೆ ಗ್ರಾಮ ವಾಸ್ತವ್ಯಕ್ಕೆಂದು ಬಂದಿದ್ದ ಕುಮಾರಸ್ವಾಮಿಗೆ ಮನವಿ ಪತ್ರ ಕೊಡಲು 50 ಕಿ.ಮೀ. ನಡಿಗೆಯಲ್ಲಿ ಬಂದಿದ್ದರು ರೈತ ಸಂಘದವರು.

ರೈತರ ಈ ಹೋರಾಟ ಗಿಣಿಗೇರಿ ಹೊರವಲಯದ ನೂರು ಎಕರೆ ಬಡವರ ಸಾಗುವಳಿ ಭೂಮಿಗೆ ಬಾಯಿ ಹಾಕಿದ್ದ ಧನದಾಹಿ-ಭೂದಾಹಿ ಶಾಸಕನಿಗೆ ತಿರುಗೇಟು ನೀಡಿ ಮುಖಭಂಗಗೊಳಿಸಿದೆ.

ಸಾವಿರಾರು ಎಕರೆ ಭೂಮಿಯನ್ನು ಕಿತ್ತುಕೊಂಡು ರೈತರನ್ನು ಬೀದಿಗೆ ತಳ್ಳುತ್ತಿರುವ ಕಾರ್ಖಾನೆಗಳೊಂದಿಗೆ ಒಳಗೊಳಗೆ ಒಪ್ಪಂದ ಮಾಡಿಕೊಂಡಿರುವ ಇಲ್ಲಿನ ಭ್ರಷ್ಟ-ದುಷ್ಟ ರಾಜಕಾರಣಿಗಳ ಗಮನವಿರುವುದು ಬರೀ ದುಡ್ಡು ಮತ್ತು ಅಧಿಕಾರದ ಕಡೆಗೆ ಮಾತ್ರ. ಎಲ್ಲ ಅಂದುಕೊಂಡಂತೆ ಆದರೆ ಬರುವ ಚುನಾವಣೆಯಲ್ಲಿ ಅವರೆಲ್ಲ ಚಟ್ಟಕ್ಕೇರುವುದು ಖಚಿತ.

-ವರದಿಗಾರ



ಅವನ ಹಾಗೇ ಅವನ ಪೂರ್ವಿಕರೂ ಕೂಡಾ ಈ ಕ್ರೂರ ಮಹಾಪೂರದಲ್ಲಿ ಈಜಿದವರೇ. ಕೆಲವರು ಆ ಪ್ರವಾಹದಲ್ಲಿ ಕೊಚ್ಚಿಹೋದರು, ಮತ್ತೆ ಕೆಲವರು ಪ್ರವಾಹದ ಸೆಳೆತಕ್ಕೆ ಸಿಗದೆ ಗಟ್ಟಿಯಾಗಿ ಈಜುತ್ತಾ ದಡವನ್ನ ಅರಸಿದರು. ನನ್ನ ಆ ರೂಬೆನ್ ಅದೆಂಥಾ ಮನುಷ್ಯ! ಎಂಥಾ ಅದ್ಭುತ ಮನುಷ್ಯ! ಅಂದವಾದ ಅಸ್ಪೃಶ್ಯ!

ಕಾಮಧೇನುವಿನ ಕಥೆಯಲ್ಲ ಅಸ್ಪೃಶ್ಯನೊಬ್ಬನ ಆಕ್ರಂದನ!

ಜಿ. ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ

1

ಅನುವಾದ: ಪ್ರೊ. ನಗರಗೆರೆ ರಮೇಶ್

ಮೊದಲಿಗೆ ನಿಮಗೆ ರೂಥಳನ್ನ ಪರಿಚಯಿಸಿ, ನಂತರ ಈ ಕಥೆ ಶುರು ಮಾಡ್ತೇನೆ.

ಆಕೆಯನ್ನ ಒಬ್ಬ ಲೇಖಕಿಯಾಗಿ ಈಗಾಗಲೇ ತಿಳಿದ ವರು ತಾವು ಅಭಿಮಾನಿಸುವ ಲೇಖಕಿಯನ್ನ ಹೊಸದಾಗಿ ಪರಿಚಯ ಮಾಡುವ ಸಾಹಸಕ್ಕೆ ಕೈಹಾಕಬೇಡಿ ಅಂತ ಹೇಳಬಹುದು. ಅದೂ ನಿಜವೇ! ಆಕೆ ಈಗಾಗಲೇ ಸಾಕಷ್ಟು ಕಥೆಗಳನ್ನು-ಕವನಗಳನ್ನು ಬರೆದಿದ್ದಾಳೆ. ಆದರೆ ನಾನೀಗ ನಿಮಗೆ ಪರಿಚಯ ಮಾಡಬಯಸುವುದು ಲೇಖಕಿ ರೂಥಳನ್ನಲ್ಲ, ಆಕೆಯ ಬರಹಗಳನ್ನಲ್ಲ, ಕೇವಲ ರೂಥಳನ್ನ ಮಾತ್ರ. ನನಗೆ ಗೊತ್ತಿರುವ ರೂಥಳನ್ನ ಮಾತ್ರ.

ಆಕೆ ಪ್ರತೀದಿನ ಒಂಟಿಯಾಗಿಯೇ ಕೂತಿರುತ್ತಾಳೆ. ರೂಬೆನ್ ಮರಣದ ನಂತರ ಅದೆಷ್ಟೋ ವರ್ಷಗಳಿಂದ ಹೀಗೆ ಒಂಟಿಯಾಗಿ, ಒಬ್ಬಂಟಿಯಾಗಿರೋದನ್ನೇ ಅಭ್ಯಾಸ ಮಾಡಿಕೊಂಡಿದಾಳೆ. ಒಬ್ಬಳೇ ಕೂತುಕೊಂಡು ಆಕಾಶದ ಕಡೆ ನೋಡುತ್ತಿರುತ್ತಾಳೆ. ಅಲ್ಲಿ ಅವಳಿಗೆ ಕಾಣುವುದು ಒಬ್ಬಂಟಿ ನಕ್ಷತ್ರ ಮಾತ್ರ. ಮಿಕ್ಕ ಎಲ್ಲ ನಕ್ಷತ್ರಗಳೂ ಆಕೆಗೂ, ತಮಗೂ ಯಾವುದೇ ಸಂಬಂಧವಿಲ್ಲವೇನೋ ಎಂಬಂತೆ ಅದೃಶ್ಯವಾಗುತ್ತವೆ. ಆನಂತರ ಆಕೆಯ ಕಣ್ಣು ಮುರಿದು ಬಿದ್ದಿರುವ ಗೋಡೆಯ ಮೇಲೆ ನೇತುಹಾಕಿರುವ ಶಿಲುಬೆಯ ಮೇಲೆ, ಜೇಸಸ್‌ನ ವರ್ಣ ಚಿತ್ರದ ಮೇಲೆ ಹರಿಯುತ್ತದೆ.

ಮೊದಲಿಗೆ ಆ ಪ್ರಾಂತ್ಯವೆಲ್ಲಾ ತುಂಬಾ ಮನೋಹರ ವಾಗಿತ್ತು, ಯಾವುದೇ ಔಷಧಿ-ಮದ್ದುಗಳನ್ನು ಸೇವಿಸೋಕೆ ಮುಂಚೆ ಅಲ್ಲಿನ ವಾತಾವರಣದಿಂದಲೇ ರೋಗಿಗೆ ಅರ್ಧ ಗುಣವಾಗುತ್ತಿತ್ತು, ಅಲ್ಲಿ ಆಕೆ ಒಬ್ಬ ನರ್ಸ್, ಆಕೆಯ ರೂಬೆನ್ ಆ ಆಸ್ಪತ್ರೆಯಲ್ಲಿ ಒಬ್ಬ ಧರ್ಮ ಭೋದಕನಾಗಿದ್ದ.

ಗತಕಾಲವು ಹಿಂದಕ್ಕೆ ಸರಿಯುತ್ತಿದ್ದಂತೆ ವರ್ತಮಾನ ಆಕೆಯ ಕಣ್ಣಮುಂದೆ ನಿಲ್ಲುತ್ತೆ, ಗತದೊಳಗೇ ಗೂಡು ಕಟ್ಟಿಕೊಂಡು ಕುಂತರೆ, ವರ್ತಮಾನವೂ ಭೂತಕಾಲವಾಗುತ್ತೆ ಆದರೆ ತನ್ನ ನೆನಪುಗಳು ಮಾತ್ರ ಗತಿಸಿಹೋದ ಕಾಲಕ್ಕೆ ಸೇರಿದ್ದಲ್ಲವೆನ್ನುತ್ತಾಳೆ ರೂಥ್. ತನ್ನ ರೂಬೆನ್ ಎಂದೆಂದಿಗೂ ತನಗೆ ವರ್ತಮಾನವೇ.

ರೂಬೆನ್ ತನ್ನ ಬದುಕಿನೊಳಕ್ಕೆ ಎಷ್ಟು ನಿಶ್ಯಬ್ದದಿಂದ ಪ್ರವೇಶಿಸಿದನೋ ಅಷ್ಟೇ ನಿಶ್ಯಬ್ದದಿಂದ ನಿರ್ಗಮಿಸಿದ. ಹೋದವನು ಸುಮ್ಮನೇ ಹೋದನೇ! ಅದೆಷ್ಟೋ ವಸಂತಗಳನ್ನ ತನ್ನ ಬದುಕಿನಲ್ಲಿ ಚೆಲ್ಲಿಹೋದ. ಒಂದೊಂದು ಕಿರುಬೆರಳಿನಲ್ಲಿ ಒಂದೊಂದು ನೆನಪು ಅರಳಿದ ಹಾಗೆ, ಅರಳಿ ಕೆಳಗುದುರಿದ ಹಾಗೆ-ಅದೆಷ್ಟೊಂದು ಹೇಳಿದ್ದ, ಕಥೆಗಳನ್ನೂ, ಕವಿತೆಗಳನ್ನೂ ಕಟ್ಟಿದ್ದ. ಮನಸ್ಸನ್ನೆಲ್ಲಾ ಕದಡಿ ಈ ನೆನಪುಗಳನ್ನ ನಿನ್ನ ಎದೆಯಾಳದಲ್ಲಿ ಜೋಪಾನವಾಗಿ ಬಚ್ಚಿಟ್ಟುಕೋ ಎಂದು ಹೇಳಿ ಹೋದ. ಆದರೆ ಆವು ಕೇವಲ ನೆನಪುಗಳು ಮಾತ್ರ ಆಗಿರಲಿಲ್ಲ, ಅದು ಒಂದು ಹಿಡಿದಿಡಲಾಗದ ಪ್ರವಾಹ. ಪ್ರವಾಹವನ್ನ ಕಟ್ಟಿಹಾಕಿ ಬಚ್ಚಿಟ್ಟುಕೊಳ್ಳಲು ಆಗುತ್ತೇನು?

ಒಂದು ಬೆಳದಿಂಗಳ ರಾತ್ರಿಯಲ್ಲಿ.... ರೂಬೆನ್ ಹೇಳೋಕೆ ಶುರು ಮಾಡಿದ. ಅವೆಷ್ಟೋ ರಾತ್ರಿಗಳೂ ಹಾಗೆ ಹೇಳುತ್ತಲೇ ಇದ್ದ. ಹೇಳಿದ್ದನ್ನೇ ಹೇಳುತ್ತಿದ್ದ. ಹೇಳುತ್ತಲೇ ನಗುತ್ತಿದ್ದ ಹೇಳುತ್ತಲೇ ಅಳುತ್ತಿದ್ದ. ಆಗ ಅವನ ಕಣ್ಣುಗಳು ಮಿನುಗುತ್ತಿದ್ದವು. ಕಣ್ಣಂಚು ತೇವಗೊಳ್ಳುತ್ತಿತ್ತು, ಆ ಹೊಳಪನ್ನು ರೂಥ್ ತನ್ನ ಕಣ್ಣುಗಳಲ್ಲಿ ಹುದುಗಿಸಿಕೊಳ್ಳುತ್ತಿದ್ದಳು. ತನ್ನ ಕಣ್ಣ ರೆಪ್ಪೆಗಳಿಗೆ ಅವನ ಕಣ್ಣಿನ ಆರ್ದತೆಯನ್ನ ಮೆತ್ತಿಕೊಳ್ಳುತ್ತಿದ್ದಳು. ಅವು ಅವನು ಹಂಚಿದ್ದ ನೆನಪುಗಳು ಮಾತ್ರವಾಗಿರಲಿಲ್ಲ, ಒದ್ದೆಯಾದ ಕಣ್ಣುಗಳು, ಎದೆಯನ್ನು ಹಿಂಡುತ್ತವೆ. ಬೆನ್ನು ಹತ್ತುತ್ತವೆ. ಬೆನ್ನಟ್ಟುತ್ತವೆ.

ಅವನ ಹಾಗೇ ಅವನ ಪೂರ್ವಿಕರೂ ಕೂಡಾ ಈ ಭಯಂಕರವಾದ ಮಹಾಪೂರದಲ್ಲಿ ಈಜಿದವರೇ. ಕೆಲವರು ಆ ಪ್ರವಾಹದಲ್ಲಿ ಕೊಚ್ಚಿಹೋದರು, ಮತ್ತೆ ಕೆಲವರು ಪ್ರವಾಹದ ಸೆಳೆತಕ್ಕೆ ಸಿಗದೆ ಗಟ್ಟಿಯಾಗಿ ಈಜುತ್ತಾ ದಡವನ್ನ ಅರಸಿದರು. ನನ್ನ ಆ ರೂಬೆನ್ ಅದೆಂಥಾ ಮನುಷ್ಯ! ಎಂಥಾ ಅದ್ಭುತ ಮನುಷ್ಯ! ಅಂದವಾದ ಅಸ್ಪೃಶ್ಯ! ಈ ಮಾತುಗಳು ವಿಚಿತ್ರವಾಗಿ ಕಾಣಬಹುದು. ಆದರೆ ರೂಥ್ ಈ ಮಾತನ್ನು ಸಹಜವಾಗಿಯೇ ಹೇಳುತ್ತಾಳೆ. ಅವಳು ರೂಬೆನ್ನನ್ನು ಯಾವಾಗಲೂ ಕರೆಯುತ್ತಿದ್ದದ್ದು ಹಾಗೇನೇ, 'ನನ್ನ ಅಸ್ಪೃಶ್ಯ ಸುಂದರಾಂಗನೇ' ಅಂತಲೇ. ಆಗ ಅವನು ಕಣ್ಣಲ್ಲಿ ಮುಗ್ಧತೆಯನ್ನು ತುಂಬಿಕೊಂಡು, ಪುಟ್ಟ ಮಗುವಿನಂತೆ ತನ್ನ ಕಡೆ ನೋಡುತ್ತಿದ್ದ.

ಎಷ್ಟೋ ವರ್ಷಗಳ ಹಿಂದಿನ ಮಾತು, ಇನ್ನೂ ನಿನ್ನೆ ಮೊನ್ನೆ ನಡೆದಂತೆ ಇದೆ; ಅಲ್ಲ ನಿನ್ನೆ ಮೊನ್ನೆಯೂ ಅಲ್ಲ, ನನ್ನ ಕಣ್ಣ ಮುಂದೆಯೇ ಈಗ ನಡೆಯುತ್ತಿರುವಂತಿದೆ. ಅವನು 'ಬಾ! ನಮ್ಮ ತಾತನ ಹಳ್ಳಿ ತೋರುಸ್ತೇನೆ' ಅಂದ. ಇವಳು ಹೊರಟೇಬಿಟ್ಟಳು. ಮದುವೆಯಾದ ಹೊಸತು. ಮದುವೆಯಾದ ಮೇಲೆ ಅವನ ಜತೆ ಒಬ್ಬಳೇ ನಡೆಯುವುದು ಅದೇ ಮೊದಲನೆಯ ಸಲ. ಕಾಲ್ನಡಿಗೆ. ಕೆರೆಯ ದಡದಲ್ಲೇ ನಡೀತಿದ್ದರೆ, ಮೇಲೆ ಆಕಾಶ ಬೆಳದಿಂಗಳನ್ನ ಹಂಚುತ್ತಾ ಇತ್ತು, ಕೆರೆಯಲ್ಲಿ ಸರಸರನೆ ಮುಳುಗೇಳುತ್ತಿದ್ದ ಪುಟ್ಟ ಪುಟ್ಟ ಮೀನುಗಳ ಕಲರವ. ಅವನ ಪಕ್ಕದಲ್ಲೇ ನಡೆಯುತ್ತಿದ್ದರೂ, ಇಬ್ಬರಲ್ಲೂ ಒಂದು ಬಗೆಯ ಏಕಾಕಿತನ. ಅವನ ಜೊತೆ ಯಲ್ಲಿ ದ್ದಾಗ ಅದೆಂಥದೋ ವಿಚಿತ್ರ ವಾದ ಒಬ್ಬಂಟಿತನ.

ಆಗ ಶುರು ಮಾಡಿದ ಹೇಳೋದನ್ನ

ಮೇಲಿಂದ ಸುರಿಯುವ ಬೆಳದಿಂಗಳ ಮಳೆಯ ಬಗ್ಗೆ,

ಹರಿಯುವ ಝುಳಝುಳ ತೊರೆಯ ಬಗ್ಗೆ,

ಅಸ್ಪೃಶ್ಯ ವಸಂತದ ಬಗ್ಗೆ.

'ತುಂಬಾ ದೂರ ನಡೆದಿದ್ದೇವೆ. ಇನ್ನೂ ಇಷ್ಟು ನಡೀಬೇಕು. ಈ ರಾತ್ರಿಯೆಲ್ಲಾ ಆಗಬಹುದು. ನಿನಗೆ ಆಯಾಸ ಆಗಿದೆಯಾ?'

'ಇಲ್ಲ, ಎಲ್ಲಾ ಹೊಸದಾಗಿದೆ, ವಿಚಿತ್ರವಾಗಿದೆ.'

'ಕಥೆ ಹೇಳಲಾ?'

'ಹೇಳು.'

ರೂಬೆನ್ ಇನ್ನೂ ಕಥೆ ಶುರು ಮಾಡಿರಲಿಲ್ಲ, ಏನಾಯಿತೋ ತಿಳಿಯದು. ಅಷ್ಟರಲ್ಲೇ ಹಕ್ಕಿಯೊಂದು ಜೋರಾಗಿ ಕೂಗು ಹಾಕಿ ಅವರಿಬ್ಬರ ಪಕ್ಕದಿಂದಲೇ ಹಾರಿಹೋಯ್ತು, ಬೆಳದಿಂಗಳಲ್ಲಿ ಅದು ಕಾಣುವವರೆಗೂ ಹಾಗೇ ಅದನ್ನ ನೋಡುತ್ತಲೇ ನಿಂತರು ಅವರಿಬ್ಬರು. ಅದು ಮರೆಯಾದ ಮೇಲೂ ಅದರ ಕೂಗು ಮಾತ್ರ ಇನ್ನೂ ಕೇಳಿಸುತ್ತಲೇ ಇತ್ತು.

'ಅದು ಬೆಳ್ಳಕ್ಕಿ, ಅದು ಯಾವಾಗಲೂ ಹಾಗೇನೇ. ಏನೋ ಮುಳುಗಿಹೋಯ್ತೇನೋ ಅನ್ನೋ ಹಾಗೆ ಕಿರುಚಾಟ, ಜತೆಗೆ ಯಾರೋ ಅಟ್ಟಿಸಿಕೊಂಡು ಬರುತ್ತಿ ದ್ದಾರೇನೋ ಅನ್ನೋ ಹಾಗೆ ಆ ಹಾರಾಟ. ನಂತರ ಅದು ಕಾಣಿಸೋದೂ ಇಲ್ಲ, ಕೇಳಿಸೋದೂ ಇಲ್ಲ.'

ರೂಬೆನ್ ಈಗೇನಾದರೂ ಅದೇ ಮಾತುಗಳನ್ನು ಹೇಳಿದರೆ ರೂಥ್ ಅದನ್ನು ಒಪ್ಪಿಕೊಳ್ಳುತ್ತಿರಲಿಲ್ಲ, ನನ್ನ ನೆನಪಿನಲ್ಲಿ ಆ ಹಕ್ಕಿ ಸದಾ ಇದ್ದೇ ಇರುತ್ತದೆ. ಅದರ ಕೂಗು ಯಾವಾಗಲೂ ತನಗೆ ಕೇಳಿಸುತ್ತಲೇ ಇರುತ್ತೆ, ರೂಬೆನ್ ಹೇಳಿದ ಕಥೆ ನೆನಪಾದಾಗಲೆಲ್ಲಾ ಆ ಹಕ್ಕಿಯೂ ನೆನಪಾಗುತ್ತದೆ.

ರೂಬೆನ್‌ನ ತಾತನಿಗೆ ಅವರ ತಾತ ಹೇಳಿದ ಕಥೆಯಂತೆ ಅದು. ಆ ಕಥೆಯಲ್ಲಿ ಶಿವನೂ ಇರುತ್ತಾನೆ. ಪಾರ್ವತಿಯೂ ಇರುತ್ತಾಳೆ. ಅವರ ಹತ್ತಿರ ಜೇನಿನಷ್ಟು ಸಿಹಿಯಾಗಿರುವ ಹಾಲು ಕರೆಯುವ ಕಾಮಧೇನು ಇದೆ. ಆ ಹಾಲಿನಿಂದಲೇ ಪಾರ್ವತಿ ದೇವಾಧಿದೇವತೆಗಳಿಗೆ ಔತಣದ ಅಡುಗೆ ಮಾಡ್ತಿರ್ತಾಳೆ. ಆ ಔತಣಕ್ಕೆ ದೇವರುಗಳು ಮಾತ್ರ ಅರ್ಹರಾ ದರೂ ಋಷಿ ಮುನಿಗಳಿಗೂ ಪ್ರತ್ಯೇಕ ಆಹ್ವಾನವಿರುತ್ತದೆ.

ಆ ಮಹಿಮಾನ್ವಿತವಾದ ಗೋವನ್ನು ಕಾಯುವುದಕ್ಕೆ ಒಬ್ಬ ಹುಡುಗನಿರುತ್ತಾನೆ. ಹೆಸರು ಚನ್ನಯ್ಯ. ಒಂದು ದಿವಸ ಅವನಿಗೂ ಆ ಜೇನಿನಂತ ಹಾಲನ್ನು ಕುಡಿಯಬೇಕು ಅನ್ನಿಸುತ್ತೆ. ತನ್ನ ಬಯಕೆಯನ್ನ ಪಾರ್ವತಿಯ ಹತ್ತಿರ ಹೇಳುತ್ತಾನೆ. ಆದರೆ ಪಾರ್ವತಿ ಅವನ ಕೋರಿಕೆಯನ್ನು ನಿರಾಕರಿಸುತ್ತಾಳೆ. ಆದರೆ ಅವನಿಗೆ ಆ ಹಾಲನ್ನ ಕುಡೀಲೇಬೇಕು ಅನ್ನೋ ಆದಮ್ಯವಾದ ಬಯಕೆ. ಮತ್ತೆ ಮತ್ತೆ ಪಾರ್ವತಿಯನ್ನ ಗೋಗರೆಯುತ್ತಾನೆ. 'ನಿನ್ನ ಬಯಕೆಯನ್ನ ಆ ಕಾಮಧೇನುವಿನ ಹತ್ತಿರವೇ ಹೇಳಿಕೋ ಹೋಗೋ ಚನ್ನ' ಎನ್ನುತ್ತಾಳೆ, ಪಾರ್ವತಿ. ಚನ್ನಯ್ಯ ತನ್ನ ಕೋರಿಕೆಯನ್ನು ಕಾಮಧೇನುವಿನ ಬಳಿ ತೋಡಿಕೊಳ್ಳು ತ್ತಾನೆ.... ವಿಚಿತ್ರ. ಆ ಕೋರಿಕೆ ಕೇಳಿದ ಕೂಡಲೇ ಕಾಮಧೇನುವು ನೆಲದ ಮೇಲೆ ಕುಸಿದು ಬಿದ್ದು ಸತ್ತು ಹೋಗುತ್ತದೆ.

ಕಾಮಧೇನುವಿನ ಮರಣದ ವಾರ್ತೆ ಶಿವ ಪಾರ್ವತಿಯರಿಗೆ ತಿಳಿಯುತ್ತದೆ. ದೇವಾನುದೇವತೆಗಳಿಗೆಲ್ಲಾ ವಿಷಯ ತಲುಪುತ್ತದೆ. ಅವರೆಲ್ಲರೂ ಬಂದಾಗ ಕಾಮಧೇನುವಿನ ಮಾಂಸವನ್ನೇ ಬೇಯಿಸಿ ಔತಣ ಮಾಡಬೇಕು ಅಂತ ಶಿವ ಪಾರ್ವತಿಯರು ನಿರ್ಧರಿಸ್ತಾರೆ. ಕಾಮಧೇನುವಿನ ಹಾಲೇ ಅಷ್ಟು ಸಿಹಿಯಾಗಿದ್ದಾಗ ಅದರ ಮಾಂಸ ಇನ್ನೆಷ್ಟು ರುಚಿಯಾಗಿರಬೇಕೆಂದು ಮನಸ್ಸಿನಲ್ಲಿಯೇ ಮಂಡಿಗೆ ತಿನ್ನುತ್ತಾ, ಲೊಟ್ಟೆ ಹಾಕುತ್ತಾ ಎಲ್ಲಾ ದೇವರುಗಳು, ಋಷಿಗಳು ಸತ್ತು ಬಿದ್ದಿದ್ದ ಕಾಮಧೇನುವಿನ ಸುತ್ತಲೂ ಗುಂಪುಗೂಡುತ್ತಾರೆ.

ಆಗ ಒಂದು ಸಮಸ್ಯೆ ಹುಟ್ಟಿಕೊಳ್ಳುತ್ತೆ. ಕಾಮಧೇನು ವನ್ನ ಅದು ಸತ್ತು ಬಿದ್ದಿದ್ದ ಜಾಗದಿಂದ ಬೇರೆ ಕಡೆಗೆ ಸಾಗಿಸಬೇಕು, ಅದೇ ಆಚಾರ ಎನ್ನುತ್ತಾರೆ ದೇವರುಗಳು. ಹಾಗೆ ಮಾಡದಿದ್ದರೆ ಅದನ್ನು ಶಾಸ್ತ್ರವು ಒಪ್ಪುವುದಿಲ್ಲವೆಂದು ಋಷಿಗಳು ಹೇಳುತ್ತಾರೆ. ಆದರೆ ಸಕಲ ದೇವತೆಗಳೇ ಒಟ್ಟಾದರೂ ಕಾಮಧೇನುವನ್ನ ಅಲ್ಲಿಂದ ಕದಲಿಸಲೂ ಆಗುವುದಿಲ್ಲ, ಕೊನೆಗೆ ಋಷಿಗಳು ಅದನ್ನು ಕದಲಿಸುವ ಶಕ್ತಿ ಜಾಂಬವಂತನಿಗೆ ಮಾತ್ರ ಇದೆ, ಅವನನ್ನೇ ಕರೆಯಿರಿ ಎಂದು ಸಲಹೆ ಕೊಡುತ್ತಾರೆ. ಶಿವ ಚನ್ನಯ್ಯನಿಗೆ ಜಾಂಬವಂತನನ್ನ ಕರೆತರಲು ಆಜ್ಞೆ ಮಾಡುತ್ತಾನೆ.

ತಾತಾ....... ಮಹಾ........ ಇಳಿದು ಬಾ

ದಿಗಂತಗಳಿಗೂ ಕೇಳಿಸುವ ಹಾಗೆ ಚನ್ನಯ್ಯ ಕೇಕೆ ಹಾಕುತ್ತಾನೆ. ಜಾಂಬವಂತನು ಆಕಾಶದಿಂದ ಇಳಿದನೋ, ಭೂಮಿಯೊಳಗಿಂದ ಮೇಲೆ ಬಂದನೋ, ಅಂತೂ ಯಾವುದೋ ಒಂದು ಲೋಕದಿಂದ ಕಾಣಿಸಿಕೊಳ್ಳುತ್ತಾನೆ. ಬಂದವನೇ ಕಾಮಧೇನುವಿನ ಮೇಲೆ ಮತ್ತು ಅಲ್ಲಿದ್ದ ದೇವ ಋಷಿಗಳ ಮೇಲೆಲ್ಲಾ ಒಂದು ಸಾರಿ ಕಣ್ಣುಹಾಯಿಸುತ್ತಾನೆ. ಋಷಿಗಳನ್ನು ಮಾತನಾಡಿ ಸುತ್ತಾನೆ. ಅವರೆಲ್ಲಾ ಅವನು ಮಾಡಬೇಕಾದ ಕೆಲಸವೇನೆಂದು ತಿಳಿಸುತ್ತಾರೆ. ಅಷ್ಟೇ! ತನ್ನ ಎಡಗೈಯಿಂದಲೇ ಕಾಮಧೇನು ವನ್ನ ಎತ್ತುತ್ತಾನೆ ಜಾಂಬವಂತ. ದೇವರುಗಳೆಲ್ಲಾ ಜಾಂಬವಂತ ನಿಗೆ ಆಶೀರ್ವಾದ ಮಾಡುತ್ತಾರೆ. ಋಷಿಗಳು ಜಯಕಾರ ಹಾಕುತ್ತಾರೆ. ಇಂಥ ಎಲ್ಲ ಸಂದರ್ಭಗಳಲ್ಲಿಯೂ ಋಷಿಗಳು, ದೇವರುಗಳು ಮಾಡೋದೆಲ್ಲಾ ಹಾಗೇ ತಾನೆ! ಅದು ಆಚಾರವೇ ಆಗಿರಬಹುದು. ಆ ನಂತರ ಕಾಮಧೇನುವನ್ನ ಎಷ್ಟು ದೂರ ತೆಗೆದುಕೊಂಡು ಹೋಗಿ ಎಲ್ಲಿಡಬೇಕು ಎಂಬುದನ್ನೂ ಅವರೇ ಹೇಳುತ್ತಾರೆ. ಎಲ್ಲಾ ದೇವರುಗಳು, ಋಷಿಗಳು ತನ್ನನ್ನು ಹಿಂಬಾಲಿಸುತ್ತಿದ್ದಂತೆ, ಜಾಂಬವಂತ ಅವರು ಹೇಳಿದ ಜಾಗಕ್ಕೆ ಕಾಮಧೇನುವನ್ನ ಸೇರಿಸುತ್ತಾನೆ.

ನಂತರ ದೇವರುಗಳು ಆ ಹಸುವನ್ನ ಕೊಯ್ದು ಅದರ ಚರ್ಮ ಸುಲಿಯುತ್ತಾರೆ. ಆ ನಂತರ ಮಾಂಸವನ್ನ ಎರಡು ಭಾಗ ಮಾಡು ಎಂದು ಜಾಂಬವಂತನಿಗೆ ಹೇಳುತ್ತಾರೆ. ಆ ಎರಡು ಭಾಗದಲ್ಲಿ ಒಂದು ಭಾಗವನ್ನ

ಮಾತ್ರ ಬೇಯಿಸು ಎನ್ನುತ್ತಾರೆ. ಎರಡನೆಯ ಭಾಗವನ್ನ ಮುಂತ್ರಿಸಿ ಮತ್ತೆ ಕಾಮಧೇನುವನ್ನ ಬದುಕುವಂತೆ ಮಾಡುತ್ತೇವೆ ಅಂತ ಹೇಳಿ ಅಲ್ಲಿಂದ ಹೊರಡುತ್ತಾ ತಾವು ತಿನ್ನಲಿರುವ ಮಾಂಸದ ರುಚಿಯ ಬಗ್ಗೆ ಚರ್ಚೆಯಲ್ಲಿ ಮುಳುಗುತ್ತಾರೆ.

ಜಾಂಬವಂತ ಅವರು ಹೇಳಿದಂತೆ ಕಾಮಧೇನುವಿನ ಮಾಂಸವನ್ನ ಎರಡು ಪಾಲು ಮಾಡಲಿಲ್ಲ. ಬದಲಿಗೆ ಇಡೀ ಮಾಂಸವನ್ನು ಬೇಯಿಸುವುದಕ್ಕಿಟ್ಟ. ಅದನ್ನು ತಿರುವುತ್ತಿರುವಾಗ ಬೇಯುತ್ತಿದ್ದ ಮಾಂಸದ ತುಣುಕೊಂದು ಕೆಳಕ್ಕೆ ಬಿದ್ದು ಮಣ್ಣು ಮೆತ್ತಿಕೊಂಡಿತು. ಅಶುಭ್ರವಾಯಿತು. ಆ ತುಣುಕನ್ನ ಚನ್ನಯ್ಯ ಚೆನ್ನಾಗಿ ಒರೆಸಿ ಮತ್ತೆ ಬೇಯಲಿಟ್ಟಿದ್ದ ಮಾಂಸದ ಪಾತ್ರೆಯಲ್ಲೇ ಹಾಕಿದ.

ಆ ವಿಷಯ ಶಿವಪಾರ್ವತಿಯರಿಗೆ ತಿಳಿಯಿತು. ಮಾಂಸವನ್ನ ಎರಡು ಭಾಗ ಮಾಡದಿದ್ದಕ್ಕೆ ದೇವರುಗಳಿಗೆ ಮತ್ತು ಋಷಿಗಳಿಗೆ ಜಾಂಬವಂತನ ಮೇಲೆ ಕೋಪ ಬಂತು. ಮಣ್ಣಲ್ಲಿ ಬಿದ್ದು ಅಶುಭ್ರವಾದ ಮಾಂಸದ ತುಣುಕನ್ನ ಮತ್ತೆ ಬೇಯಲಿಟ್ಟಿದ್ದ ಪಾತ್ರೆಯಲ್ಲಿ ಹಾಕಿದ್ದಕ್ಕೆ ಅವರಿಗೆ ಚನ್ನಯ್ಯನ ಮೇಲೆ ಕೋಪ ಉಕ್ಕಿ ಬಂತು. ಕೋಪ ಬಂದಾಗ ಶಿವನಿಗೇ ಅಲ್ಲ, ಯಾವ ದೇವರಿಗೇ ಆಗಲಿ ಕೈಯಲ್ಲಾಗೋದು ಒಂದೇ, ಶಪಿಸೋದು! ಈಗಲೂ ಹಾಗೇ. ಶಿವ ಜಾಂಬವಂತ ಮತ್ತು ಚನ್ನಯ್ಯರಿಗೆ 'ಕಲಿಯುಗದಲ್ಲಿ ಸತ್ತ ದನದ ಮಾಂಸ ತಿಂತಾ, ಬೀದಿ ಗುಡಿಸಿಕೊಂಡು ಬದುಕಿ' ಅಂತ ಶಾಪ ಕೊಡುತ್ತಾನೆ. ಆ ಶಾಪ ಎಲ್ಲ ಕಾಲಕ್ಕೂ ನಿಲ್ಲಲಿ ಅಂತ ಮಿಕ್ಕ ಎಲ್ಲ ದೇವರುಗಳು, ಋಷಿಗಳು 'ಅಸ್ತು' ಎನ್ನುತ್ತಾರೆ.

ಜಾಂಬವಂತ ಹಾಗೂ ಚನ್ನಯ್ಯ ಇಬ್ಬರೇ ಕಾಮಧೇನುವಿನ ಮಾಂಸವನ್ನ ತಿಂದರು. ಮುಂದೆ ಕಲಿಯುಗದಲ್ಲಿ ಜಾಂಬವಂತನ ಸಂತತಿಯವರು ಮಾದಿಗರಾದರು, ಚನ್ನಯ್ಯನ ಸಂತತಿಯವರು ಹೊಲೆಯರಾದರು.

ಕಥೆ ಮುಗಿಯಿತೆನ್ನುವಂತೆ ರೂಬೆನ್ ತನ್ನ ಕಡೆ ನೋಡಿದ. ತಾನು ಮೌನವಾಗಿಯೇ ಇದ್ದಳು.

'ಹೇಗಿದೆ ಕಟ್ಟು ಕಥೆ?' ನಗ್ತಾ ಕೇಳಿದ..

`ಯಾರಾದರೂ ನಂಬಲೇಬೇಕು, ಹಾಗೆ ಹೇಳ್ತಿದ್ದ ನಮ್ಮ ತಾತ ಈ ಕಥೆಯನ್ನ. ಅವರ ತಾತನೂ ನಂಬಿಕೆಯಿಂದ ಕೂಡಿದ ಸತ್ಯದಿಂದ ಇದೇ ಕಥೆ ಹೇಳುತ್ತಿದ್ದ. ನೀನೂ, ನಾನೂ ಹುಟ್ಟಿದ ಕಥೆ. ನಮ್ಮಂಥವರೆಲ್ಲರ ಹುಟ್ಟು ಎಲ್ಲಿದೆ? ಇಗೋ ಈ ಶಾಪದಲ್ಲಿದೆ. ದೇವತೆಗಳ ಆಕ್ರೋಶದಲ್ಲಿದೆ. ಬಾಂಡಲೆಯಿಂದ ಹಾರಿ ಬಿದ್ದ ಮಾಂಸದ ತುಣುಕಿನಲ್ಲಿದೆ... ಇದು ಯಾಕೆ ಹೀಗಿದೆ?'


ನಿಲೆಹಾಕಿ ಕೇಳಿದಂತೆ ಕೇಳಿದರೂ ಅವನು ಆ ಮಾತುಗಳನ್ನಾಡುವಾಗ ಕೋಪಿಸಿಕೊಂಡಿರಲಿಲ್ಲ. ನಗುತ್ತಲೇ ಇದ್ದ. ತಾನು ಮಾತ್ರ ಆವಾಗ ಏನೂ ಹೇಳಲಿಲ್ಲ. ಹಕ್ಕಿಗೋಸ್ಕರ ಹುಡುಕಿದಳು. ಆ ಹಕ್ಕಿ ಕೂಗಿಕೊಂಡು ಮತ್ತೆ ಬಂದರೆ ಚೆನ್ನ ಅಂತ ಅನಿಸಿತ್ತು. ಅದೇ ಮಾತನ್ನ ರೂಬೆನ್‌ಗೂ ಹೇಳಿದಳು. ಅವನು ಆ ಹಕ್ಕಿಯನ್ನು ಕರೀತೇನೆ ಅಂದ. ಆ ಹಕ್ಕಿಯ ರೀತಿಯಲ್ಲೇ ಕೂಗು ಹಾಕಿದ. ನಿಶ್ಶಬ್ಧವನ್ನ ಸೀಳಿಕೊಂಡು ಹೋದ ಆ ಕೂಗು ಬಹುದೂರದವರೆಗೆ ಕೇಳಿಸಿರುತ್ತೆ, ಖಂಡಿತವಾಗಿಯೂ ಬಹುದೂರದವರೆಗೆ ಪ್ರತಿಧ್ವನಿಸಿರುತ್ತದೆ.

ಆ ಕಾಲದಲ್ಲಾದರೆ ಅದೊಂದು ವಿಚಿತ್ರ ಕಥೆ ಅಂತ ಮಾತ್ರ ಅನ್ನಿಸಿತ್ತೇ ಹೊರತು ಇನ್ನೇನೂ ಅನ್ನಿಸಿರಲಿಲ್ಲ. ಆದರೆ ಈಗ ಮಾತ್ರ ಅದು ವಿಚಿತ್ರ ಅನ್ನಿಸೋದಿಲ್ಲ. ಬದಲಾಗಿ ವಿಕೃತ ಅನ್ನಿಸುತ್ತದೆ. ಅದಕ್ಕಿಂತಲೂ ದುಷ್ಟವಾದ ಕಥೆ ಬೇರೊಂದಿಲ್ಲವೇನೋ ಅನ್ನಿಸುತ್ತದೆ. ಅಂದು ಕಥೆ ಹೇಳಿದ ರೂಬೆನ್‌ನ ಮುಖದಲ್ಲಿ ಕಾಣಿಸಿಕೊಂಡ ನಗುವಿನಲ್ಲಿ ತಿರಸ್ಕಾರ ಮತ್ತು ಲೇವಡಿ ಇದ್ದಿರಬಹುದು ಅನಿಸುತ್ತದೆ. ಈಗ ನೆನಪಾಗ್ತಿದೆ. ಈಗ ಆ ದಿನದ ಪ್ರತಿಯೊಂದು ವಿವರಗಳನ್ನು ಮೆಲುಕು ಹಾಕುತ್ತಿರುವಾಗ, ಆ ದಿನ ತಾನು ಆ ಹಕ್ಕಿಯ ಬಗ್ಗೆ ಮಾತನಾಡಿದಾಗ ರೂಬೆನ್ ಅದರ ಕೂಗನ್ನ ಅನುಕರಿಸಿದ್ದ. ಈಗ ಅನಿಸುತ್ತಿದೆ, ಅದು ಕೇವಲ ಅನುಕರಣೆಯಾಗಿರಲಿಲ್ಲ, ಅದು ಆಕ್ರಂದನ. ಆಗ ತನಗೆ ತಿಳಿಯಲಿಲ್ಲ, ನಿಜವಾಗಿಯೂ ಅದು ಒಬ್ಬ ಅಸ್ಪೃಶ್ಯನ ಆಕ್ರಂದನವೇ. ತನ್ನ ಹುಟ್ಟನ್ನ ಅಷ್ಟು ಕೆಟ್ಟದಾಗಿ ಚಿತ್ರಿಸಿದ್ದರ ವಿರುದ್ಧ ಚರಿತ್ರೆಯಲ್ಲಿ ತನಗೆ, ತನ್ನವರಿಗೆ ನಡೆದ ದ್ರೋಹದ ವಿರುದ್ಧ ಅದೊಂದು ಪ್ರತಿಭಟನೆಯೇ. ಅದೊಂದು ತಿರಸ್ಕಾರವೇ.

ಅದಕ್ಕೇ ತನ್ನ ಕನಸುಗಳು ಗತಕಾಲದ್ದಲ್ಲ ಎನ್ನುತ್ತಾಳೆ ರೂತ್. ಅದೊಂದು ಅಸ್ಪಷ್ಟ ವಸಂತ ಎನ್ನುತ್ತಾಳೆ. ಅಲೆಅಲೆಯಾಗಿ ಜೋರಾಗಿ ಆಕಾಶದೆತ್ತರಕ್ಕೇರಿ ಉಕ್ಕಿ ಬೀಳುವ ಸಮುದ್ರದಲೆಯಂಥ ಪ್ರಚಂಡ ಘೋಷ ಎನ್ನುತ್ತಾಳೆ.... ಆ ವಸಂತಕ್ಕೆ ಕೊನೆ ಮೊದಲಿಲ್ಲ, ಎಲ್ಲಿಯೂ ಅದರ ಮುಂದುವರಿಕೆ [illegible]... ಹಾಡಿದಂತೆ..... ಕಥೆಕಥನಾತ, ಅಗಾಧಗಳನ್ನು ಅಗೆದೆಗೆಯುತ್ತಾ... ಮನಸ್ಸಿನಾಳಗಳನ್ನ ಹುಡುಕಿ ತೆಗೆಯುತ್ತಾ...

(ಮುಂದುವರಿಯುವುದು)

ಮೋಡಿಗಾರನ ಜಾಡ ಹಿಡಿದು



ಬೇಂದ್ರೆಯ ಹಾಗೆ 'ಕುಣಿಯೋಣು ಬಾರ' ಎಂದು ಓದುಗರನ್ನು ಮೋಡಿ ಮಾಡಿ ಕರೆಯುವ ಶಕ್ತಿ ಕನ್ನಡದ ಇನ್ಯಾವ ಕವಿಗೂ ಇರಲಾರದೇನೊ. ಯಾವ ಮುದಿವಂತಿಕೆಯೂ ಇಲ್ಲದೆ ದೇಸಿ ಕನ್ನಡ ಮತ್ತು ಓತಪ್ರೋತ ಸಂಸ್ಕೃತದ ವರ್ಣ ಸಂಕರ ಮಾಡುತ್ತಾ, ಪದಗಳನ್ನು ಒಡೆಯುತ್ತಾ, ಪದಗಳನ್ನು ಹೊಸ ರೀತಿಯಲ್ಲಿ ಬೆಸೆಯುತ್ತಾ, ಸುಮ್ಮನೆ ಆಟವಾಡುತ್ತಿರುವಂತೆ ತೋರುತ್ತಲೇ ಪದ್ಯದ ಸುರುಳನ್ನು ಬೇಂದ್ರೆಯ ಮಾತಿನಲ್ಲೇ ಹೇಳುವುದಾದರೆ "ಹಳಚ್ಚನೆ ಮಿಂಚಿಸುವ" ಇವರ ಗಾರುಡಿ ಕಲೆ ಒಂದು ಸಿದ್ಧಿಯೇ ಹೌದು. "ಅರ್ಥ" ಆಗುವುದಕ್ಕೆ ಮುಂಚೆ "ಹೃದ್ಯ" ಆಗುವಂತದು. ವೇದ ಗಣಿತ, ಭೌತ ಶಾಸ್ತ್ರದಿಂದ ಹಿಡಿದು ಕನ್ನಡ, ಸಂಸ್ಕೃತ, ಪಾಶ್ಚಿಮಾತ್ಯ ಕಾವ್ಯಮೀಮಾಂಸೆ ಮತ್ತು ಆಧ್ಯಾತ್ಮದವರೆಗೆ ಅಗಾಧ ಓದು, ಆಸಕ್ತಿ ಹೊಂದಿದ್ದ ಈ ಕನ್ನಡದ 'ಮ್ಯಾಡ್ ಜೀನಿಯಸ್' ಬಗ್ಗೆ ಇರುವಷ್ಟು ದಂತಕತೆಗಳೂ ಕನ್ನಡದ ಇನ್ಯಾವ ಕವಿಯ ಬಗ್ಗೆ ಇಲ್ಲ.

ಬಿ.ಎಚ್.ಎಸ್. ಪ್ರಥಮ ದರ್ಜೆ ಕಾಲೇಜು ಬೇಂದ್ರೆಯ ಕುರಿತು ನಡೆಸಿದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳ ಸಂಗ್ರಹ 'ಬೆಳುದಿಂಗಳ ನೋಡಾ' ಪುಸ್ತಕ (ಸಂ: ವಿ.ಎಸ್.. ಶ್ರೀಧರ) ಕವಿಯ ಕಾವ್ಯ ಮತ್ತು ವ್ಯಕ್ತಿತ್ವದ ಹಲವು ಮಗ್ಗುಲುಗಳನ್ನು ಪರಿಶೀಲಿಸುವ ಮೂಲಕ ಬೇಂದ್ರೆಯ ಮರುಓದಿಗೆ ಪ್ರೇರೇಪಿಸುವಂತಹದು.

ಇಲ್ಲಿನ ಕೆಲವು ಲೇಖನಗಳು ಬೇಂದ್ರೆಯ 'ಎಕ್ಸೆಂಟ್ರಿಕ್' ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟರೆ ಇನ್ನು ಕೆಲವು ಇವರ ಕವನಗಳನ್ನು ಸೂಕ್ಷ್ಮ ಓದಿಗೆ ಹಚ್ಚುತ್ತವೆ. ಬೇಂದ್ರೆಯ ನಿಕಟ ಪರಿಚಯವಿದ್ದ ಇನ್ನು ಕೆಲವು ಲೇಖಕರು ವ್ಯಕ್ತಿತ್ವ ಮತ್ತು ಕಾವ್ಯದ ಸಂಬಂಧಗಳನ್ನು ಪರಿಶೀಲಿಸುತ್ತಾರೆ.

ವಸಂತ ದಿವಾಣಜಿ ಅವರ ಉದ್ಘಾಟನಾ ಭಾಷಣ-ಲೇಖನ ಯಾವುದೇ ಒಂದು ವಾದದ ಜಾಡು ಹಿಡಿಯದೆ ಆತ್ಮೀಯ ನೆಲೆಯಲ್ಲಿ ಬೇಂದ್ರೆಯನ್ನು ಪರಿಚಯಿಸುವ ಯತ್ನ. ಇಲ್ಲಿ ಪ್ರಸ್ತಾಪವಾಗುವ ಬೇಂದ್ರೆ 'ಗಾಥಾ ಸಪ್ತಶತಿ'ಯ ಕತೆಯೊಂದನ್ನು ವ್ಯಾಪಾರೀಕರಣ ಮತ್ತು ವಾಣಿಜ್ಯೀಕರಣದ ನೆಲೆಯಲ್ಲಿ ಹೇಗೆ ಗ್ರಹಿಸಿದ್ದರು ಎಂಬ ಪ್ರಸಂಗ ವಿಶೇಷವಾಗಿ ಗಮನ ಸೆಳೆಯುತ್ತದೆ.

ಬನ್ನಂಜೆ ಗೋವಿಂದಾಚಾರ್ಯರ ಲೇಖನ ಬೇಂದ್ರೆಯ ಭಾಷೆಯ ಪ್ರಯೋಗಶೀಲತೆಯ ಬಗ್ಗೆ, ಭಾಷೆಯ ವಿಶಿಷ್ಟ ಲಯದಲ್ಲಿಯೇ ಅಡಕವಾಗಿರುವ ಆಧ್ಯಾತ್ಮಿಕ ನೆಲೆಯ ಬಗ್ಗೆ ಪ್ರಸ್ತಾಪಿಸುತ್ತದೆ. ಬೇಂದ್ರೆಯ ಕೊನೆಯ ಹಂತದ ಅನೇಕ ಕವಿತೆಗಳು ತೀರ ಕ್ಲಿಷ್ಟ ಎಂಬ ವಾದಕ್ಕೆ ಉತ್ತರವಾಗಿ ಜಾನಪದ ಸತ್ವದಿಂದ ಹಿಡಿದು ಶಾಕ್ತ ಸಂಪ್ರದಾಯದವರೆಗೆ ಅನೇಕ ಜ್ಞಾನವಾಹಿನಿಗಳನ್ನು ಅರೆದು ಕುಡಿದಿದ್ದ ಬೇಂದ್ರೆಯನ್ನು ಅಧ್ಯಯನ ಮಾಡುವವರಿಗೂ ಅವರಷ್ಟೇ ಓದಿನ ವ್ಯಾಪ್ತಿ ಇರಬೇಕು ಎಂಬ ವಾದವನ್ನು ಬನ್ನಂಜೆ ಮುಂದಿಡುತ್ತಾರೆ. ಆದರೆ "ನಮ್ಮ ದಿನದ ಮಾತು, ಜನದ ಮಾತು, ಮನದ ಮಾತಾಗಬೇಕ" ಎಂದ ಕವಿ ಒಂದು ಹಂತದಲ್ಲಿ ಸಂಖ್ಯಾ ಶಾಸ್ತ್ರದ ಕಸರತ್ತಿಗೆ ಮಾರುಹೋದದ್ದು ಯಾಕೆ ಎಂಬುದಕ್ಕೆ ಇಲ್ಲಿ ಉತ್ತರ ಸಿಗುವುದಿಲ್ಲ.


ಕಲಾಕಾರರಾದ ಸುರೇಶ್ ಕುಲಕರ್ಣಿಯವರ ಲೇಖನವೂ ಆತ್ಮೀಯ ಸಂವಾದದ ಜಾಡಿನಲ್ಲಿಯೇ ಮುಂದುವರಿದರೂ ಸಹ ಆ ಮೂಲಕವೇ ಕೆಲವು ಪದ್ಯಗಳನ್ನು ಓದುವ ಹೊಸ ಸಾಧ್ಯತೆಯನ್ನು ಮುಂದಿಡುತ್ತದೆ. ಕ್ಯುಬಿಸಂ ದೃಷ್ಟಿಕೋನದಿಂದ ಕವಿತೆ ಓದುವ ಪರಿ, 'ಸಾಧನಕೇರಿ' ಮತ್ತು 'ಯಾರಿಗೂ ಹೇಳೋಣು ಬ್ಯಾಡ'ದಂತಹ ಪ್ರಸಿದ್ಧ ಕವಿತೆಗಳನ್ನು ಹೊಸ ರೀತಿಯಲ್ಲಿ ಓದುವ ಸಾಧ್ಯತೆಗಳನ್ನು ಇದು ತೆರೆದಿಡುತ್ತದೆ. ಇಲ್ಲಿನ ಗಿಳಿ ಶಾಸ್ತ್ರದವನ ಮತ್ತು ಭವಿಷ್ಯ ನುಡಿಯುವವನ ದೃಷ್ಟಾಂತಗಳು ಬೇಂದ್ರೆಯ ವ್ಯಕ್ತಿತ್ವದ ತಾರ್ಕಿಕ-ವೈಜ್ಞಾನಿಕ ಮುಖವನ್ನು ಸ್ಪಷ್ಟವಾಗಿ ಕಟ್ಟಿಕೊಡುತ್ತವೆ. ಇದಕ್ಕೆ ವಿರುದ್ಧವೇ ಅನ್ನಬಹುದಾದ ದಿಕ್ಕಿನಲ್ಲಿ ಬಿ.ಬಿ. ರಾಜಪುರೋಹಿತ್ ಅವರ ಲೇಖನ ಬೇಂದ್ರೆಯ ಅಲೌಕಿಕ-ಆಧ್ಯಾತ್ಮಿಕ (ಅತಾರ್ಕಿಕ?) ಅನುಭವ ಲೋಕವನ್ನು ಪರಿಚಯಿಸುತ್ತದೆ.

ಇನ್ನುಳಿದ ಎಲ್ಲ ಲೇಖನಗಳು ಬೇಂದ್ರೆಯ ಕಾವ್ಯಾವಲೋಕನಕ್ಕೆ ಸಂಬಂಧಿಸಿದ್ದು. ಶತಾವಧಾನಿ ಗಣೇಶ್ ತಮ್ಮ ವಿದ್ವತ್ಪೂರ್ಣ ಲೇಖನದಲ್ಲಿ ಬೇಂದ್ರೆ ಬಳಸಿದ ಕೆಲವು ಕಾವ್ಯ ಪ್ರಾಕಾರಗಳ ಬಗ್ಗೆ (ಉದಾಹರಣೆಗೆ ವೈದಿಕ ಛಂದಸ್ಸು), "[illegible]" ದ ಬಗ್ಗೆ ತಗಾದೆ ತೆಗೆಯುತ್ತಾರೆ. ಗಣೇಶ್ ಅವರ ಅಲಂಕಾರಿಕ ಭಾಷೆಯೇ ಈ ವಾದವನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ತೊಡಕಾಗುವುದು ವಿಪರ್ಯಾಸದೆನ್ನಲೇ ಬೇಕು!

ರಾಜೇಂದ್ರ ಚೆನ್ನಿಯವರ ಲೇಖನ ಬೇಂದ್ರೆಯವರ "ಸೃಷ್ಟಿಶೀಲ ವೈಚಾರಿಕ ಅರಾಜಕತೆ" ಮತ್ತು ಕಾವ್ಯಸೃಷ್ಟಿಯ ನಡುವಿನ ಸಂಬಂಧವನ್ನು ಅರಸುತ್ತದೆ. ಮಾರ್ಗ, ದೇಸೀ ಪಂಥಗಳೆರಡನ್ನೂ ಮೈಗೂಡಿಸಿಕೊಂಡ ಬೇಂದ್ರೆಯ ಕಾವ್ಯ ಕಸುವು ಪಡೆದ ವಿಶಿಷ್ಟತೆಯ ಬಗ್ಗೆ ಮಾತನಾಡುತ್ತಾರೆ. ಹಯವದನ ಉಪಾಧ್ಯ ತಮ್ಮ ಲೇಖನದಲ್ಲಿ ಬೇಂದ್ರೆ ಸರಸ್ವತಿ, ಲಕ್ಷ್ಮಿಯರೊಂದಿಗೆ ಹಳ್ಳಿಯ ದುರ್ಗವ್ವ, ಮರವ್ವರನ್ನೂ ಒಪ್ಪಿಕೊಂಡರು ಎನ್ನುತ್ತಾರೆ.

ಜೇವಿ ಕುಲಕರ್ಣಿಯವರ ಲೇಖನ 'ಇಳಿದು ಬಾ ತಾಯಿ' ಕವನದ ಸೂಕ್ಷ್ಮ ವಿಶ್ಲೇಷಣೆ. ಬೇಂದ್ರೆಯ ಕಾವ್ಯ ಕಟ್ಟುವ ಎಲ್ಲ ಕುಸುರಿ ಕೆಲಸ ಮತ್ತು ಆಲೋಚನ ನೆಲೆಯ ಬಗ್ಗೆ ಗಮನ ಹರಿಸುವ ಈ ಲೇಖನ ಬೇಂದ್ರೆಯ ಒಟ್ಟು ಓದಿಗೆ ಪ್ರವೇಶಿಕೆಯಾಗಿ ಉಪಯುಕ್ತವಾಗಬಲ್ಲದು. ಎಸ್.ಆರ್. ಮಳಗಿ ಅವರ ಸುದೀರ್ಘ ಲೇಖನ ಒಟ್ಟಾರೆಯಾಗಿ ಬೇಂದ್ರೆಯವರ ಜೀವನ ಹಾಗು ಕಾವ್ಯ ದರ್ಶನವನ್ನು ಪರಿಚಯಿಸುತ್ತದೆ. ಕವಿ ಗಂಭೀರ ದಾರ್ಶನಿಕತೆಯ ಜೊತೆಜೊತೆಗೇ ಮಾನವೀಯ ಒಲವು, ಮುಗ್ಧತೆ, ತುಂಟತನಗಳನ್ನೂ ಉದ್ದಕ್ಕೂ ಕಾಯ್ದುಕೊಂಡು ಬಂದ ಬಗೆಯನ್ನು ಈ ಲೇಖನ ಸಮರ್ಥವಾಗಿ ಹಿಡಿದಿಡುತ್ತದೆ. ಕಡಿಮೆ ಚರ್ಚಿತವಾದ ಬೇಂದ್ರೆಯ ಗದ್ಯ ಬರಹಗಳ ಪರಿಚಯವನ್ನೂ ಮಳಗಿಯವರು ಮಾಡಿಕೊಡುತ್ತಾರೆ. ಮಳಗಿಯವರು ಪರಿಚಯಿಸುವ 'ನಾಸ್ತಿಕ' ಎಂಬ ಬೇಂದ್ರೆಯ ಕತೆ ತುಂಬ ಕುತೂಹಲ ಹುಟ್ಟಿಸುತ್ತದೆ. ಆದರೆ ದುರದೃಷ್ಟವಶಾತ್ ಬೇಂದ್ರೆಯ ಗದ್ಯ ಲೇಖನಗಳು ಸುಲಭವಾಗಿ ಸಿಗುವುದಿಲ್ಲ.

ನವೋದಯದ ಉತ್ತುಂಗದ ಕಾಲದಲ್ಲಿ ಬರೆದ ಈ ವಿಸ್ಮಯದ ಕನ್ನಡದ ಕವಿ ನಮ್ಮ ಇಂಗ್ಲಿಷ್ ದೊಡ್ಡಣ್ಣನ ಅಧಿಪತ್ಯದ ಜಾಗತಿಕ ಮಾರುಕಟ್ಟೆಯ, ಆಧುನಿಕೋತ್ತರ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಪ್ರಸ್ತುತವಾಗುತ್ತಾರೆ? ಬೇಂದ್ರೆಯಲ್ಲಿ ಹಾಸುಹೊಕ್ಕಾಗಿರುವ ಒಂದಕ್ಕೊಂದು ವಿರೋಧಿ ಎನ್ನಿಸುವ 'ರಾಡಿಕಲ್' ಮತ್ತು 'ಒಬ್ಸ್‌ಕ್ಯುರಾಂಟಿಸ್ಟ್' ಗುಣಗಳನ್ನು ಯಾವ ರೀತಿ ಅರ್ಥ ಮಾಡಿಕೊಳ್ಳುವುದು? ಅರವಿಂದರ ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡಿದ್ದ ಬೇಂದ್ರೆಗೆ ಕೊನೆಗೆ ಸಾಯಿಬಾಬಾ ಶೈಲಿಯ 'ಆಧ್ಯಾತ್ಮ' ಸಹ್ಯವಾದದ್ದು ಹೇಗೆ?



ಒಟ್ಟಾರೆಯಾಗಿ ಈ ಸಂಕಲನ ಓದುಗರನ್ನು ಮತ್ತೊಮ್ಮೆ ಬೇಂದ್ರೆಯ ಬರಹಗಳ ಓದಿಗೆ ಹಚ್ಚುವಂತಹದು. ಸಂಪಾದಕರು ಹೇಳುವಂತೆ ನಮ್ಮ ಸಾಂಸ್ಕೃತಿಕ ಸಂದರ್ಭದಲ್ಲಿ ಈ ಮರುಓದು ಅವಶ್ಯಕವೂ ಹೌದು.

ಆದರೆ ಇದೇ ಸಾಂಸ್ಕೃತಿಕ ಸಂದರ್ಭದಲ್ಲಿ ಪ್ರಸ್ತುತವಾಗುವ ಇನ್ನಷ್ಟು ಪ್ರಶ್ನೆಗಳನ್ನು ಈ ಸಂಕಲನ ಎತ್ತಬಹುದಿತ್ತು ಅಂತಲೂ ಅನ್ನಿಸುತ್ತದೆ. ಉದಾಹರಣೆಗೆ: ನವೋದಯದ ಉತ್ತುಂಗದ ಕಾಲದಲ್ಲಿ ಬರೆದ ಈ ವಿಸ್ಮಯದ ಕನ್ನಡದ ಕವಿ ನಮ್ಮ ಇಂಗ್ಲಿಷ್ ದೊಡ್ಡಣ್ಣನ ಅಧಿಪತ್ಯದ ಜಾಗತಿಕ ಮಾರುಕಟ್ಟೆಯ, ಆಧುನಿಕೋತ್ತರ ಸಂದರ್ಭದಲ್ಲಿ ಯಾವ ರೀತಿಯಲ್ಲಿ ಪ್ರಸ್ತುತವಾಗುತ್ತಾರೆ? ಬೇಂದ್ರೆಯಲ್ಲಿ ಹಾಸುಹೊಕ್ಕಾಗಿರುವ ಒಂದಕ್ಕೊಂದು ವಿರೋಧಿ ಎನ್ನಿಸುವ 'ರ್‍ಯಾಡಿಕಲ್' ಮತ್ತು 'ಒಬ್ಸ್‌ಕ್ಯುರಾಂಟಿಸ್ಟ್' ಗುಣಗಳನ್ನು ಯಾವ ರೀತಿ ಅರ್ಥ ಮಾಡಿಕೊಳ್ಳುವುದು? ಅರವಿಂದರ ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡಿದ್ದ ಬೇಂದ್ರೆಗೆ ಕೊನೆಗೆ ಸಾಯಿಬಾಬಾ ಶೈಲಿಯ 'ಆಧ್ಯಾತ್ಮ' ಸಹ್ಯವಾದದ್ದು ಹೇಗೆ? ಈ ರೀತಿಯ ಕೆಲವು ಪ್ರಶ್ನೆಗಳನ್ನು ಪೂರ್ಣ ಪ್ರಮಾಣದಲ್ಲಿ ಇಲ್ಲಿನ ಲೇಖನಗಳು ಎತ್ತುವುದಿಲ್ಲ. ಚೆನ್ನಿಯವರ ಲೇಖನ ಮತ್ತು ಶ್ರೀಧರರ ಮುನ್ನುಡಿ ಬೇಂದ್ರೆಯ ಇಂದಿನ ಪ್ರಸ್ತುತತೆಯ ಬಗ್ಗೆ ಮಾತನಾಡಿದರೂ ಇನ್ನಷ್ಟು ವಿಸ್ತಾರವಾಗಿ ಈ ರೀತಿಯ ಪ್ರಶ್ನೆಗಳನ್ನು ಅವಲೋಕಿಸುವ ಅಗತ್ಯ ಇತ್ತು ಎನ್ನಿಸುತ್ತದೆ

ಕಾವ್ಯ ಅಧ್ಯಯನದ ವಸ್ತು ಅಗಬಾರದು ಆನಂದದ [illegible] ಹೇಳುತ್ತಿದ್ದ ಬೇಂದ್ರೆ ಈ ಪ್ರಶ್ನೆಗಳನ್ನು ನಕ್ಕು ತಳ್ಳಿ ಹಾಕಿ '[illegible]' [illegible] ರೇನೊ ಅನ್ನುವುದು ಬೇರೆ ಮಾತು!

■ ಶ್ರೀ

ಇದೊಂತರ ಉಣ್ಣಕ್ಕಿಕ್ಕಿ ತಣಗೆ ಕಿತಗಂಡಂಗಾಯ್ತು

ಎಲ್ಲರೂ ಸೇರಿ ಅಪ್ಪ ಮಕ್ಕಳನ್ನು ಬಾಯಿಗೆ ಬಂದಂತೆ ಬೈಯ್ಯುತ್ತಿರುವಾಗ ವಾಟಿಸ್ಸೆ ಬಂದು ಮಾತಿಗಾರಂಭಿಸಿದ್ದ. ರಾಜಾ ವಿಸ್ಕಿಗೆ ಎಷ್ಟಾಚೆದಂತೆ ಒಂದೆರಡು ನೀರಾಕಿಕೊಂಡು, ಅನಾಮತ್ತು ಹುಯ್ಯಿಕೊಂಡು ಚಿಕ್ಕಣ್ಣನ ಹೋಟೆಲ್ ಸಮೀಪ ಬರುವಷ್ಟರಲ್ಲಿ ಚಾರ್ಜಾಗಿತ್ತು. ಬಂದವನೆ ಕಾಳಮಾವನಿಗೆ ಗುಡ್‌ಆಫ್ಟರ್‌ನೂನ್ ಹೇಳಿ ಬೈಸಿಕೊಂಡಿದ್ದೂ, ಕ್ರಮೇಣ ಆತನ ಮಾತುಗಳು ಕಾಳಮಾವನಿಗೆ ಕೇಳಬೇಕನಿಸಿತ್ತು. ಆಗ ಜುಮ್ಮಿ,

"ಲೇ ವಾಟಿಸ್ಸೆ ಇಬುಗೂಲ್ ಗ್ವಾಡೆ ಮ್ಯಾಲೆ ಏನಂತ ಬರದವುರೆ ನೋದಿದೇನ್ಲ?" ಎಂದಳು.

"ನೋದಿಲ್ಲ ಕಣಕ್ಕ ಏನಬರದವುರೆ?"

"ಅಪ್ಪ ಕಳ್ಳ, ಮಗ ಸುಳ್ಳ, ನಂಬುಕೆ ದ್ರೋಯಿಗಳು ಇಶ್ವಾಸ ದ್ರೋಯಿಗಳು ಅಂತ ಬರದಿದ್ದರಂತೆ."

ಬಯಲು ಸೀಮೆಯ ಕಟ್ಟೆ ಪುರಾಣ

ಬಿ. ಚಂದ್ರೇಗೌಡ

"ಬಿಜೆಪಿಗಳು ಬರದವೆ ಕಣಕ್ಕ."

"ಏ ನಮ್ಮವೆ ಬರದವಂತೆ."

"ನಮ್ಮೋರೆ ನಮ್ಮೋರ ಮ್ಯಾಲೆ ಬರದವುರೆ ಅಂದ್ರೆ ಇನ್ನೆಷ್ಟ್ರ ಮಟ್ಟಿಗೆ ಸಿಟ್ಟು ಬಂದಿರಬೇಕು ನೋಡು" ಎಂದ ಉಗ್ರಿ.

"ಉಣ್ಣಕ್ಕೆ ಅಂತ ತಣಗೆ ಕೊಟ್ಟು ಇನ್ನೇನು ಕೈಯಾಕ ಬೇಕು ಅನ್ನುವಾಗ ತಣಗೆನೆ ಕಿತಗಂಡ್ರೆ ಯಾರಿಗೆ ಸಿಟ್ಟು ಬರದಿಲುವುಲ" ಎಂದ ಸೀರ.

"ಸದ್ಯ ಉಣ್ಣಕ್ಕಿಕ್ಕಿ ಅದರ್ಲಿಳಿ ವಿಷ ಹಾಕಿಲವಲ್ಲ ಅದೇಳು ಚಿಗಪ್ಪ"

"ಅಂತ ಜನವೆ ಬುದಿವುರು, ಇಸಘಾತಕ ಜನ."

"ಇದೊಂತರ ಕೈಮಸಗೆ ಹಾಕೋರ ಕಲೆಯಾಯ್ತು ಕಣಮಾವ. ಕೈಮಸಗೆ ಹಾಕೋರು ಮನಿಗೆ ಬಂದೊರಿಗ್ಯಲ್ಲ ಹಾಕ್ತರಂತೆ. ಯಾರೂ ಸಿಗಲಿಲ್ಲ ಅಂದ್ರೆ ಮನೆ ಮಗನಿಗೇ ಹಾಕ್ತರಂತೆ. ಅಂಗೆ ದ್ಯಾವೇಗೌಡ ಮನೆ ಮಗನಿಗೇ ಹಾಕಿದ ಅತ್ರಗೆ" ಎಂದಳು ಜುಮ್ಮಿ.

"ಪಾಪ ಆ ಹುಡುಗ ಏನೇನೊ ವಳ್ಳೆ ಕ್ಯಲಸ ಮಾಡಿತ್ತು, ಅದರ ಬವುಸ್ಯನು ಹಾಳಾಯ್ತು" ಎಂದ ಕಾಳಮಾವ.

"ಇನಾಸಕಾಲಕೆ ಇಪರೀತ ಬುದ್ದಿ ಅಂತ, ದ್ಯಾವೇಗೌಡನಿಗೆ ಇನಾಸಕಾಲ ಹತ್ರ ಬಂದದೆ ಅದ್ಕೆ ಯಾರ ಮಾತ್ನು ಕೇಳ್ತಯಿಲ್ಲ" ಎಂದ ಸೀರ.

"ಅವುರ ಜ್ವತಿಗೆ ಈ ಬಿಜೆಪಿಗಳಿಗೂ ಏನಾಶಕಾಲ ಬಂದಂಗೆ ಕಾಣ್ತದೆ ಕಣೊ ಸೀರ ಮಾವ", ಎಂದ ಉಗ್ರಿ.

"ಅವುರಿಗೇನಾಗ್ಯದ್ಲ? ಹಲಿಯೋ ಅಂತ ಮುಕ ಳರಿಯ ಕೂಗ್ತ ಹೋಯ್ತಾ ಅವುರೆ?"

"ಅಂಗೆ ಕೊಗ್ತ ಹೋಗಿದ್ರೆ ಮಾನ ಮರಿಯಾದಿ ಯಾದ್ರು ಉಳಿಯದು. ದ್ಯಾವೇಗೌಡ ಕರದ ಅಂತ ಓಡಿಬಂದು ಏನೂ ಸಿಗಲಿಲ್ಲ ಅಂತ ತಿರಗ ಕೂಗ್ತ ಹೋಗ ದಿದಿಯಲ್ಲಾ, ಅವುರಾಗಿರೊ ಅವುಮಾನ ಆಟೀಟಲ್ಲ" ಎಂದ ಉಗ್ರಿ.

"ಈಗ ಕರುದ್ರು ಬತ್ತವೆ ಕಣೊ ಅವ್ರೂ" ಎಂದ ವಾಟಿಸ್ಸೆ.

"ಅಂಗಂತಿಯಾ?"

"ದ್ಯಪನೆಟ್ಟ. ಈಗ ದ್ಯಾವೇಗೌಡ ಆದದ್ಯಲ್ಲ ಆಯ್ತು. ಇನ್ನು ಯಲ್ಲಾರು ಮರತು ಬುದನ ಬನ್ನಿ ಅಂತ ಕರಿಲಿ. ಕೈಲಿ ರೊಟ್ಟಿ ಇರೋರತ್ತಕೆ ನಾಯಿ ಬಂದು ನಿಂತಂಗೆ ನಿಂತಗಳ್ಳಿಲ್ಲ ಅಂದ್ರೆ ಥೂ ಕೂರೊ ಅಂದುಬುಡು ನನ್ನ" ಎಂದು ವಾಟಿಸ್ಸೆ ನಗಾಡಿದ.

"ಏ, ಇನ್ನ ಬರಕುಲ್ಲ ಬುಡುವುರು."

"ಬೆಟ್ ಕಟ್ಟುತಿಯಾ? ಅವುರೇನು ಅಂತ ದ್ಯಾವೇ



ಗೌಡನಿಗೆ ಗೊತ್ತದೆ ಕಣೊ ಉಗ್ರಿ, ಅದ್ಕೆ ಆಟ ಆಡಿಸಿ ಕೈ ಬುಟ್ಟ ಅತ್ತಗೆ."

"ಅಂಗರೆ ದ್ಯಾವೇಗೌಡ ಮಾಡಿದ್ದು ಸರಿಯೇನ್ಲ?" ಎಂದ ಕಾಳಮಾವ.

"ನಾನು ಬಂದೇಟಗೆ ಹೇಳಿದನಲ್ಲ ದ್ವಡಪ್ಪ ದ್ಯಾವೇಗೌಡ ಮಾಡಿರದು ಸರಿ ಅಂತ. ಜನಕ್ಕೆ ಇವತ್ತು ಗೊತ್ತಾಗದಿಲ್ಲ ಮುಂದೆ ನಿಧಾನಕ್ಕೆ ಗೊತ್ತಾಯ್ತದೆ" ಎಂದ ವಾಟಿಸ್ಸೆ.

"ಏನು ಗೊತ್ತಾದತ್ಲ?"

"ನೋದಕ್ಕ, ಈ ಯಲ್ಲಾರು ಪಾರ್ಟಿ ಯಂಗೆ ಕಟ್ಟತರೆ ಹೇಳು? ಅದ ಮಾದ್ತಿವಿ, ಇದ ಮಾದ್ತಿವಿ, ನೀರು ದೀಪ ರಸ್ತೆ ಹಿಂಗೆ ಏನೇನೊ ಹೇಳಿಕಂಡು ಪಾರ್ಟಿ ಕಟ್ಟವುರೆ. ಆದ್ರೆ ಈ ಬಿಜೆಪಿಗಳು ಯಂಗೆ ಪಾರ್ಟಿ ಕಟ್ಟವುರೆ ಗೊತ್ತೆ?"

"ನನಿಗೇನು ಗೊತ್ಲ?"

"ರಾಮಮಂದಿರ ಕಟ್ಟುತಿವಿ, ಇಟಗಿಗೆ ದುಡ್ಡುಕೊಡಿ ಅಂತ ಬಂದ್ರು. ಯಕ್ಕಡ ಮ್ಯರವಣಗೆ ಮಾಡಿದ್ರು. ರಾಮಜ್ಯೋತಿ ಅಂತ ತಂದ್ರು. ಆ ಟೇಮಲ್ಲಿ ಜನನ್ಯಲ್ಲ ಎತ್ತಿಕಟ್ಟಿ ಸಾಬರ ವ್ಯಾಲೆ ಚೂಲುಬುಟ್ರು. ಗಲಾಟ ಆಯ್ತು, ಈಗ ಹಾಲಿ ವಿಧಾನಸಭೆಲಿರೊ ಬಿಜೆಪಿ ಎಮ್ಮೆಲ್ಲೆಗಳ ಯಲ್ಲಾ ಕ್ಷೇತ್ರದಲ್ಲೂ ಕಮ್ಯುನಲ್ ಕ್ಯಾಸಾಗ್ಯದೆ ಕಣಕ್ಕ."

"ನಿಜವೇನ್ಲ?"

"ಮುಕ್ಕಾಲು ಭಾಗ ನಿಜ ಕಣಕ್ಕ. ಗೆದ್ದು ಬಂದಮ್ಯಾಲೆ ಏನು ಮಾಡಿದರಕ್ಕ? ಜನಗಳ ತರ ಏನಾರ ಹೋರಾಡಿದ್ದರೆ? ವಿಕಾಸ ಯಾತ್ರೆ ಮಾಡಿದ್ರು. ಈಗಾಗ್ಲೆ ರಾಮನ ಸೇತುವೆ ಸುದ್ದಿ ತಗಂಡು ಕುಂತವುರೆ. ಇಂತ ಜನಗಳಿಗೆ ಅಧಿಕಾರ ಕೊಟ್ರೆ ಏನಾಯ್ತದೆ ಅಂತ ದ್ಯಾವೇಗೌಡ್ರಿಗೆ ಗೊತ್ತಿತ್ತು, ಅದ್ಕೆ ಕೈಕೊಟ್ರು."

"ಪಾಪ ಎಡೂರಪ್ಪನಿಗೆ ಕೊಡಬವುದಿತ್ತು ಕಂಡ್ಲ ಅವುನು. ಇವುರೇಳಿದಂಗೆ ಕೇಳತಿದ್ದ" ಎಂದ ಸೀರ.

"ಚಿಗಪ್ಪ ಇದು ಎಡೂರಪ್ಪನ ಮ್ಯಾಟ್ರಲ್ಲ. ಬಿಜೆಪಿಗಳು ಎಲ್ಲಾರ ಕಾಲೂರಿದ್ರು ಅಂದ್ರ ಅವುರ ಕಾಲ್ತಗಸದು ಎಷ್ಟು ಕಷ್ಟ ಅನ್ನದು ದ್ಯಾವೇಗೌಡನಿಗೇ ಗೊತ್ತು. ಅದ್ಕೆ ಕಾಲೂರಕ್ಕೆ ಬುಡ್ತಿಲ್ಲ ಅವುನು."

"ಮುಂದಿನ ಚುನಾವಣೆಲಿ ಬಿಜೆಪಿಗಳು ಗೆದ್ದು ಬತ್ತರಲ್ಲ ಆಗೇನೀಸಗಂಡೀ?"

ಆಮ್ ಆದ್ಮಿಗಳಿಗೆ ಅರ್ಥವಾಗುವುದಿಲ್ಲ!

'ಅಧಿಕಾರದಿಂದ ಇಳಿದಿರುವ ಬಗ್ಗೆ ನನಗೇನೂ ಬೇಸರವಿಲ್ಲ. ಒಂದು ರೀತಿ ದೊಡ್ಡ ಭಾರ ಇಳಿದಂತಾಗಿದೆ'.

ಯಾರು ಇದನ್ನು ಹೇಳಿದ್ದು?

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ

ಅವರು ಇದನ್ನು ಹೇಳಿದ್ದು ಎಲ್ಲಿ?

ಬುರುಡೇಘಟ್ಟದಲ್ಲಿ!

ಹಾಗಂತ ಇದು ಬುರುಡೆ ಎಂದು ಭಾವಿಸಬೇಕಿಲ್ಲ!

ಹೇಗಾದರೂ ಆಗಲಿ. ಇಳಿಯಿತಲ್ಲ ಹೊರೆ, ನಿರಾಳವಾಯಿತಲ್ಲ ಮನಸ್ಸು. ಅಷ್ಟು ಸಾಕು.

ಅಲ್ಲ ಹೊರೆ ಇಳಿಸಿದವರು ಕೃತಜ್ಞತೆಗೆ ಪಾತ್ರರಾಗಬೇಕಲ್ಲ?

ಇಲ್ಲವಂತೆ, ಅವರು ವಚನಭ್ರಷ್ಟರಂತೆ!

ಇದೇನು ವಿಚಿತ್ರ ಅನ್ನುವಿರಾ?

ಆಮ್ ಆದ್ಮಿಗಳಿಗೆ ಇದು ಅರ್ಥವಾಗುವುದಿಲ್ಲ.

ಇಪ್ಪತ್ತು ತಿಂಗಳು ಕಾಂಗ್ರೆಸ್-ಜಾತ್ಯತೀತ ಜನತಾದಳ ಸಂಸಾರ ಹೂಡಿತ್ತು. ಆಗ ಪಾಪ ದಳದ ಶಾಸಕರಿಗೆ ಪ್ರತಿನಿತ್ಯ ಕಿರುಕುಳ. ಬಂಡೆದ್ದ ಶಾಸಕರು ಹೊರಬಂದು ಭಾಜಪ ಜೊತೆ ಸಂಸಾರ ಹೂಡಿದರು. ತಮ್ಮದೇ ಪಾರುಪತ್ಯ ಆದರೂ ಅಲ್ಲೂ ಅವರಿಗೆ ಕಿರುಕುಳ!

ಇದನ್ನು ಹೇಳಿದವರು ಯಾರು?

ಸಾಕ್ಷಾತ್ ದೇವೇಗೌಡರು!

'ಈ ಇಪ್ಪತ್ತು ತಿಂಗಳ ಅವಧಿಯಲ್ಲಿ ನನ್ನ ನಿಜವಾದ ಮಗ ಕುಮಾರಸ್ವಾಮಿ ಅನುಭವಿಸಿದ ನೋವು ನನಗೆ ಗೊತ್ತು' ಎಂದು ಪರಿತಪಿಸಿದ್ದಾರೆ ಗೌಡರು!

ಅದರಿಂದ ಹೊರಬಂದು ಆಯಿತಲ್ಲ, ಇನ್ನಾದರೂ ನೆಮ್ಮದಿಯಾಗಿ ಇರಬಹುದಲ್ಲ ಅಂದರೆ... ಇನ್ನೂ ಅಲ್ಲೇ ಸರಸುವ ಬಯಕೆ!

ಯಾರಿಗಾಗಿ ಅನುಭವಿಸುತ್ತಿದ್ದಾರೆ ಈ ನೋವು ಸಂಕಟವನ್ನು?

ಜನರಿಗಾಗಿ! ಪ್ರಜಾಪ್ರಭುತ್ವದ ಉಳಿವಿಗಾಗಿ!!

ಆಮ್ ಆದ್ಮಿಗಳಿಗೆ ಇದು ಅರ್ಥ ಆಗುವುದಿಲ್ಲ!

* * * * * *

ಅಣಕ

ಎಚ್.ಎಲ್. ಕೇಶವಮೂರ್ತಿ

ಇದಕ್ಕೆ ಪುರಾವೆ ಬೇಕೆ?

ಶಿಕಾರಿಪುರದ ಹೆಲಿಪ್ಯಾಡಿನಲ್ಲಿ ನಡೆದಿದೆ ಮಾಟಮಂತ್ರ!

ಯಾಕಾಗಿ ಇದು?

ಯಡಿಯೂರಪ್ಪ ಸಾವಿಗಾಗಿ!

ಅವರ ಬನಿಯನ್ ಮತ್ತು ಚೆಡ್ಡಿ ಸುಡಲಾಗಿದೆಯಂತೆ.

ಅದನ್ನ ಗುರುತು ಹಿಡಿದವರು ಯಾರು? ಹೆಂಗಸರೋ? ಗಂಡಸರೋ? ಅಲ್ಲಿಯವರಿಗೆಲ್ಲ ಇವರ ಚೆಡ್ಡಿ ಬನಿಯನ್ ಗುರುತು ಇದೆಯ? ಇಲ್ಲಿ ಅಪ್ರಸ್ತುತ. ಅಂತೂ ಅವನ್ನು ಸುಡಲಾಗಿದೆ.

ಇಷ್ಟಕ್ಕೆ ಮಾಟಮಂತ್ರ ಅಂದರಾದೀತೆ?

ಕೋಳಿ ಕೊಯ್ದಿದ್ದಾರೆ! ನಿಂಬೆಹಣ್ಣು ಕೊಯ್ದಿದ್ದಾರೆ! ಬಳಸಿದ ಕತ್ತಿಯೂ ದೊರಕಿದೆ!

ಇದರ ತನಿಖೆಗೆ ಬಂದಿದೆ ಪೊಲೀಸ್ ತಂಡ!

ಮಾಟಮಂತ್ರ ಮಾಡಿದ್ದಾರೆ ಅಂದತಕ್ಷಣ ನಡೆಯಬೇಕೆ ತನಿಖೆ? ಪೊಲೀಸಿನವರಿಗೆ ಇಲ್ಲವೆ ಬೇರೆ ಕೆಲಸ?

ತಲೆಹರಟೆ ಬೇಡ. ಮುಖ್ಯಮಂತ್ರಿಯಾಗಲಿ ಯಡ್ಡಿ, ತೆರೆಯುವವರು 'ಮಾಟ ಮಂತ್ರ ತನಿಖಾ ವಿಭಾಗ!'

ಪುರಾವೆ ದೊರೆತ ಮೇಲೂ ಸುಮ್ಮನಿರಲಾದೀತೆ. ಪ್ರಾಣಭಯ ಯಾರಿಗೆ ಇರುವುದಿಲ್ಲ? ಯಡಿಯೂರಪ್ಪ ಗುದಾಣೆ ಹಿಡಿದರು 'ಮಾಟ ಮಂತ್ರ ಮಾಡಿ ನನ್ನನ್ನು

ಯಡಿಯೂರಪ್ಪ ಸಾತ್ ದಿನ್ ಕ ಸುಲ್ತಾನ್ ಆಗೇ ಉಳಿದದ್ದು ಯಾಕೆ?

ಕಂಡಕಂಡ ದೇವರುಗಳಿಗೆಲ್ಲ ಕೈ ಮುಗಿದರು.

ಮಠಾಧೀಶರ, ಭೈರಾಗಿಗಳೆಲ್ಲರ ಕಾಲು ಹಿಡಿದರು.


ಜ್ಯೋತಿಷಿಗಳನ್ನ ಕೇಳೇ ಮೂಹೂರ್ತ ನಿಷ್ಕರ್ಷಿಸಿದ್ದರು.

ಲೋಪ ಇಲ್ಲದಂತೆ ಹೋಮಹವನ ನಡೆಸಿದ್ದರು.

ಆದರೂ... ಸಾತ್ ದಿನ್ ಮೆ ಅಂದರ್ ಗಿರ್‌ಗಯಾ...

ಯಾಕೆ ಹೀಗಾಯಿತು?

ಇಂತಹ ಕಸರತ್ತುಗಳೆಲ್ಲ ವ್ಯರ್ಥ ಅನ್ನುತ್ತದೆ ವಿಜ್ಞಾನ.



ಆದರೆ ಅವರಿಗೆ ವಿಜ್ಞಾನದಲ್ಲಿ ನಂಬಿಕೆ ಇಲ್ಲ. ಕಾಲದಿಂದಲೂ ಬಂದ ಆಚರಣೆಯೇ ಸತ್ಯಸ್ಯ ಸತ್ಯ!

ಅಂತಹ ಮನಸ್ಸುಗಳು ಓಡಿದವು ಹಿಂದಕ್ಕೆ.

ಪ್ರಮಾಣವಚನ ಸ್ವೀಕಾರಕ್ಕೆ ಮುನ್ನ ಏನು ಮಾಡಿದ್ದರು ಯಡಿಯೂರಪ್ಪ?

ಕಳ್ಳನಂತೆ ಬೆಳ್ಳಂಬೆಳಗ್ಗೆನೆ ಬುರುಡೆಘಟಕ್ಕೆ ಹೋಗಿದ್ದರು.

ಏನು ನಡೆಯಿತು ಅಲ್ಲಿ?

ಗೊತ್ತಿಲ್ಲ. ಕಾರಿಗೆ ಬಂದು ಕುಳಿತಾಗ ಯಡಿಯೂರಪ್ಪನವರ ಬಾಯಿ ಬಾಯಿಯೇ ಆಗಿರಲಿಲ್ಲ! ಕೆನ್ನೆಗಳು ಊದಿಕೊಂಡಿದ್ದವು. ಊಟ ಬೇಡ ಅಂತ ಕೊಸರಿಕೊಂಡು ಮಲಗಿದ ಅಳಿಯ ಅರ್ಧ ರಾತ್ರೀಲೀ ಎದ್ದು ಅಕ್ಕಿ ಮುಕ್ಕಿದ್ದನ್ನು ನೆನಪಿಗೆ ತರುವಂತಿತ್ತು ಆ ದೃಶ್ಯ.

ಮಾತಿಲ್ಲ, ಕತೆಯಿಲ್ಲ. ಗಲ್ಲ ಊದಿಸಿಕೊಂಡೇ ಕುಂತಿದ್ದರು ಅಪ್ಪನವರು.

ವಿಧಾನಸೌಧದ ಬಳಿ ಕಾರು ನಿಂತದ್ದೇ ತಡ. ಮೂರನೆ ಮಹಡಿಗೆ ದಡಗುಟ್ಟುತ್ತಾ ನಡೆದರು. ತಮ್ಮ ಬಾಯಿಯಲ್ಲಿ ತುಂಬಿದ್ದ ಪದಾರ್ಥವನ್ನು ಮುಖ್ಯಮಂತ್ರಿ ಕುರ್ಚಿಯ ಮೇಲೆ ಉಗಿದರು!

ಏನಿತ್ತು ಅವರ ಬಾಯಲ್ಲಿ?

ಸ್ವಾಮಿಗಳು ಪೂಜಿಸಿ ಕೊಟ್ಟಿದ್ದ ಮಂತ್ರಾಕ್ಷತೆ!

ಸ್ವಾಮಿಗಳೇನೋ ಅಕ್ಕಿ ಕಾಳು ಮಂತ್ರಿಸಿಕೊಟ್ಟರು. ಸರಿ ಹೋಯಿತು. ಒಂದು ವೇಳೆ ತಿನ್ನಬಾರದ್ದನ್ನ ಮಂತ್ರಿಸಿ ಕೊಟ್ಟಿದ್ದರೆ... ಅದನ್ನೂ ಬಾಯೊಳಗೆ ಇಟ್ಟುಕೊಂಡು ಬರುತ್ತಿದ್ದರೋ ಏನೋ... ಇರಲಿ.

ಅಧಿಕಾರದ ಸಂಕೇತ ಆಪೀಠ. ಅದನ್ನೇ ತಮ್ಮ ಬಾಯಿಯ ಎಂಜಲಿನಿಂದ ಅಪವಿತ್ರಗೊಳಿಸಿದರೆ... ಚಾಂಡಾಲ ದೇವರಿಗೆ ಚಪ್ಪಲಿ ಸೇವೆ ನೆರವೇರಿಸಿದರೆ....

ಬುರುಡೆಘಟ್ಟದ ಸ್ವಾಮಿ ಈ ಮನುಷ್ಯ ಅಧಿಕಾರದಲ್ಲಿ ಉಳಿಯಬಾರದು ಅಂತ ಏನಾದರೂ ಹೀಗೆ ಮಾಡಿಸಿದನೋ... ಇರಲಾರದು. ಯಾಕೆ ಅಂದರೆ ಯಡಿಯೂರಪ್ಪನವರು ಅಧಿಕಾರದಿಂದ ಇಳಿದ ನಂತರವೂ ಅಲ್ಲಿಗೆ ಭೇಟಿ ನೀಡಿ ಧಾರ್ಮಿಕ ಸಭೆಯಲ್ಲಿ ರಾಜಕೀಯ ಭಾಷಣ ಮಾಡಿ ಬಂದರಲ್ಲಾ...

ಇದಲ್ಲ ಅಂದರೆ ಬೇರೆ ಕಾರಣ ಇರಬೇಕು. ಅದು ಯಾವುದು?

ವಾಮಾಚಾರ!

ಯಡಿಯೂರಪ್ಪನವರೇ ಮಾಡಿಸಿದರಾ ಹೇಗೆ?

ನಿಮ್ಮ ತಲೆ. ಅವರ ವಿರುದ್ಧ ಅವರೇ ಮಾಡಿಸಿಕೊಳ್ತಾರೇನ್ರಿ? ಮಾಟಮಂತ್ರ ಮಾಡಿಸಿರುವವರು ಅವರ ಈಗಿನ ಆಜನ್ಮ ವೈರಿಗಳು! ದೇವೇಗೌಡ ಕುಟುಂಬ!

ಇದು ಹೇಗೆ ತಿಳಿಯಿತಪ್ಪಾ ಎಂದರೆ... ಮೊದಲಿನಿಂದಲೂ ಯಡಿಯೂರಪ್ಪನವರಿಗೆ ಈ ಕುಟುಂಬದ ಬಗ್ಗೆ ಸಂಶಯ ಇತ್ತು. ಹೀಗೇನಾದರೂ ಮಾಡಬಹುದು ಎಂದು ಎರಡು ತಿಂಗಳ ಹಿಂದೆಯೇ ಅವರ ಚಲನವಲನ ಕುರಿತು ವರದಿ ಮಾಡಲು ಬೇಹುಗಾರರನ್ನು ಬಿಟ್ಟಿದ್ದರು. ಅವರು ಯಾವಯಾವ ದೇವಸ್ಥಾನಗಳಿಗೆ ಭೇಟಿ ಕೊಡುತ್ತಾರೆ; ಯಾವ ಯಾವ ರೀತಿಯ ಪೂಜೆ ಪುರಸ್ಕಾರ ಕೈಗೊಳ್ಳುತ್ತಾರೆ; ಯಾವ ಪುರೋಹಿತ, ಮಂತ್ರವಾದಿ ಏನು ಮಾಡಿದ ಎಂಬುದನ್ನೆಲ್ಲ ಅವರು ಪತ್ತೆಹಚ್ಚಿದ್ದರು. ತಮ್ಮ ಪೀಠಾಪಹರಣಕ್ಕೆ ಮಾತ್ರ ಅಲ್ಲದೆ, ಪ್ರಾಣಾಪಹರಣಕ್ಕೂ ಮಾಟಮಂತ್ರ ಮಾಡಿಸಿರುವುದನ್ನು ತಿಳಿದುಕೊಂಡಿದ್ದರು.

"ಮುಂದಿನ ಚುನಾವಣೆ ಅಷ್ಟು ಸುಲಬದಲಿಲ್ಲ, ಮುಂದೆಬರೋ ಚುನಾವಣೇಲಿ ಏನು ಮಾಡಬೇಕು ಅಂತ ದ್ಯಾವೇಗೌಡನಿಗೆ ಗೊತ್ತದೆ. ಅವುನ ಕ್ಯಲಸ ಅವುನಿಗೆ ವಹಿಸಾಯಿಸಿಗಂಡ್ರೂ ಕೇರುಮಾಡದಂಗೆ ಜನಕೆ ತೀರ್ಪಿತ್ತಿದ್ದೆ ಒಪ್ಪಿಗೊಳ್ಳಿ ಅಂದು ಸುಮ್ಮನಾಯ್ತನೆ ಗೊತ್ತೆ?"

"ಅಲ್ಲಿಗೆ ಏನು ಮಾಡಿ ಏನು ಬಂದಂಗಾಯ್ತು?"

"ವಿಧಾನಸೌಧದಲ್ಲಿ ಯಜ್ಞಯಾಗ ನ್ವಡಿದಂಗೆ ಮಾಡಿದ. ಇವನು ಕಡಿಮೆ ಕ್ಯಲಸಲ್ಲ ದ್ವದಪ್ಪ, ಪ್ರಜಾಪ್ರಭುತ್ವದಲ್ಲಿ ಯೆಲ್ಲಾ ಜನಾಂಗದ ಶಾಸಕರೂ ತಮ್ಮ ದನಿ ಎತ್ತೊ ಜಾಗದಲ್ಲಿ ಅಗ್ನಾರದಲ್ಲಿರುವ ಬಹುದಾದ ಯಜ್ಞಕುಂಡ ತಂದು ವಿಧಾನಸಭೆ ಕೊಟಡಿಲಿ ಮಾಡದನ್ನು ದ್ಯಾವೇಗೌಡ ತಪ್ಪಿಸಿದನಲ್ಲಾ, ರಿಯಲಿ ದ್ಯಾವೇಗೌಡ ಈಸ್ ಗ್ರೇಟ್. ಇಂತ ಕ್ಯಲಸಕ್ಕಾಗಿ ಅವುನು ಮೆಟ್ಟನಲ್ಲಿ ವದಿಸಿಗಂಡು ಕಾಳಿಂಗ ಕರಿನಾಗ ಅಂತ ಬಯಿಸಿಗಂಡ್ರೂ ಪರವಾಗಿಲ್ಲ" ಎಂದ ವಾಟಿಸ್ಸೆ.

"ಮೆಟ್ನಲ್ಲಿ ವದದು ಕರಿನಾಗ್ರ ಅಂದೊರ್‍ಯಾರ್ಲ?"

"ಬಜೆಪಿಗಳು ಕಣಕ್ಕ."

"ಮತ್ತೆ ವಳ್ಳೆ ಜನ, ನಮ್ಮ ಬಾಯಿಲಿ ವಳ್ಳೆ ಮಾತು ಬತ್ತವೆ ಅಂತರೆ."

"ಉಂಡು ಕುಂತಾಗ ವಳ್ಳೆ ಮತಾಡ್ತರೆ ಕಣಕ್ಕ, ಉಣ್ಣಕ್ಕೆ ಸಿಗಲಿಲ್ಲ ಅಂದ್ರೆ ಅವುರು ಕುಮಾರಸ್ವಾಮಿ ದ್ಯಾವೇಗೌಡನಿಗಿಂತ ಕೆಟ್ಟದಾಗಿ ಮಾತಾಡ್ತರೆ. ಇಷ್ಟರ ನಡುವೆ ನನಗೆ ಇನ್ನೊಂದು ದವುಟದೆ ಕಣಕ್ಕ."

"ಏನು ದವುಟ್ಟ?"

"ಆ ತುರುವೆ ಕೆರತ ಇರೊ ಸ್ವಾಮಿ ಎಡೂರಪ್ಪನ ಕರದು ಬಾಯಿಗೆ ಅಕ್ಕಿ ಕಾಳಾಕಿ ಇದ ತಗಂಡೋಗಿ ಮುಖ್ಯಮಂತ್ರಿ ಕುರ್ಚಿಮ್ಯಾಲೆ ಉಗಿ ಅಂದನಂತೆ. ಎಡೂರಪ್ಪ ಅಂಗೆ ಮಾಡಿದನಂತೆ. ಸಾಮಾನ್ಯವಾಗಿ ಬಾಯಿಗೆ ಅಕ್ಕಿಕಾಳಾಕದು ಯಾರಿಗೇಳು?"

"ಸತ್ತೋರಿಗೆ."

"ಆ ಸ್ವಾಮಿ ಎಡೂರಪ್ಪಿದ್ದಂಗೆ ಸಾಯಿಸಿದನಲ್ಲಾ ಹೇಳು. ಅವುನಿಗೂ ದ್ಯಾವೇಗೌಡನಿಗೂ ಏನಾರ ಕನಕ್ಷನ್ ಇದ್ದತೊ ಯಂಗೆ ಅಂತ ಇನ್‌ವೆಸ್ಟಿಗೇಟ್ ಮಾಡಬೇಕು ಕಣಕ್ಕ."

" !?" ■

ಕೊಲ್ಲಲು ದೇವೇಗೌಡ ಕುಟುಂಬ ಬಯಸಿದೆ. ನಾನು ವಿಲ್ ಬರೆದಿಡುತ್ತೇನೆ. ನನಗೆ ಪ್ರಾಣಾಪಾಯ ಆದರೆ ಅವರಿಂದಲೇ ಅಂತ. ಪೊಲೀಸಿನವರಿಗೆ ದೂರನ್ನು ನೀಡುತ್ತೇನೆ.'

ವಿಲ್ ಬರೆದರೋ ಇಲ್ಲವೋ. ಪೊಲೀಸಿನವರ ಬಳಿ ದೂರು ದಾಖಲಿಸಿದರೋ ಇಲ್ಲವೋ ಒಂದೂ ತಿಳಿದುಬಂದಿಲ್ಲ. ದೇವೇಗೌಡರ ಮನೆಯಲ್ಲಿ ಬಾಂಬ್ ಸಿಡಿಸಿದ್ದಂತೂ ಸತ್ಯ. ಈಗ ಅವರ ಕುಟುಂಬದ ಫಜೀತಿ ನೋಡಿ. ಒಂದು ಕಡೆ ಯಡ್ಡಿ ಅಧಿಕಾರಕ್ಕೆ ಬರದಂತೆ ನೋಡಿಕೊಳ್ಳಬೇಕು. ಇನ್ನೊಂದು ಕಡೆ, ಬಹಳ ಪ್ರಮುಖವಾದ ಅಂಶ ಅಂದರೆ ಅವರು ಸಾಯದ ಹಾಗೆ ಕಾವಲು ಕಾಯಬೇಕು! ಒಂದು ವೇಳೆ ಅಧಿಕಾರ ಸಿಗಲೇ ಇಲ್ಲವಲ್ಲ ಅನ್ನೋ ನಿರಾಶೆಯಲ್ಲೋ ಇನ್ಯಾವುದೋ ಕಾರಣಕ್ಕೋ, ಅವರು ಗೊಟಕ್ ಅಂದರೂ ದೇವೇಗೌಡ ಕುಟುಂಬವೇ ಹೊಣೆ! ಇಂತಹ ಸಾಯಿಪಾಡು ಯಾರಿಗೂ ಬರಬಾರದು ಬಿಡಿ!

ಮಾಟಮಂತ್ರ ಕೆಲಸ ಮಾಡಲಿಲ್ಲ, ಆಗೇನು ಮಾಡುವರು ಯಡ್ಡಿ?

ದೂರದ ಬಸ್‌ಪ್ರಯಾಣ ಮಾಡುವಾಗ ಏನು ಮಾಡುತ್ತಾರೆ ಹೇಳಿ. ಅಲ್ಲಲ್ಲಿ ಬಸ್ ನಿಲ್ಲಿಸುತ್ತಾರೆ. ಊಟ ತಿಂಡಿ ತೀರ್ಥ ವಗೈರೆಗೆ ಅಂತ. ಹಂಗೇನೆ ಯಡಿಯೂರಪ್ಪನವರು 'ಧರ್ಮ ಯಾತ್ರೆ' ಕೈಗೊಂಡಿದ್ದರಲ್ಲ, ದೂರದ ಮುಖ್ಯಮಂತ್ರಿ ಪೀಠ ಕೈಗೆಟುಕೇ ಬಿಟ್ಟಿತು ಅಂತ ಆಗಾಗ ಯಾತ್ರೇನ ಮೊಟಕುಗೊಳಿಸಿ ಹಾರಿ ಬಂದು ಆಸೆ ಕಂಗಳಿಂದ ಕುರ್ಚಿ ಕಡೇನೇ ನೋಡ್ತಾ ಇರ್ತಿದ್ದರಲ್ಲ... ಅದು ದಕ್ಕೊಲ್ಲ ಅಂತ ತಿಳಿದ ಮೇಲೆ 'ಧರ್ಮಯಾತ್ರೆ' ಮುಂದುವರೆಸುತ್ತಾರೆ! ಆಮೇಲೆ ಇದ್ದೇ ಇದೆ ಭಾಜಪಾ ಬಜಂತ್ರಿ. ಮೊದಲ (ಕೊನೆಯ!) ಸಂಪುಟ ಸಭೆಯಲ್ಲಿ ಹಳದಿ ಕಾರ್ಡು, ಸೈಕಲ್ ವಿತರಿಸಲು ತೀರ್ಮಾನ ಕೈಗೊಂಡದ್ದು, ಬಡವರ ಮೇಲಿನ ಕಾಳಜಿಯಿಂದ ತೆಗೆದುಕೊಂಡ ಈ ತೀರ್ಮಾನ ಏಕಪಕ್ಷೀಯ ಆಗಲಿಕ್ಕೆ ನಾನೇನು ಮನೆಗೆ ಆಸ್ತಿ ಕೊಂಡು ಹೋದೇನ..... ಇತ್ಯಾದಿ ಇತ್ಯಾದಿ. ಅದು ಯಾಕೋ ಏನೋ ಪಾಪ ಜಾಣದ ಮರೆವು. ಸ್ವಜಾತಿಬಾಂಧವರನ್ನು ಹತ್ತಿರಕ್ಕೆ ಸೇರಿಸಿಕೊಂಡದ್ದು ದಕ್ಷ ಅಧಿಕಾರಿಗಳನ್ನ ಭಾಜಪ ಭೂಕಳ್ಳರ ಒತ್ತಾಯದ ಮೇಲೆ ವರ್ಗಾಯಿಸಿದ್ದು ಜ್ಞಾಪಕಕ್ಕೇ ಬರಲ್ಲ!

ಬೇಕಾದ್ದು ಮಾತ್ರ ನೆನಪಿಗೆ ಬರುವಂತೆ, ಬೇಡವಾದದ್ದೆಲ್ಲ ಮರೆತುಹೋಗುವಂತೆ ಈ ರಾಜಕಾರಣಿಗಳು ಏನಾದರೂ ಮಾಡಿಕೊಂಡಿದ್ದಾರಾ.... ■



ಮರೆಯುವ ಮುನ್ನ



ಪಿ. ಲಂಕೇಶ್ ಜುಲೈ 2, 1989

"ಮುಮ್ಮಡಿ" ಚಾರ್ಲ್ಸ್

ಪ್ಯಾಮೇಲಾ ಸುದ್ದಿಯಲ್ಲಿಲ್ಲ, "ನಾನು ಬಾಯಿಬಿಟ್ಟರೆ ಥ್ಯಾಚರ್ ಸರ್ಕಾರ ಮುಣ್ಣು ಮುಕ್ಕುತ್ತದೆ" ಎಂದು ಹೇಳಿದವಳು; ಹೀಗೆ ಹೇಳುವ ಮೂಲಕ ಥ್ಯಾಚರ್ ಸರ್ಕಾರದ ಅನೇಕ ಮಂತ್ರಿಗಳು ತನ್ನ ಅಂಗೈ ಅರಗಿಣಿಗಳು ಎಂದು ಸೂಚಿಸಿ ಬೆಚ್ಚಿಸಿದವಳು. ಪ್ಯಾಮೇಲಾಳನ್ನು ಬೈದವರೇ ಹೆಚ್ಚು; ಭಾರತದ ಹುಡುಗಿಯೊಬ್ಬಳು ಇಂಗ್ಲೆಂಡಿನಲ್ಲಿ ಬರಸಿಡಿಲಿನಂತೆ ಎರಗುವುದೆಂದರೇನು? ಅಲ್ಲದೆ ಸಿನಿಮಾ ರೂಪದಲ್ಲಿ ಅವತರಿಸಿರುವ ಕ್ರಿಸ್ಟೀನ್ ಕೀಲರ್ ಎಂಬ ಬಿಳೀ ವೇಶ್ಯೆಯ ಎದುರು ಈ ಕಂದು ಬಣ್ಣದ ಹುಡುಗಿ ಎಲ್ಲಿ?

ಅದಕ್ಕೆ ತಕ್ಕಂತೆ ಪ್ಯಾಮೇಲಾ ಹೆದರಿಕೊಂಡು ದೂರದೂರಿಗೆ ಓಡಿಹೋಗಿ ಅಲ್ಲಿ ಮೋಟಾರ್ ಸೈಕಲ್‌ನಿಂದ ಬಿದ್ದು ಹಲ್ಲು ಮುರಿದುಕೊಂಡು ಹಿಂದಿರುಗಿ ತಣ್ಣಗಾದಳು.



ಆದರೆ ಹೆಣ್ಣಿನಾಳದ ಪ್ರತಿಭಟನೆ, ಬಂಧನವನ್ನು ತಿರಸ್ಕರಿಸುವ ಪರಿ, ಈ ಸ್ವಾತಂತ್ರ್ಯಾಂದೋಲನ ಪಡೆದುಕೊಳ್ಳುವ ರೂಪಗಳು ಗೊತ್ತಿಲ್ಲದವರು ಮಾತ್ರ "ಹುಡುಗಿ ಹಾಳಾಗಿಹೋದಳು", "ಆಕೆಯ ಉಜ್ವಲ ಪರಂಪರೆಯ ಶಾಲೆಗೆ ಎಂಥ ಕಳಂಕ" ಇತ್ಯಾದಿಯಾಗಿ ಮಾತಾಡುತ್ತಾರೆ.


ಇಂಥ ಬಂಡೆದ್ದ ಹುಡುಗಿಯ ಕತೆಯೊಂದನ್ನು ಈಚೆಗೆ ಓದಿದೆ. ಈಕೆಯ ಹೆಸರು ಗ್ವಾನ್. ಹದಿನೇಳನೇ ಶತಮಾನದ ಫ್ರೆಂಚ್ ಹುಡುಗಿ. ಇಂಗ್ಲೆಂಡಿನ ದೊರೆ ಇಮ್ಮಡಿ ಚಾರ್ಲ್ಸ್ ಪಟ್ಟಾಭಿಷಿಕ್ತನಾದೊಡನೆ ಮುಕ್ತ ಆಸ್ಥಾನವನ್ನು ರೂಪಿಸಿದ; 'ರೆಸ್ಟೋರೇಶನ್' ಎಂದು ಕರೆಯಲ್ಪಡುವ ಈ ಮುಕ್ತ ಕಾಲದಲ್ಲಿ ಪ್ರೇಮ, ಮದ್ಯಪಾನ, ಚತುರ ಸಂಭಾಷಣೆ ಜನಪ್ರಿಯವಾದವು. ಅದೇ ಕಾಲದಲ್ಲಿ ಇಂಗ್ಲೆಂಡಿನ ಪ್ರಾಟೆಸ್ಟೆಂಟ್‌ರು ಫ್ರಾನ್ಸಿನ ರೋಮನ್ ಕ್ಯಾಥೋಲಿಕರನ್ನು ದ್ವೇಷಿಸುತ್ತಿದ್ದರು. ದೊರೆ ಇಮ್ಮಡಿ ಚಾರ್ಲ್ಸ್ ಗ್ವಾನ್ ಎಂಬ ಹುಡುಗಿಯನ್ನು ಪ್ರೀತಿಸುತ್ತಿದ್ದುದು ಇಂಗ್ಲಿಷ್ ಪ್ರಜೆಗಳಿಗೆ ಗೊತ್ತಿತ್ತು; ಆಕೆ ರೋಮನ್ ಕ್ಯಾಥೋಲಿಕ್ ಇರಬಹುದೆಂದು ಕೋಪಗೊಂಡಿದ್ದರು. ಒಮ್ಮೆ ಆಕೆ ಕುದುರೆಗಾಡಿಯಲ್ಲಿ ಹೋಗುವಾಗ ಮುತ್ತಿಕೊಂಡು ಘೋಷಣೆ ಕೂಗಿದರು. ಆಕೆ ಸಹಿಸುವಷ್ಟು ಹೊತ್ತು ಸಹಿಸಿ ಕೊನೆಗೆ ಗಾಡಿಯ ಕಿಟಕಿ ತೆರೆ ಸರಿಸಿ ಹೇಳಿದಳು, "ನೀವು ತಪ್ಪು ತಿಳಿದಿದ್ದೀರಿ-ನಾನು ರೋಮನ್ ಕ್ಯಾಥೋಲಿಕ್ ಅಲ್ಲ-ಪ್ರಾಟೆಸ್ಟೆಂಟ್ ಸೂಳೆ!"

ಪ್ರಾಟೆಸ್ಟೆಂಟ್ ಎಂದು ಕೇಳಿ ಅವರು ಖುಷಿಗೊಂಡು ಕುಣಿಯತೊಡಗಿದರು.

ತುಂಟ ಗ್ವಾನ್ ತಮಾಷೆಯ ಬಜಾರಿ ಕೂಡ. ಆಕೆ ಇಮ್ಮಡಿ ಚಾರ್ಲ್ಸ್ ಬಗ್ಗೆ ವ್ಯಂಗ್ಯವಾಡಿ ನಗಿಸುತ್ತಿದ್ದಳು: "ನಾನೀಗಾಗಲೆ ಇಬ್ಬರು ಚಾರ್ಲ್ಸ್‌ಗಳನ್ನು ಪ್ರೇಮಿಸಿರುವುದರಿಂದ ಈತ ಮೂರನೆಯವನು-ಇಮ್ಮಡಿ ಚಾರ್ಲ್ಸ್ ಅಲ್ಲ, ಮುಮ್ಮಡಿ ಚಾರ್ಲ್ಸ್" ಎನ್ನುತ್ತಿದ್ದಳು.

ಜಗತ್ತಿನ ಅತಿಪ್ರಾಚೀನ ವೃತ್ತಿಯ ಈಕೆ ಚಾರ್ಲ್ಸ್‌ನ ಮೋಜುಗಾರಿಕೆ, ದೌಲತ್ತಿಗೆ ಸವಾಲಾಗಿದ್ದಳು!

ಬಾಂಬಿನ ನೆರಳಲ್ಲಿ



ಈಕೆ ನನ್ನ ನೆಚ್ಚಿನ ಇಂಗ್ಲಿಷ್ ಕತೆಗಾರ್ತಿ. ಈ ಕ್ಯಾಥೇರಿನ್ ಆ್ಯನ್ ಪೋರ್ಟರ್. ಅಮೆರಿಕಾದಲ್ಲಿ ಹುಟ್ಟಿ ಬೆಳೆದ ಆ್ಯನ್ ಪೋರ್ಟರ್ ಅನುಭವಕ್ಕಾಗಿ ಹುಡುಕಿ ಹೊರಟು ಮೆಕ್ಸಿಕೋದಲ್ಲಿ ಜೀವಿಸಿದಳು; ಪತ್ರಕರ್ತೆಯಾಗಿ, ವಿಮರ್ಶಕಿಯಾಗಿ, ಎಲ್ಲಕ್ಕಿಂತ ಮುಖ್ಯವಾಗಿ ಕತೆಗಾರ್ತಿಯಾಗಿ ಖ್ಯಾತಳಾದಳು. ಹೆಚ್ಚು ಬರೆಯಲಿಲ್ಲ; ಆದರೆ ಬರೆದದ್ದೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಅರ್ಥಪೂರ್ಣ. ಸುಮಾರು ಹದಿನೈದು ಕತೆಗಳು, ಒಂದು ಬೃಹತ್ ಕಾದಂಬರಿ, ಕೆಲವು ಲೇಖನಗಳು ಈ ಲೇಖಕಿ ಬಿಟ್ಟುಹೋಗಿರುವ ಸಾಹಿತ್ಯ. ನಾನು ಮಾಡಿದ ಒಂದು ಸಿನಿಮಾ 'ಎಲ್ಲಿಂದಲೋ ಬಂದವರು' ಈಕೆಯ ಕತೆಯೊಂದರಿಂದ ಸ್ಫೂರ್ತಿ ಪಡೆದು ರೂಪುಗೊಂಡದ್ದು.

ಈಕೆಯ ಕತೆಗಳಲ್ಲಿ ಮುಖ್ಯ ಕತೆ 'ಫ್ಲವರಿಂಗ್ ಜೂಡಾಸ್,' ಕೆಯ ವಸ್ತುಗಳ ಮುಖ್ಯ ಪ್ರೇರಣೆ ಭಯ. ಈ ಬಗ್ಗೆ ಕುತೂಹಲಗೊಂಡು ಹುಡುಕತೊಡಗಿದೆ. ಭಯ, ಆತಂಕ ಏಕೆ ಈ ಪ್ರತಿಭಾವಂತೆಯ ವಸ್ತುವಾದವು; ಆಕೆಯೇ ಹೇಳುತ್ತಾಳೆ, ಎರಡನೆಯ ಮಹಾಯುದ್ಧದ ಬಾಂಬುಗಳ ನೆರಳಲ್ಲಿ ಬದುಕಿದ, ಸರ್ವನಾಶದ ಅಂಚಿನಲ್ಲಿ ತತ್ತರಿಸಿದ ಜನಾಂಗಕ್ಕೆ ಸೇರಿದವಳು ಆಕೆ. ಅತಿಥಿಯನ್ನು ಕಂಡರೆ ಅದೇ, ಪ್ರೇಮಿಯನ್ನು ಕಂಡರೆ ಅದೇ, ಸ್ನೇಹಿತನನ್ನು ಕಂಡರೆ ಅದೇ-ಭಯ, ಅನುಮಾನ. ಫ್ಲವರಿಂಗ್ ಜೂಡಾಸ್ ಕತೆಯ ಲಾರಾ ಕೊನೆಗೂ ಪ್ರೀತಿಸುವುದೇ ಇಲ್ಲ; ಎಲ್ಲರನ್ನೂ ದೂರ ಇಡುವುದೇ ಅವಳ ನಿತ್ಯದ ಕೆಲಸ. ಬ್ರಾಗಿಯೋನಿ ಎಂಬ ಕ್ರಾಂತಿಕಾರ ಅವಳಿಗೆ ಹಾಡುತ್ತಾನೆ, ಏನನ್ನೂ ಕೊಡುವುದಕ್ಕೂ ಸಿದ್ಧನಿದ್ದಾನೆ, ತನ್ನ ಘನತೆಯ ಬಗ್ಗೆ ಕೊಚ್ಚಿಕೊಳ್ಳುತ್ತಾನೆ. ಆದರೆ ಆಕೆಯಲ್ಲಿ ಅವನ ಬಗ್ಗೆ ಅಸಹ್ಯ ಮತ್ತು ಭಯವೇ ಹೆಚ್ಚುತ್ತದೆ. ಒಮ್ಮೆ ಒಬ್ಬ ಹತ್ತೊಂಭತ್ತು ವರ್ಷದ ಹುಡುಗ ಆಕೆಯ ಬಗೆಗಿನ ಮೋಹ ತಡೆಯಲಾರದೆ ರಾತ್ರಿ ಹೊತ್ತು ಆಕೆಯ ಮನೆ ಎದುರು ನಿಂತು ಇಡೀ ಎರಡು ಗಂಟೆ ಹಾಡುತ್ತಾನೆ, ಸುಮಧುರ ಕಂಠದಲ್ಲಿ. ಲಾರಾಗೆ ಏನು ಮಾಡುವುದೆಂಬುದೇ ಗೊತ್ತಿಲ್ಲ, ಸೇವಕಿ ಆಕೆಗೆ ಹೇಳುತ್ತಾಳೆ, "ಅಮ್ಮ, ಅವನತ್ತ ಒಂದು ಚಿಕ್ಕ ಹೂವು ಎಸೆಯಿರಿ, ತೃಪ್ತಿಯಿಂದ ಹೊರಟುಹೋಗುತ್ತಾನೆ." ಲಾರಾ ಹೂವು ಎಸೆಯುತ್ತಾಳೆ. ಆಗ ಹೋದವನು ಮತ್ತೆ ಬರುತ್ತಾನೆ. ಆದರೆ ಆಕೆ ಅವನನ್ನು ಕನಸಿನಲ್ಲಿ ಮಾತ್ರ ಕಾಣುತ್ತಾಳೆ..... ಜೂಡಾಸ್ ಮರದ ಹೂವು ಮತ್ತು ಎಲೆಗಳನ್ನು ತಿನ್ನುತ್ತ, ಹಸಿವು ಮತ್ತು ನೀರಡಿಕೆ ಅಡಗಿಸುವ ಜೂಡಾಸ್ ಗಿಡ ತಿನ್ನುತ್ತಾ-ಕನಸಿನಿಂದ ಏಳುತ್ತಾಳೆ.

ಎರಡನೆ ಜಾಗತಿಕ ಯುದ್ಧದ ನೆರಳಲ್ಲಿ, ಪ್ರೇಮ, ಕಾಮಗಳೆಲ್ಲ ಗೌಣವೆನ್ನಿಸಿದ ಗಳಿಗೆಯಲ್ಲಿ-ಈ ಕ್ಯಾಥರೀನ್ ಆ್ಯನ್ ಪೋರ್ಟರ್ ಎಷ್ಟು ಚೆನ್ನಾಗಿ ಬರೆಯುತ್ತಾಳೆ! ಚಿತ್ರವತ್ತಾಗಿ, ಆಳದ ನೋವಿನಿಂದ, ಒಂದು ಕಾದಂಬರಿಯಲ್ಲಿ ಹೇಳಬಹುದಾದ್ದನ್ನು ನಾಲ್ಕೇ ಪುಟಗಳಲ್ಲಿ ಹೇಳುತ್ತಾ!



ರಕ್ತ ಬೀಜಾಸುರರು

ಜೂನ್ 4 ಚೈನಾದ ಕರಾಳ ದಿನ. ಅಂತರರಾಷ್ಟ್ರೀಯ ವೀಕ್ಷಕರ ಕಣ್ಣೆದುರೇ, ಚೈನಾದ ಜನರ ಸಮ್ಮುಖದಲ್ಲೇ ಡೆಂಗ್ ಸೈನ್ಯ ಐದು ಸಾವಿರದಷ್ಟು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕೊಂದು ಹಾಕಿತು; ಚೈನಾ ದೇಶ ಶಾಕ್‌ನಿಂದ ನಡುಗುವಂತೆ ಮಾಡಿತು. ಈ ಕಗ್ಗೊಲೆಯ ವೀಡಿಯೋ, ಫೋಟೋ, ದಾಖಲೆಗಳೆಲ್ಲ ಇವೆ; ಪ್ರತ್ಯಕ್ಷದರ್ಶಿಗಳ ವರದಿಗಳಿವೆ. ಆದರೂ ಡೆಂಗ್ ಮತ್ತು ಗೆಳೆಯರು ಸುಳ್ಳು ಬೊಗಳತೊಡಗಿದರು. ಕೇವಲ ನಾನೂರು ಜನ ವಿದ್ಯಾರ್ಥಿಗಳು ಗಾಯಗೊಂಡರು, ಸಾವಿರಾರು ಜನ ಸೈನಿಕರು ವಿದ್ಯಾರ್ಥಿಗಳಿಂದ ಕೊಲೆಯಾದರು ಎಂದು ಡೆಂಗ್ ಹೇಳತೊಡಗಿದ. ಟಿಯಾನನ್‌ಮೆನ್ ವೃತ್ತದಲ್ಲಿ ಸೈನ್ಯದ ಗುಂಡಿಗೆ ಬಲಿಯಾಗದೆ ತಪ್ಪಿಸಿಕೊಂಡ ನೂರಾರು ಜನ ವಿದ್ಯಾರ್ಥಿಗಳನ್ನು ಬಂಧಿಸತೊಡಗಿದರು; ಬಂಧಿತರಾಗದೆ ತಲೆ ಮರೆಸಿಕೊಂಡ ವಿದ್ಯಾರ್ಥಿಗಳ ಫೋಟೋಗಳನ್ನು ಚೈನಾದ ಎಲ್ಲ ನಗರಗಳ ಗೋಡೆ ಮೇಲೆ, ಎಲ್ಲ ಪತ್ರಿಕೆಗಳ ಪುಟಗಳಲ್ಲಿ ಮುದ್ರಿಸತೊಡಗಿದರು. ಶಾಂತಿಯಿಂದ ಪ್ರತಿಭಟಿಸಿದ, ತಮ್ಮ ವಿರೋಧವನ್ನು ಉಪವಾಸ ಸತ್ಯಾಗ್ರಹದ ಮೂಲಕ ತೋರಿದ ಈ ಅಮಾಯಕ ವಿದ್ಯಾರ್ಥಿಗಳನ್ನು ಗೂಂಡಾಗಳು, ತಂಟೆಕೋರರು, ಶಾಂತಿ ವಿರೋಧಿಗಳು ಎಂದು ಕರೆದರು. ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುತ್ತಿರುವವರು ಪರದೇಶಗಳ ಸಾಮ್ರಾಜ್ಯಶಾಹಿಗಳು, ಶತ್ರುಗಳು ಎಂದು ಸಾರತೊಡಗಿದರು.

ಏನಾಗಿದೆ ಗೊತ್ತೆ? ಜಗತ್ತಿನ ಪ್ರಜ್ಞಾವಂತರೆನ್ನಿಸಿಕೊಂಡ ಎಲ್ಲರ ನಿರೀಕ್ಷೆ ಸುಳ್ಳಾಗಿಸಿ ಚೈನಾ ದೇಶದ ಜನ, ವಿದ್ಯಾರ್ಥಿಗಳ ಬೆಂಬಲಕ್ಕೆ ಹುಮ್ಮಸ್ಸಿನಿಂದ ಎದ್ದಿದ್ದ ಜನ ಇವತ್ತು ಡೆಂಗ್ ಪ್ರಚಾರಕ್ಕೆ ಮಣಿಯತೊಡಗಿದ್ದಾರೆ. ಸೈನ್ಯದ ಆಘಾತಕ್ಕೆ ಹೆದರಿದ ಹೆಂಗಸೊಬ್ಬಳು ತನ್ನ ಮಗ ಬಂಧಿತನಾದ ಸುದ್ದಿ ಕೇಳಿ ಪತ್ರಿಕೆಗಳಿಗೆ ಹೇಳಿಕೆ ನೀಡಿದ್ದಾಳೆ. (ಅಥವಾ ನೀಡಿಸಲಾಗಿದೆ): "ಆತ ಕೆಟ್ಟವರೊಂದಿಗೆ ಸೇರಿಕೊಂಡು ಹಾಳಾದ" ಎಂದು.

ಸರ್ಕಾರದ ನೀಚಶಕ್ತಿ ಎಷ್ಟಿರುತ್ತದೆಂಬ ಕಲ್ಪನೆ ಅನೇಕರಿಗೆ ಇರುವುದಿಲ್ಲ, ದುಷ್ಟ ಸರ್ಕಾರವೊಂದು ಎಲ್ಲ ಮುಲಾಜು ಬಿಟ್ಟಾಗ ಯಾರನ್ನು ಬೇಕಾದರೂ ಮುಗಿಸಬಹುದು. ಇಂಥ ಸರ್ಕಾರ ಚೈನಾದಲ್ಲಿ ಜನಕ್ಕೆ "ಸಮಾಜದ್ರೋಹಿಗಳನ್ನು ಹಿಡಿದುಕೊಡಿ, ಅವರ ಬಗ್ಗೆ ಮಾಹಿತಿ ಕೊಡಿ" ಎಂದು ಕರೆ ಕೊಟ್ಟಿದೆ. ಕರೆಗೆ ಪ್ರತಿಕ್ರಿಯೆ ಚೆನ್ನಾಗಿದೆ. ಮೊನ್ನೆ ಪತ್ರಕರ್ತನೊಬ್ಬ ಜನಸಾಮಾನ್ಯನಾದ ಟ್ಯಾಕ್ಸಿ ಡ್ರೈವರ್‌ನೊಬ್ಬನನ್ನು ಕೇಳಿದಾಗ ಹೇಳಿದ: "ವಿದ್ಯಾರ್ಥಿ ಚಳವಳಿಯೇನೋ ಚೆನ್ನಾಗಿತ್ತು-ಆದರೆ ಅದು ಸಮಾಜಕಂಟಕರ ಕೈಗೆ ಹೋಗಿದ್ದರಿಂದ ಹೀಗೆಲ್ಲ ಆಯಿತು."

ಸರ್ಕಾರಿ ರೇಡಿಯೋ, ಟಿವಿಗಳು ಜನರ ಮನವೊಲಿಸುವುದಿಲ್ಲ ಎಂದು ಯಾರು ಹೇಳಬಲ್ಲರು? ನಿತ್ಯ ಅನಿವಾರ್ಯವಾಗಿ ಟಿವಿ ನೋಡಲೇಬೇಕಾದ, ಕೇಳಲೇಬೇಕಾದ ಜನ ಅಷ್ಟೇ ಅನಿವಾರ್ಯವಾಗಿ ಅಷ್ಟೇ ಅಪ್ರಜ್ಞಾಪೂರ್ವಕವಾಗಿ ಸರ್ಕಾರಿ ಹೇಳಿಕೆಗಳನ್ನು ಒಪ್ಪತೊಡಗುತ್ತಾರೆ.... ಇದನ್ನು ನೋಡುತ್ತಿದ್ದೇನೆ.

ಆರೋಗ್ಯಕರ ಚರ್ಚೆಗೆ orkutನಲ್ಲೊಂದು ಚಾವಡಿ

ಕಳೆದ ವಾರ ಇಂಟರ್‌ನೆಟ್‌ನಲ್ಲಿ orkut.com ನಲ್ಲಿ ಜಾಲಾಡು ತ್ತಿದ್ದಾಗ ಗೌರಿ ಲಂಕೇಶ್ ಹೆಸರಿನಲ್ಲಿ ಯಾವುದಾದರೂ ಕಮ್ಯುನಿಟಿ ಇರಬಹುದೇ ಎಂಬ ಕುತೂಹಲ ಮೂಡಿತು. ಹಾಗೇ ಸರ್ಚ್ ಬ್ಯಾಕ್ಸ್‌ನಲ್ಲಿ ಗೌರಿ ಲಂಕೇಶ್ ಅಂತ ಟೈಪ್ ಮಾಡಿ, enter ಬಟನ್ ಅದುಮಿದ ತಕ್ಷಣ we hate Gowri Lankesh, Gowri Lankesh sucks, boycott Lankesh Patrike ಮುಂತಾದ ಲಂಕೇಶ್ ವಿರೋಧಿ ಕಮ್ಯುನಿಟಿಗಳು ನನ್ನ ಮುಂದೆ ತೆರೆದುಕೊಂಡವು. ಆ ಕಮ್ಯುನಿಟಿಗಳ ವಿವರಗಳನ್ನು ಓದಿದಾಗ ಅವೆಲ್ಲವೂ ಚಿಡ್ಡಿಗಳಿಗೆ ಸೇರಿದ ಕಮ್ಯುನಿಟಿ ಗಳೆಂಬುದು ದಿಟವಾಯಿತು.

ನನಗೆ ತುಂಬಾ ವಿಚಿತ್ರವೆನಿಸಿದ್ದೇನೆಂದರೆ ಆ ಕಮ್ಯುನಿಟಿಗಳ ವಿವರಗಳು ಮತ್ತು ಮೆಸೇಜ್ ಬಾಕ್ಸ್‌ಗಳಲ್ಲಿ ಗೌರಿ ಲಂಕೇಶ್ ವಿರುದ್ಧ ಮಾಡಿದ ಅಪವಾದಗಳು. **"This community is to protest against Gowri Lankesh's views that threatens national intergity. Gowri Lankesh promotes herself as a help for poor, but she supports the naxalites"- Gowri Lankesh sucks (orkut community).**

"U.R. Ananthamurthy and Gowri Lankesh well known supporters of naxals, and Gowri Lankesh is actually a naxal. We hate Gowri Lankesh" (orkut community).

"As intellectual namely U.R. Anantha murthy, Gowri Lankesh, Girish Karnad are naxalites"-community message.

"ತಾನು ಬಡವರ ಪರ ಎಂದು ಹೇಳಿಕೊಳ್ಳುವ ಗೌರಿ ಲಂಕೇಶ್ ನಿಜವಾಗಿ ನಕ್ಸಲೈಟ್. ಆಕೆಯ ವಿಚಾರಧಾರೆಗಳು ಭಾರತದ ಸಮಗ್ರತೆ, ಸಾಮರಸ್ಯ, ಐಕ್ಯತೆಗಳಿಗೆ ಧಕ್ಕೆ ತರುತ್ತವಾದ್ದರಿಂದ ಆಕೆಯನ್ನು ವಿರೋಧಿಸಿ."

ಇದು ಗೌರಿ ಲಂಕೇಶ್ ವಿರುದ್ಧ **orkut** ನಲ್ಲಿ ಕಂಡುಬಂದ ಕೆಲವು ಆರೋಪಗಳ ಸ್ಯಾಂಪಲ್‌ಗಳು.

ಗೌರಿ ಲಂಕೇಶ್ ವಿಚಾರಧಾರೆಗಳು ನರೇಂದ್ರ ಮೋದಿಯಂತಹ ನರಹಂತಕರನ್ನು ಆರಾಧಿಸುವ ಚಿಡ್ಡಿಗಳಿಗೆ ಜೀರ್ಣಿಸಿಕೊಳ್ಳುವುದು ತುಂಬಾನೇ ಕಷ್ಟ ಎಂಬುದು ಕರ್ನಾಟಕದ ಪ್ರಬುದ್ಧ ಜನತೆಗೆ ಗೊತ್ತೇ ಇದೆ. ಗೌರಿ ಲಂಕೇಶ್ ಬಾಬಾ ಬುಡನ್‌ಗಿರಿಯಲ್ಲಿ ಸಂಘ ಪರಿವಾರ ನಡೆಸುವ ಪುಂಡಾಟಿಕೆ ಗಳನ್ನು ಖಂಡಿಸಿ ಲೇಖನ ಬರೆಯುತ್ತಾರೆ. ಮತೀಯ ಆಧಾರದಲ್ಲಿ ಸಮಾಜವನ್ನು ಒಡೆಯಲು ಷಡ್ಯಂತ್ರ ರೂಪಿಸುತ್ತಿರುವ ಚಿಡ್ಡಿಗಳ ನಿಜಬಣ್ಣವನ್ನು ತಮ್ಮ ಪತ್ರಿಕೆಯಲ್ಲಿ ಬಯಲಿಗೆಳೆಯುತ್ತಾರೆ. ಹಿಂದೂತ್ವವಾದದ ವಿಷಬೀಜವನ್ನು ಸಮಾಜದಲ್ಲಿ ಬಿತ್ತಿ, ಕರ್ನಾಟಕಕ್ಕೆ ಬೆಂಕಿ ಇಡಲೆತ್ನಿಸುವ, ಕರ್ನಾಟಕವನ್ನು ಗುಜರಾತ್ ಮಾಡಲು ಹೊರಟಿರುವ ಸಂಘ ಪರಿವಾರವನ್ನು ಜನತೆಯ ಮುಂದೆ ಬೆತ್ತಲೆಯಾಗಿ ನಿಲ್ಲಿಸುತ್ತಾರೆ. ಹಿಂದೂ, ಇಸ್ಲಾಂ ಮತ್ತಿತರ ಧರ್ಮ ಗಳಲ್ಲಿನ ಮೂಲಭೂತವಾದಿಗಳು ಹಾಗೂ ಜಾತಿವಾದಿಗಳನ್ನು ವಿರೋಧಿಸು ತ್ತಾರೆ. ಸಮಾಜವನ್ನು ಛಿದ್ರಛಿದ್ರಗೊಳಿಸುವ ಸ್ಯಾಡಿಸ್ಟ್ ಸಂಘ ಪರಿವಾರದವರಿಗೆ ಪ್ರತಿಯಾಗಿ ಗೌರಿ ಲಂಕೇಶ್ ಕೋಮು ಸೌಹಾರ್ದ ವೇದಿಕೆಯಲ್ಲಿ ಸಕ್ರಿಯರಾಗಿ ಕರ್ನಾಟಕ ಮತ್ತು ದೇಶದ ಸಮಗ್ರತೆಗೆ ಧಕ್ಕೆಯಾಗದಂತೆ ಎಚ್ಚರ ವಹಿಸುತ್ತಾರೆ. ಗೌರಿ ಲಂಕೇಶರ ಈ ಎಲ್ಲಾ ಕೆಲಸಗಳಿಂದ ದೇಶದ ಸಮಗ್ರತೆಗೆ ಮತ್ತು ಐಕ್ಯತೆಗೆ ಹೇಗೆ ಧಕ್ಕೆಯಾಗುತ್ತದೆ?

ಗುಜರಾತ್‌ನಲ್ಲಿ ಅಲ್ಪಸಂಖ್ಯಾತರನ್ನು ಕೊಂದ ರಕ್ತಪಿಪಾಸು ನರೇಂದ್ರ ಮೋದಿಯನ್ನು ರೋಲ್ ಮಾಡೆಲ್ ಮಾಡಿಕೊಂಡವರು, ಗಾಂಧೀಜಿಯನ್ನು ಕೊಂದ ಗೋಡ್ಸೆಯನ್ನು ಆರಾಧಿಸುವವರು, ಶವಪೆಟ್ಟಿಗೆ, ಪಾರ್ಲಿಮೆಂಟ್ ಪ್ರಶ್ನೋತ್ತರ ಮುಂತಾದ ಹಗರಣಗಳಲ್ಲಿ ದೇಶವನ್ನು ಬಿಕರಿಗಿಟ್ಟ ಪಕ್ಷದ ಅನುಯಾಯಿಗಳು, ಅಲ್ಪಸಂಖ್ಯಾತ-ದಲಿತ-ಶೋಷಿತ ವರ್ಗಗಳು ಮತ್ತು ಮಹಿಳೆಯರನ್ನು ತುಚ್ಛವಾಗಿ ಪರಿಗಣಿಸುವ ಮನುವಾದದ ಸಮರ್ಥಕರು ದೇಶದ ಸಮಗ್ರತೆ ಬಗ್ಗೆ ಮಾತನಾಡುತ್ತಾರೆ. ಮುಗ್ಧ ಜನತೆ ಪೂರ್ವಾಪರ ಗೊತ್ತಿಲ್ಲದೆ ಇವರು ಹೇಳುವುದೆಲ್ಲವೂ ನಿಜ ಅಂದುಕೊಳ್ಳುತ್ತಾರೆ.

"ಗೌರಿ ಲಂಕೇಶ್ ಹಿಂದೂಗಳನ್ನು ಚಿಡ್ಡಿಗಳೆಂದು ಜರೆಯುತ್ತಾರೆ, ಹಿಂದೂಗಳನ್ನು ಅವಹೇಳನ ಮಾಡಿ ಲೇಖನ ಬರೆಯುತ್ತಾರೆ" ಎಂದು ಕಾಲೇಜು ಹುಡುಗನೊಬ್ಬ **orkut** ನಲ್ಲಿ ಮೆಸೇಜ್ ಬರೆದಿದ್ದೂ ಓದಿದೆ. ಹಿಂದೂಧರ್ಮದ ತತ್ವಗಳಿಗೆ ವಿರೋಧಿಯಾಗಿರುವ, ಸದಾ ಪರಮತ ಅಸಹಿಷ್ಣುತೆಯನ್ನೇ ಕಕ್ಕುವ ಸಂಘ ಪರಿವಾರದ ಹಿಂದೂತ್ವವನ್ನು ಈ ದೇಶದ ಶಾಂತಿಪ್ರಿಯ ಜನರು ಹಿಂದಿನಿಂದಲೂ ಒಪ್ಪಿಕೊಂಡಿಲ್ಲ, ಈಗಲೂ ಒಪ್ಪಿಕೊಳ್ಳಲ್ಲ, ಮುಂದೆಯೂ ಒಪ್ಪಿಕೊಳ್ಳಲ್ಲ. ಗೌರಿ ಲಂಕೇಶ್ ಚಿಡ್ಡಿಗಳೆಂದು ಜರೆಯುತ್ತಿರುವುದು ಹಿಂದೂತ್ವವಾದಿಗಳಾದ ಆರ್‌ಎಸ್‌ಎಸ್ ಬೆಂಬಲಿಗ ಯವರನ್ನೇ ಹೊರತು ಎಲ್ಲಾ ಹಿಂದೂಗಳನ್ನಲ್ಲ, ಇಸ್ಲಾಂನ ಹೆಸರಿನಲ್ಲಿ ಜಗತ್ತಿನಲ್ಲಿ ಎಲ್ಲಿ ಭಯೋತ್ಪಾದನೆ ನಡೆದರೂ ನಾವು ಖಂಡಿಸುವುದು ಭಯೋತ್ಪಾದಕ ಕೃತ್ಯವನ್ನು ಎಸಗುವುದನ್ನೇ ಹೊರತು ಇಡೀ ಮುಸ್ಲಿಂ ಸಮಾಜವನ್ನಲ್ಲ.


ಅದಿರಲಿ, ನಕ್ಸಲಿಸಂ ಹಾವಳಿಯನ್ನು ಶಾಂತಿಮಾರ್ಗದಿಂದ ಪರಿಹರಿಸ ಬೇಕೆಂದು ವಾದಿಸುವವರು ನಕ್ಸಲೈಟ್ ಹಣೆಪಟ್ಟಿಯನ್ನು ಅಂಟಿಸಿಕೊಳ್ಳ ಬೇಕಾಗುತ್ತದೆ. ಕಂಬಾಲಪಲ್ಲಿಯಲ್ಲಿ ದಲಿತರನ್ನು ಸುಟ್ಟು ಕೊಂದ ಸವರ್ಣೀಯರು, ಮಹಾರಾಷ್ಟ್ರದಲ್ಲಿ ಗೋವನ್ನು ಥಳಿಸಿದ ತಪ್ಪಿಗೆ ದಲಿತ ಯುವಕನನ್ನು ಸಜೀವ ದಹನ ಮಾಡಿದ ಚಿಡ್ಡಿಗಳು, ಬಾಬರಿಮಸೀದಿಯನ್ನು ಧ್ವಂಸ ಮಾಡಿ ದೇಶದ ಮನಸ್ಸಾಕ್ಷಿಯನ್ನು ಘಾಸಿಗೊಳಿಸಿದವರು, ರಾಮಸೇತು ವಿವಾದದ ಹೆಸರಿನಲ್ಲಿ ಬೆಂಗಳೂರಿನಲ್ಲಿ ಬಸ್ಸನ್ನು ಸುಟ್ಟು ಇಬ್ಬರು ಮುಗ್ಧರನ್ನು ಸಜೀವ ದಹನ ಮಾಡಿದವರು, ಗುಜರಾತ್‌ನಲ್ಲಿ ಸಾವಿರಾರು ಮಂದಿಯ ಮಾರಣಹೋಮ ಮಾಡಿದವರು, ಈ ದೇಶದ ಸಮಗ್ರತೆಯ, ಐಕ್ಯತೆಗೆ ನಿಜವಾದ ದ್ರೋಹಿಗಳು. ಅವರನ್ನು ಎಲ್ಲರೂ ವಿರೋಧಿಸಬೇಕಿದೆ.

Orkut ನಲ್ಲಿ ಚಿಡ್ಡಿಗಳು ಮಾಡಿರುವ ಅವಹೇಳನಗಳನ್ನೆಲ್ಲಾ ನೋಡಿದ ಮೇಲೆ, ಇದರ ವಿರುದ್ಧವಾಗಿ ಭಿನ್ನವಾಗಿ ಚಿಂತಿಸುವವರ ಯಾವುದಾದರೂ ಕಮ್ಯುನಿಟಿ, ವೇದಿಕೆ ಇದೆಯಾ ಅಂತ ಕುತೂಹಲ ಮೂಡಿ ತುಂಬಾ ಹುಡುಕಾಡಿದೆ. ನನ್ನ ದುರಾದೃಷ್ಟಕ್ಕೆ ಅಂತಹ ಕಮ್ಯುನಿಟಿ ಯಾವುದೂ ಸಿಗಲಿಲ್ಲ. ಕೊನೆಗೆ, ವಿಚಾರವಂತ, ಪ್ರಜ್ಞಾವಂತ ಯುವಕರನ್ನು **orkut** ನಲ್ಲಿ ಒಂದೇ ವೇದಿಕೆಗೆ ತರುವ ಉದ್ದೇಶದಿಂದ **Gowri Lankesh the advocete of peace, we love Tehelka** ಮತ್ತು **communalism sucks** ಎಂಬ ನನ್ನದೇ ಆದ ಕಮ್ಯುನಿಟಿಗಳನ್ನು ಕ್ರಿಯೇಟ್ ಮಾಡಿದೆ. ಈ ಕಮ್ಯುನಿಟಿಗೆ ಕರ್ನಾಟಕದ ಎಲ್ಲ ಜಾತ್ಯತೀತವಾದಿ ನಾಗರಿಕರು, ಪತ್ರಿಕೆಯ ಸಹೃದಯ ಓದುಗರು ಸದಸ್ಯರಾಗಿ ಕೋಮುವಾದ ಮತ್ತು ಭಯೋತ್ಪಾದನೆ ಹಾಗೂ ಜಾತಿವಾದವನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ಆರೋಗ್ಯಕರ ಚರ್ಚೆಗಳಿಗೆ ಅವಕಾಶ ಮಾಡಿ ಕೊಡಬೇಕೆಂದು ನನ್ನ ಪುಟ್ಟದೊಂದು ಮನವಿ.

-ಎ.ಎ. ಶಬೀರ್, ಕೊಡಗು

ಕೆ.ಪಿ. ಸುರೇಶ್ ಹೋರಾಟಕ್ಕೆ ಬೆಂಬಲ ನೀಡಬೇಕು

ನವೆಂಬರ್ 28 ರ ಸಂಚಿಕೆಯ 'ಅಮರ ಮುಡ್ನೂರು ಪಂಚಾಯತ್ ರಾಜ್ ವ್ಯವಸ್ಥೆಯ ಭ್ರಷ್ಟ ಕೂಪ' ಲೇಖನದ ಬಗ್ಗೆ. ಇದು 'ಭ್ರಷ್ಟಾಚಾರದ ಒಂದೆರಡು ಹನಿ ಮಾತ್ರ' ಖಂಡಿತ ಹೌದು. ಇದೊಂದು ಸಣ್ಣ ಉದಾಹರಣೆಯಷ್ಟೇ. ರಾಜ್ಯದ ಎಲ್ಲಾ ಪಂಚಾಯತ್ ಗಳ ಬಗ್ಗೆ ಒಂದು ತನಿಖೆ-ಸಮೀಕ್ಷೆ ನಡೆಸಿದರೆ, ಅವ್ಯವಹಾರದ ಮೊತ್ತ ಹಲವು ಗಣೆ ಪ್ರಕರಣಗಳಷ್ಟು ಇದೆ. ಹೆಚ್ಚಿನ ಪಂಚಾಯತ್ ಗಳಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಕೆಲವರು ಸದಸ್ಯರುಗಳಿಗೆ ಕೂಡಾ ತಿಂಗಳಿಗೆ ಇಂತಿಷ್ಟು ಎಂದು ಕಾಯಂ ವರಮಾನ ಸೃಷ್ಟಿಸಿಕೊಂಡಿ ದ್ದಾರೆ. ಅನೇಕರು ತಮ್ಮ ತಮ್ಮ ಮನೆಗಳಿಗೆ ರಸ್ತೆ ಮಾಡಿಸಿಕೊಂಡಿದ್ದಾರೆ (ಖಾಸಗಿ ರಸ್ತೆಗಲು).


ಕೆ.ಪಿ.ಸುರೇಶ್

ಈಗ ಪ್ರತಿ ಪಂಚಾಯತ್‌ಗೂ ಕಂಪ್ಯೂಟರ್ ಬಂದಿದೆ. ಕಂಪ್ಯೂಟರ್ ಮತ್ತು ಅದಕ್ಕೆ ಸಂಬಂಧಪಟ್ಟ ಸ್ಕ್ಯಾನರ್, ಪ್ರಿಂಟರ್ ಸೇರಿ ಮಾರುಕಟ್ಟೆಯಲ್ಲಿ ಇವತ್ತು ಹದಿನೈದು ಸಾವಿರ ಮೀರದ ಬೆಲೆ ಇರುವ ಕಂಪ್ಯೂಟರ್‌ಗಳಿಗೆ ತಲಾ 90 ಸಾವಿರಕ್ಕೂ ಹೆಚ್ಚಿಗೆ ಬಿಲ್ ಮಾಡಲಾಗಿದೆ. ಇದೊಂದು ಬಾಬ್ತಿನಲ್ಲೇ ಮಾಡಿದ ಲೂಟಿ ಪ್ರತಿ ಜಿಲ್ಲೆಯಲ್ಲೂ ಕೋಟಿಗಳನ್ನು ಮೀರುತ್ತದೆ.

ಕೆ.ಪಿ. ಸುರೇಶರು ಮಾಡುತ್ತಿರುವಂತಹ ಹೋರಾಟ ಎಲ್ಲೆಡೆ ಪ್ರಾರಂಭವಾಗಬೇಕಿದೆ. ಜನ ಸಿನಿಕರಾಗುತ್ತಿರುವಾಗ ಸುರೇಶ್‌ರಂಥವರ ಹೋರಾಟಕ್ಕೆ ಸ್ಪಂದಿಸುವುದು, ಬೆಂಬಲಿಸುವುದು ಇನ್ನೂ ಪ್ರಜ್ಞೆ ಉಳಿಸಿಕೊಂಡಿದ್ದೇವೆಂದು ನಂಬಿಕೊಂಡಿರುವ ನಮ್ಮೆಲ್ಲರ ಕರ್ತವ್ಯವೊಂದು ಭಾವಿಸು ತ್ತೇನೆ.

-ಪ್ರಸಾದ ರಕ್ಷಿದಿ, ಹಾಸನ

ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಮರ ಮುಡ್ನೂರು ಹಳ್ಳಿಯಲ್ಲಿ ನಡೆದ ಭ್ರಷ್ಟಾಚಾರ ಹಾಗೂ ಅದರ ವಿರುದ್ಧ ಕೆ.ಪಿ. ಸುರೇಶ್ ಮತ್ತು ಇತರರು ನಡೆಸುತ್ತಿರುವ ಹೋರಾಟದ ಕುರಿತು ಓದಿದೆ. ಸುರೇಶ್ ಕಳೆದ 25 ವರ್ಷಗಳಿಂದ ನನಗೆ ಆಪ್ತರು. ಅವರು ಬೇಕೆಂದೇ ಈ ಹೋರಾಟದ ಕಷ್ಟದ ಹಾದಿಯನ್ನು ಆಯ್ದುಕೊಂಡಿದ್ದಾರೆ; ಆದರೆ ಅವರನ್ನು ಏಕಾಂಗಿಯಾಗಲು ನಾವು ಬಿಡಕೂಡದು. ಮಾಹಿತಿ ಹಕ್ಕಿನ ಕಾಯ್ದೆಯನ್ನು ಬಳಸಿಕೊಂಡು ರಾಜಕಾರಣಿಗಳು ಮತ್ತು ಅಧಿಕಾರಿಗಳ ಭ್ರಷ್ಟಾಚಾರದ ವಿರುದ್ಧ ರಾಜ್ಯದ ಎಲ್ಲೆಡೆ ಈಗ ಅಮರ ಮುಡ್ನೂರು ಮಾದರಿಯ ಹೋರಾಟ ನಡೆಯಬೇಕಾ ಗಿದೆ. ಒಂದು ಸಣ್ಣ ಹಳ್ಳಿಯಲ್ಲೇ ಇಷ್ಟು ದೊಡ್ಡ ಮೊತ್ತದ ಸಾರ್ವಜನಿಕ ಹಣ "ಕಾಣದಂತೆ ಮಾಯವಾ ದರೆ" ಇನ್ನು ಇಡೀ ರಾಜ್ಯ/ ದೇಶದಲ್ಲಿ ಇದು ಎಷ್ಟು ಸಹಸ್ರ ಕೋಟಿಗಳಾಗಬಹುದು.

ಪತ್ರಿಕೆಯ ಹಿಂದಿನ ಹಲವು ಸಂಚಿಕೆಗಳಲ್ಲಿ ನೀವು ಬೆಂಗಳೂರಿನಲ್ಲಿ ಬಿಜೆಪಿಗಳು ನಡೆಸಿದ ಭೂಗಳ್ಳತನವನ್ನು ದಾಖಲೆ ಸಮೇತ ಬಯಲಿಗೆಳೆದಿದ್ದೀರಿ. ಬಹುತೇಕ ಎಲ್ಲ ಬಿಜೆಪಿ ಶಾಸಕರ ಬಗ್ಗೆ ಈ ಬಗೆಯ ವದಂತಿಗಳಿವೆ. ಈ ದೇಶಭಕ್ತರ ಜೀರ್ಣಶಕ್ತಿಗೆ ಇತಿಮಿತಿಯೇ ಇಲ್ಲವೆಂಬಂತೆ ಕಾಣುತ್ತಿದೆ. ಮಣ್ಣು, ಗ್ರಾನೈಟ್, ಕಬ್ಬಿಣದ ಅದಿರು, ಪೆಟ್ರೋಲು, ಕರೆನ್ಸಿನೋಟು-ಹೀಗೆ ಸಿಕ್ಕಿದ್ದನ್ನು ಇವರು ನುಂಗಿ ನೊಣೆಯಬಲ್ಲರು. ಇವರು ನುಂಗಿದ್ದರಲ್ಲಿ ಸ್ವಲ್ಪವನ್ನಾದರೂ ಕಕ್ಕಿಸಲು ಈಗ ಒಂದು ಸುಲಭೋಪಾಯವಿದೆ. ನಮ್ಮ ಶಾಸಕರು ಮತ್ತು ಲೋಕಸಭಾ ಸದಸ್ಯರು (ಎಲ್ಲ ಪಕ್ಷಗಳವರು) ತಮ್ಮ ಶಾಸಕ ನಿಧಿಯನ್ನು ಹೇಗೆ ವಿನಿಯೋಗಿಸಿದ್ದಾರೆ ಎಂಬ ಮಾಹಿತಿಯನ್ನು ಸಂಬಂಧ ಪಟ್ಟ ಸರ್ಕಾರಿ ಕಚೇರಿಗಳಿಂದ, ಮಾಹಿತಿ ಹಕ್ಕಿನ ಕಾಯ್ದೆಯನ್ವಯ ದೊರಕಿಸಿಕೊಳ್ಳಲು ದಸಂಸ, ಟ್ರೇಡ್ ಯೂನಿಯನ್ನುಗಳು, ಶಿಕ್ಷಕರ ಸಂಘಟನೆಗಳು, ಸ್ತ್ರೀಶಕ್ತಿ ಸಂಘಗಳು ಮತ್ತಿತರ ಸಾರ್ವಜನಿಕ ಸಂಸ್ಥೆಗಳು ರಾಜ್ಯ ವ್ಯಾಪ್ತಿ ಚಳವಳಿ ನಡೆಸಬೇಕು. ಕೆ.ಪಿ. ಸುರೇಶ್ ಅಂತಹ ವರನ್ನು ಬೆಂಬಲಿಸುವ ಏಕೈಕ ವಿಧಾನ ಇದು.

-ಜಿ.ರಾಜಶೇಖರ, ಉಡುಪಿ


ನವೆಂಬರ್ 21ರ ಲಂಕೇಶ್ ವಾರ ಪತ್ರಿಕೆಯಲ್ಲಿ ಪ್ರಭಾಕರ ಶಿಶಿಲವರ ಬಗೆಗಿನ ಲೇಖನವನ್ನು ಓದಿದ್ದೇನೆ. ಪ್ರಭಾಕರ ಶಿಶಿಲ ನನ್ನ ಶಿಷ್ಯ. ಕಳೆದ 25 ವರ್ಷಗಳಿಂದ ನಾನು ಅವರನ್ನು ಬಲ್ಲೆ. ನಿಜವಾಗಿಯೂ ಬಾಕ್ಸ್ ಮಾಡಿ ಹಾಕಿರುವ ವಿಷಯವೆಲ್ಲವೂ ಸತ್ಯ. ಆದರೆ ಶಿಷ್ಯಂದಿರ ಕೈಯಲ್ಲಿ ವಿಮರ್ಶೆ ಬರೆಸುವುದು ಮತ್ತು ಪತ್ರಿಕೆಗಳಿಗೆ ಹಾಕಿಸುವುದು ಅವರಿಗೆ ಅಗತ್ಯವಿಲ್ಲ, ಏಕೆಂದರೆ ಅವರು ಸ್ವಸಾಮರ್ಥ್ಯದಿಂದ ಮೇಲೆ ಬಂದಿರುವುದು ಮತ್ತು ಕನ್ನಡದಲ್ಲಿ ಅರ್ಥಶಾಸ್ತ್ರವನ್ನು ಕುರಿತ ಅನೇಕ ಕೃತಿಗಳನ್ನು ಬರೆದಿರುವವರು. ನಿಜವಾಗಿಯೂ ಅವುಗಳನ್ನು ನೋಟ್ಸ್ ಎಂದು ಹೇಳುವುದಕ್ಕೆ ಬರುವುದಿಲ್ಲ, ಅನೇಕ ವಿಷಯಗಳ ಮೇಲೆ ಅವರು ಬರೆದಿದ್ದಾರೆ. ಕನ್ನಡ ಕ್ಷೀಣಿಸುತ್ತಿರುವ ಈ ಸಂದರ್ಭದಲ್ಲಿ ಶಿಶಿಲರನ್ನು ಅರ್ಥಶಾಸ್ತ್ರದ ನೋಟ್ಸ್ ಬರಹಗಾರರೆಂದು ಸೀಮಿತ ಮಾಡಿದರೆ ಬರಹಗಾರರಿಗೆ ಮತ್ತು ಕನ್ನಡಕ್ಕೆ ಅಪಚಾರ ವಾಗುತ್ತದೆಂದು ನನಗನ್ನಿಸುತ್ತದೆ.


ಶಿಶಿಲ

-ಡಾ.ಸಿ.ಕೆ. ರೇಣುಕಾರ್ಯ, ನಿರ್ದೇಶಕರು
ಪೂಜಾ ಭಾಗವತ್ ಸ್ಮಾರಕ ಮಹಾಜನ ಶಿಕ್ಷಣ ಕೇಂದ್ರ, ಮೈಸೂರು

ಕೆಲ್ಲುಳಿ ವಿಠಲ್ ಹೆಗ್ಗಡೆಯವರು ಜನಪರವಾಗಿ, ಪ್ರಗತಿಪರವಾಗಿ, ದಲಿತ ಗಿರಿಜನ ಮತ್ತು ಎಲ್ಲಾ ಶೋಷಿತ ಸಮುದಾಯಗಳ ಪರವಾಗಿ ಹೋರಾಟ ಮಾಡಿಕೊಂಡು ಬಂದಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ.

ಇವರ ಹೋರಾಟವನ್ನು ಸಹಿಸಲಾಗದೆ ತುಂಬಾ ವರ್ಷಗಳಿಂದ ಜನ ವಿರೋಧಿ ಪಕ್ಷದವರು ಇವರನ್ನು ಹೇಗಾದರೂ ಮಾಡಿ ಮಟ್ಟ ಹಾಕಬೇಕೆಂದು ಕಾಯುತ್ತಲೇ ಇದ್ದರು. ಪೊಲೀಸರನ್ನು, ಜಿಲ್ಲಾಡಳಿತವನ್ನು ತಮ್ಮ ಕೈಗೊಂಬೆ ಗಳನ್ನಾಗಿ ಮಾಡಿ ಕೊಂಡರೂ ಯಾವುದೇ ಪ್ರಯೋಜನವಾಗಿರಲಿಲ್ಲ


ವಿಠಲ್ ಹೆಗ್ಡೆ

ಇತ್ತೀಚೆಗೆ ಅಲ್ಲಿ ಜಮೀನಿನ ವಿಚಾರದಲ್ಲಿ ಅಕಸ್ಮಾತ್ತಾಗಿ ಉಂಟಾದ ಗೊಂದಲ ಮತ್ತು ಅವರ ಮೇಲಾದ ಸುಳ್ಳು ಆರೋಪವನ್ನೇ ದೊಡ್ಡದಾಗಿ ಬಿಂಬಿಸಿ ಅವರನ್ನು ಅಪಪ್ರಚಾರಕ್ಕೆ ಈಡು ಮಾಡಲು ಕುತಂತ್ರಗಾರಿಕೆಯನ್ನು ಮಾಡಹೊರಟಿದ್ದರು. ನಂತರ ಅದು ಅವರಿಗೇ ತಿರುಗುಬಾಣವಾಗಿ ಹೋಯಿತು! ವಿಠ್ಠಲ್ ಹೆಗ್ಗಡೆಯವರ ಪರವಾಗಿ ಜನ ವಿರೋಧಿಗಳ ವಿರುದ್ಧವಾಗಿ ಬೃಹತ್ ಸಂಖ್ಯೆಯಲ್ಲಿ ಶೃಂಗೇರಿಯಲ್ಲಿ ಪ್ರತಿಭಟನೆ ನಡೆಸಲಾಯಿತು. ಅದನ್ನು ಸಹಿಸಲಾಗದೆ ಇದ್ದ ಕೆಲವು ಪತ್ರಕರ್ತರು ಏನು ಮಾಡಿದರು ಗೊತ್ತೆ? ಪ್ರತಿಭಟನಾ ಮೆರವಣಿಗೆ ಯಲ್ಲಿ ಭಾಗವಹಿಸಿದವರೆಲ್ಲ ವಿಠ್ಠಲ್ ಹೆಗ್ಗಡೆಯವರ ಕುಟುಂಬದವರು, ಬಂಧುಗಳು ಎಂಬುದಾಗಿ ವರದಿ ಮಾಡಿಬಿಟ್ಟರು!

ಅಲ್ಲಾ... ಕೇವಲ 17 ಗುಂಟೆ ಜಮೀನಿನ ವಿಚಾರ ದಲ್ಲಿ ಇಷ್ಟೊಂದು ವಾದವಿವಾದ ಎಬ್ಬಿಸುತ್ತಿರುವ ಇಂಥವರು ಇಲ್ಲಿ ಬಡಜನರಿಗೆ ಸೇರಬೇಕಾದ ನೂರಾರು ಸಾವಿರಾರು ಎಕರೆ ಭೂಮಿಯನ್ನು ಕಬಳಿಸಿಕೊಂಡ ಬಕಾಸುರರ ಬಗ್ಗೆ ಚಕಾರವೆತ್ತುವುದಿಲ್ಲವೇಕೆ?

-ಕಿರುಗುಂದ ರಫೀಕ್,
ಮೂಡಿಗೆರೆ



ಬರಲಿದ್ದಾನೆ ಮರಿ 'ಯಮ'!


'ಹಲೋ ಯಮ' ಖ್ಯಾತಿಯ ಎ.ಆರ್. ಬಾಬು ಮೊನ್ನೆಮೊನ್ನೆ ತಾನೆ ನೈಸ್ ಕಂಪನಿಯ ಅಶೋಕ್ ಖೇಣಿಯನ್ನು ಹಾಕಿಕೊಂಡು 'ಮರುಜನ್ಮ' ಎಂಬ ಚಿತ್ರವನ್ನು ನಿರ್ದೇಶಿಸಿ ಸುದ್ದಿ ಮಾಡಿದ್ದರು. ಆದರೆ ಯಾಕೋ ಏನೋ 'ಮರುಜನ್ಮ' ಬಿಡುಗಡೆಯಾಗಲು ಇನ್ನು ಘಳಿಗೆ ಕೂಡಿಬಂದಿಲ್ಲ.

ಈಗಿನ ವಿಷಯ ಅದಲ್ಲ, ಎ.ಆರ್. ಬಾಬು ತಮ್ಮ ಮುದ್ದಿನ ಮಗ ಜೇಶನ್‌ನನ್ನು ಚಿತ್ರರಂಗಕ್ಕೆ ಕರೆತಂದಿದ್ದಾರೆ. ಬಹಳಷ್ಟು ನಿರ್ದೇಶಕರಂತೆ ಬಾಬು ಕೂಡಾ ತಮ್ಮ ಮಗನನ್ನು ಹೀರೋ ಮಾಡುತ್ತಿದ್ದಾರೆ. ಅದು ತಪ್ಪಲ್ಲ, ಅವರವರ ಇಷ್ಟ ಅವರವರ ದುಡ್ಡು. ಆದರೆ ಎ.ಆರ್. ಬಾಬು ಮಾತ್ರ ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ತಮ್ಮ ಮಗನನ್ನು ಹೀರೋ ಆಗಿ ಮಾತ್ರವಲ್ಲ ಆತನನ್ನು ನಿರ್ದೇಶನಕ್ಕೂ ಇಳಿಸುತ್ತಿದ್ದಾರೆ. ಇದು ಜೀರ್ಣಿಸಿಕೊಳ್ಳಲು ಸ್ವಲ್ಪ ಕಷ್ಟವಾದ ವಿಷಯ. ಈ ಬಗ್ಗೆ ಬಾಬುರನ್ನು ಕೇಳಿದರೆ "ನನ್ನ ಮಗ ಈಗಲೇ 89 ದೃಶ್ಯಗಳ ಡೈಲಾಗ್‌ಗಳನ್ನು ಪೇಪರ್ ನೋಡದೇ ಹೇಳುತ್ತಾನೆ" ಎಂದು ಥೇಟ್ 'ಯಮ'ನಂತೆ ಆರ್ಭಟಿಸಿದರು. ಅಲ್ಲಾ, ಬೈಹಾರ್ಟ್ ಮಾಡುವುದಕ್ಕೂ, ನಟಿಸುವುದಕ್ಕೂ, ನಿರ್ದೇಶಿಸುವುದಕ್ಕೂ ವ್ಯತ್ಯಾಸವಿದೆಯಲ್ಲಾ ಎಂಬ ಪ್ರಶೆಯನ್ನು ಈ 'ಯಮ'ನಿಗೆ ಹಾಕಲು ಪತ್ರಕರ್ತರು ಹಿಂಜರಿದರು.

ಅಂದಹಾಗೆ ಈ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ, ಸದ್ಯಕ್ಕೆ ಇಡುವುದೂ ಇಲ್ಲವಂತೆ. ಚಿತ್ರ ರಿಲೀಜ್ ಆಗುವ ಒಂದು ವಾರದ ಮೊದಲು ಚಿತ್ರದ ನಾಮಕರಣವಂತೆ. ಅದೂ ಪ್ರೇಕ್ಷಕರಿಂದಲೇ! ಅತ್ಯುತ್ತಮ ಹೆಸರು ಸೂಚಿಸಿದವರಿಗೆ ಬಹುಮಾನವೂ ಉಂಟಂತೆ! ಇದು ಬಾಬು ತನ್ನ ಮುದ್ದಿನ ಮಗನಿಗೋಸ್ಕರ ಹಾಕಿಕೊಂಡಿರುವ ಲೇಟೆಸ್ಟ್ ಸ್ಕೀಂ. ಹೇಗಾದರೂ ಆಗಲಿ, 'ನಾರದ'ನಿಂದ ಕಳಕೊಂಡಿದ್ದನ್ನು ಮಗನಿಂದಾದರೂ ಬಾಬು ಪಡೆಯುವಂತಾಗಲಿ.

ಗೋವಿಂದುಗೆ ಗುರುಕಾಣಿಕೆ





'ಮಿಂಚಿನ ಓಟ' ಮೊನ್ನೆತಾನೆ ಆರಂಭವಾಯಿತು. ಸೈನೆಡ್ ಖ್ಯಾತಿಯ ರಮೇಶ್ ಇದರ ನಿರ್ದೇಶಕರು ಮತ್ತು ಸಾ.ರಾ. ಗೋವಿಂದು ಚಿತ್ರದ ನಿರ್ಮಾಪಕರು ಎಂಬುದು ನಿಮಗೆ ಗೊತ್ತೇ ಇದೆ.

ಯಾರಿಗೂ ಗೊತ್ತಿಲ್ಲದ ವಿಷಯವೆಂದರೆ ಈ ಚಿತ್ರವನ್ನು ರಮೇಶ್ ಗುರುಕಾಣಿಕೆಯ ರೂಪದಲ್ಲಿ ಸಾ.ರಾ. ಗೋವಿಂದುಗೆ ಮಾಡುತ್ತಿದ್ದಾರೆ. ಕನ್ನಡ ಹೋರಾಟಗಾರರಾಗಿದ್ದ ರಮೇಶ್ ಚಿತ್ರರಂಗಕ್ಕೆ ಬಂದಿದ್ದೇ ಗೋವಿಂದು ನಿರ್ಮಾಣದ ಮೊದಲ ಚಿತ್ರ 'ಬಳು ಸುತ್ತಿನ ಕೋಟೆ'ಯ ಮೂಲಕ. ಆಗ ಈ ಹುಡುಗನ ಉತ್ಸಾಹವನ್ನು ನೋಡಿ ನಿರ್ದೇಶನ ಕಲಿಯಲು ಪೂನಾ ಫಿಲ್ಮ್ ಇನ್‌ಸ್ಟಿಟ್ಯೂಟ್‌ಗೆ ಕಳುಹಿಸಿಕೊಟ್ಟು, ಎಲ್ಲ ಖರ್ಚು ವೆಚ್ಚವನ್ನು ನೋಡಿಕೊಂಡಿದ್ದು ಸಾ. ರಾ. ಗೋವಿಂದು. ಹೀಗಾಗಿ ಎರಡು ಚಿತ್ರಗಳ ನಂತರ ರಮೇಶ್ ಈಗ ಗೋವಿಂದುಗೆ ಗುರುಕಾಣಿಕೆ ರೂಪದಲ್ಲಿ ಈ ಚಿತ್ರ ಮಾಡಿಕೊಡುತ್ತಿದ್ದಾರೆ. ವಚನಭ್ರಷ್ಟರೇ ತುಂಬಿರುವ ಈ ಗಾಂಧಿನಗರದಲ್ಲಿ ರಮೇಶ್ ವಿಭಿನ್ನರಾಗಿ ಕಾಣಿಸುತ್ತಾರಲ್ಲವೆ?

'ಓಂ' ನಮಃ



ಮೊನ್ನೆ ಒಬ್ಬ ಹುಡುಗ ಪತ್ರಿಕಾಗೋಷ್ಠಿ ಕರೆದು ತನ್ನ ಪರಿಚಯ ಮಾಡಿಕೊಂಡ. ಆತನ ನಿಜನಾಮಧೇಯ ಅರವಿಂದ್. ಆದರೆ ಕನ್ನಡ ಚಿತ್ರರಂಗದಲ್ಲಿ ಈಗಾಗಲೇ ಮೂರ್‍ನಾಲ್ಕು ಅರವಿಂದ್‌ಗಳು ಇರುವುದರಿಂದ ಆತ ತನ್ನ ಹೆಸರನ್ನು ಓಂ ಎಂದು ಬದಲಾಯಿಸಿಕೊಂಡಿದ್ದಾನೆ. ಈತನ ತಂದೆ ರೇಸ್‌ಕೋರ್ಸ್‌ನಲ್ಲಿ ಕುದುರೆ ಓಡಿಸುವ ಜಾಕಿ. ಈತನ ಅಣ್ಣ ಕೂಡಾ ಜಾಕಿಯಂತೆ. ತಂದೆ ಮತ್ತು ಅಣ್ಣನ ಥರ ಈತನೂ ಕೂಡಾ ಚೆನ್ನಾಗಿ ಕುದುರೆ ಓಡಿಸಬಲ್ಲ. ಆಗ ಆಕಸ್ಮಿಕವಾಗಿ ಆತನಿಗೆ ನಾಯಕನಾಗಿ ನಟಿಸುವ ಅವಕಾಶ ಸಿಕ್ಕಿತ್ತು, ಚಿತ್ರದ ಹೆಸರು 'ದಿನ್ ದಿನಾ ದಿನ್'. ಈ ಚಿತ್ರದಲ್ಲಿ ಆತನದ್ದು ರಾಷ್ಟ್ರೀಯ ಈಜುಗಾರನ ಪಾತ್ರ. ಆದರೆ ಈತನಿಗೆ ಈಜು ಗೊತ್ತಿರಲಿಲ್ಲವಂತೆ. ಹೀಗಾಗಿ ಬೆಳಬೆಳಿಗ್ಗೆ ರೇಸ್‌ಕೋರ್ಸ್‌ಗೆ ಹೋಗುವ ಬದಲು ಬಸವನ ಗುಡಿ ಈಜುಕೊಳಕ್ಕೆ ಹೋಗಿ ಒಂದೂವರೆ ತಿಂಗಳ ಕಾಲ ಸತತವಾಗಿ ಅಭ್ಯಾಸ ಮಾಡಿ ಈಜುವುದನ್ನು ಕಲಿತನಂತೆ. ನೀರಿನಲ್ಲಿ ಈಜುವುದನ್ನು ಇಷ್ಟು ಬೇಗ ಕಲಿತ ಈ ಹುಡುಗ ಗಾಂಧಿನಗರದಲ್ಲಿ ಅದು ಹೇಗೆ ಈಜುತ್ತಾನೋ ನೋಡಬೇಕು.



ಮಜಾ ಇದೆ, ಮಸಾಲೆ?


ಮೊನ್ನೆ ರವಿ ಬೆಳಗೆರೆ ನಿರ್ದೇಶನದ 'ಮುಖ್ಯಮಂತ್ರಿ ಐ ಲವ್ ಯೂ' ಎಂಬ ಚಿತ್ರ ಪ್ರಾರಂಭವಾಯಿತು. 'ರಾಧಿಕೆ ನಿನ್ನ ಸರಸವಿದೇನೆ' ಎಂಬ ಕಿಕ್ಕರ್ ಲೈನ್ ಹೊಂದಿರುವ ಇದರ ಮಹೂರ್ತದ ಆಹ್ವಾನ ಪತ್ರಿಕೆ ನೋಡಿದರೆ ಇದು ಸಂಪೂರ್ಣವಾಗಿ ಕಮರ್ಷಿಯಲ್ ಚಿತ್ರವಾಗಿರುತ್ತದೆ ಎಂಬುದು ಸ್ಪಷ್ಟವಾಗುತ್ತದೆ.

ಈಗಾಗಲೇ ಎಲ್ಲರಿಗೆ ಗೊತ್ತಿರುವಂತೆ ಈ ಚಿತ್ರದಲ್ಲಿನ ನಾಯಕನ (ವಿಜಯ್) ಹೆಸರು ಕುಮಾರ. ನಾಯಕಿಯ (ಭಾವನಾ) ಹೆಸರು ರಾಧಾ ಎಂದಾಗಿರುತ್ತದೆ. ಆದರೆ ಮಜಾ ಕೊಡುವ ಸಂಗತಿಗಳು ಯಾವುದೆಂದರೆ ಕುಮಾರನ ಹೆಂಡತಿಯ ಪಾತ್ರಕ್ಕೆ ಸುನೀತ (ಅನೀತ) ಎಂದು, ತಂದೆಯ ಪಾತ್ರಕ್ಕೆ ತಂತ್ರೇಗೌಡ (ದೇವೇ ಗೌಡ) ಎಂದು, ಸಹೋದರನ ಪಾತ್ರಕ್ಕೆ ದ್ಯಾವಣ್ಣ (ರೇವಣ್ಣ), ಆತನ ಮಡದಿಯ ಪಾತ್ರಕ್ಕೆ ಶಿವಾನಿ (ಭವಾನಿ) ಎಂದು ಕರೆದಿರುವುದು. ಅಷ್ಟೇ ಅಲ್ಲ, ಕೈಯಲ್ಲಿ ವಿಸ್ಕಿ ಗ್ಲಾಸ್ ಹಿಡಿದಿರುವ ರೇಣುಕಯ್ಯ (ನರ್ಸ್ ಜಯಲಕ್ಷ್ಮಿ ಕುಖ್ಯಾತಿಯ ರೇಣುಕಾಚಾರ್ಯ) ಮತ್ತು ರಾಜಕಾರಣಿಯ ಪಾತ್ರದಲ್ಲಿ ಚೆಲುವಯ್ಯ (ದೇವೇ ಗೌಡರ ಕುಟುಂಬಕ್ಕೇ ಸೆಡ್ಡು ಹೊಡೆಯಲು ಸಜ್ಜಾಗಿದ್ದ ಚೆಲುವರಾಯಸ್ವಾಮಿ) ಫೋಟೋಗಳೂ ಆಹ್ವಾನ ಪತ್ರಿಕೆಯಲ್ಲಿ ಮುದ್ರಣಗೊಂಡಿವೆ.

ಅಂದರೆ ಚಿತ್ರದಲ್ಲಿ ಸಾಕಷ್ಟು ಮಜಾ ನೀಡುವ ಪಾತ್ರಗಳಿವೆ ಎಂದಾಯಿತು. ಆದರೆ ಮಸಾಲೆ ಕೂಡ ಇರುತ್ತಾ ಎಂಬುದನ್ನು ಕಾದುನೋಡಬೇಕು.

ಟಿವಿ ಸರದಾರರು





ಎರಡು ಮೆಗಾ ಧಾರಾವಾಹಿ ನಿರ್ದೇಶಕರುಗಳ ಬಗ್ಗೆ ಚಿಕ್ಕ ಟಿಪ್ಪಣಿ ಇಲ್ಲಿದೆ.

'ಏಕೆ ಹೀಗೆ ನಮ್ಮ ನಡುವೆ' ಎಂಬ ಮೆಗಾ ಧಾರಾವಾಹಿ ಈಗ ಜೀ ಟಿ.ವಿಯಲ್ಲಿ ಬರುತ್ತಿದೆ. ಇದರ ನಿರ್ದೇಶಕ ರಮೇಶ್ ಬೇಗಾರ್. ಈ ತರುಣ ಗಿರೀಶ್ ಕಾಸರವಳ್ಳಿಯವರ ಜೊತೆ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಅಷ್ಟೇ ಅಲ್ಲ ತೇಜಸ್ವಿಯವರ ಅನೇಕ ಕತೆಗಳನ್ನು ಟೆಲಿ ಫಿಲ್ಮ್ ಮಾಡಿ ಗಮನ ಸೆಳೆದಿದ್ದಾರೆ. ಈತ ಕಲಾತ್ಮಕ ಮತ್ತು ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡ ಕಾರಣ ಈತನ ನಿರ್ದೇಶನದ 'ಏಕೆ ಹೀಗೆ ನಮ್ಮ ನಡುವೆ' ಉಳಿದ ಧಾರಾವಾಹಿಗಳಿಗಿಂತ ವಿಭಿನ್ನವಾಗಿದೆ.

ಮತ್ತೊಬ್ಬ ನಿರ್ದೇಶಕ ರವಿ ಗರಣಿ. ಈತ ಈಗಾಗಲೇ 'ಕಾವ್ಯಾಂಜಲಿ' ಎಂಬ ಮೆಗಾ ಧಾರಾವಾಹಿ ಮುಖಾಂತರ ಜನಪ್ರಿಯತೆ ಪಡೆದಿದ್ದಾರೆ. ಆದರೆ ಅದರ ಯಶಸ್ಸಿನ ಹ್ಯಾಂಗೋವರ್‌ನಲ್ಲೇ 'ಶುಭಂ' ಎಂಬ ಸಿನಿಮಾ ಮಾಡಿದರಾದರೂ ಅದು ಬಾಕ್ಸ್ ಆಫೀಸಿನಲ್ಲಿ ಅಮೋಘವಾಗಿ ನೆಲಕಚ್ಚಿತ್ತು, ಈಗ ತಮ್ಮ ಮೂಲ ಕಾರ್ಯಸ್ಥಾನವಾದ ಕಿರುತೆರೆಗೆ ಹಿಂದಿರುಗಿರುವ ರವಿ ಗರಣಿ 'ಕಸ್ತೂರಿ' ಎಂಬ ಧಾರಾವಾಹಿ ಮಾಡಿ ಯಶಸ್ವಿಯಾಗಿದ್ದಾರೆ.



'ಒರಟ' ಓಕೆ

ಹೊಸ ಅಲೆಯಲ್ಲಿ ಹೊಸಬರೇ ಕೊಚ್ಚಿಹೋಗುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ 'ಒರಟ' ಪ್ರೇಕ್ಷಕರಿಂದ ಓಕೆ ಎನಿಸಿಕೊಂಡಿದ್ದಾನೆ.

ಸಂಪೂರ್ಣ ಹೊಸಬರ ತಂಡದಿಂದ ಎದ್ದು ಬಂದಿರುವ 'ಒರಟ'ನನ್ನು ನೋಡಿದರೆ ಅನುಭವೀ ತಂಡದಿಂದ ಬಂದವನಂತೆ ಕಾಣುತ್ತಾನೆ.

ಚಿತ್ರದ ಹಾಡುಗಳು ಈಗಾಗಲೇ ಕೇಳುಗರ ಮೆಚ್ಚುಗೆಗೆ ಪಾತ್ರವಾಗಿವೆ. ನಿರ್ದೇಶಕ ಶ್ರೀ ಮೊದಲ ಪ್ರಯತ್ನದಲ್ಲಿ ಸೈ ಎನಿಸಿಕೊಂಡಿದ್ದಾರೆ. ಸಂಭಾಷಣೆ ಬರೆದಿರುವ ಅನಿಲ್‌ಕುಮಾರ್ ಸಹ ಇಲ್ಲಿ ಗಟ್ಟಿಯಾಗಿ ನಿಲ್ಲುವ ಭರವಸೆ ಮೂಡಿಸಿದ್ದಾರೆ. ಇನ್ನು ಸಂಗೀತ ನಿರ್ದೇಶಕ ಜಿ.ಆರ್. ಶಂಕರ್ ಮೊದಲ ಚಿತ್ರದಲ್ಲೇ ಪಳಗಿದವರಂತೆ ಕೆಲಸ ತೋರಿಸಿದ್ದಾರೆ. ಹಿನ್ನೆಲೆ ಸಂಗೀತ ಮತ್ತು ಕ್ಯಾಮೆರಾ ವರ್ಕ್ ಚಿತ್ರದ ಹೈಲೇಟ್. ನಾಯಕ ಪ್ರಶಾಂತ್‌ನ ಡೈಲಾಗ್ ಡೆಲಿವರಿ ಚೆನ್ನಾಗಿದ್ದರೂ ಯಾಕೋ ಮುಖ ಮಾತ್ರ ಸ್ವಲ್ಪ ಡಲ್ಲು ಡಲ್ಲು ಅನಿಸುತ್ತೆ. ಆದರೂ ಮೆಂಟಲ್, ಬಂಡಲ್‌ಗಳಿಗಿಂತ ವಾಸಿ.

ನಿರ್ದೇಶಕ ಶ್ರೀ ನಿರೂಪಣಾ ವೇಗಕ್ಕೆ ಕೊಟ್ಟ ಮಹತ್ವವನ್ನು ಕತೆಗೆ ಕೊಡದಿರುವುದು ದುರಂತ. ಒಟ್ಟಿನಲ್ಲಿ ಒಮ್ಮೆ ನೋಡಿಬರಲಂತೂ ಮೋಸವಿಲ್ಲ.

ತವರೂರಿನಲ್ಲಿ ನಾಣಿಯ ಮತ್ತೊಂದು ನಾಟಕ



ಎಸ್. ನಾರಾಯಣ್ ಮತ್ತೊಮ್ಮೆ ಸುದ್ದಿಯಲ್ಲಿದ್ದಾರೆ. ಅವರ ಮಾಲೀಕತ್ವದ ಚೆಲುವಾಂಬಿಕ ಎಂಬ ಸಿನಿಮಾ ಥಿಯೇಟರ್ ಮೊನ್ನೆ ಅವರ ಹುಟ್ಟೂರು ಭದ್ರಾವತಿಯಲ್ಲಿ ಉದ್ಘಾಟನೆಯಾಗಿದೆ.

ಹಲವಾರು ವರ್ಷಗಳ ಹಿಂದೆ ಒಂದು ಹೊತ್ತಿನ ಊಟಕ್ಕಾಗಿ ಉದ್ಯೋಗವನ್ನು ಅರಸುತ್ತಾ ಬೆಂಗಳೂರಿಗೆ ಓಡಿ ಬಂದ ನಾರಾಯಣ್ ಈಗ ಮತ್ತೆ ತನ್ನ ಊರಿಗೆ ಒಬ್ಬ ಥಿಯೇಟರ್ ಮಾಲೀಕನಾಗಿ ಮರಳುತ್ತಿರುವುದು ನಿಜಕ್ಕೂ ಮೆಚ್ಚಬೇಕಾದದ್ದು.

ಆದರೆ ಹೀಗೆ ಹುಟ್ಟೂರಿಗೆ ಮರಳಿದ ನಾಣಿ ಅಪ್ಪಿತಪ್ಪಿಯಾದರೂ ತನ್ನ ಹೆತ್ತಮ್ಮನನ್ನು ನೋಡಿದರಾ? ಥಿಯೇಟರ್ ಮಾಲೀಕನಾದ ನಾಣಿಯ ತಾಯಿ ಇವತ್ತಿಗೂ ಬೇರೆಯವರ ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದು ಆಕೆಯ ಕೈಯಿಂದ ಕೈತುತ್ತು ಹಾಕಿಸಿಕೊಂಡರಾ? 'ತಾಯಿಯ ಮಡಿಲ'ಲ್ಲಿ ತಲೆ ಇಟ್ಟು ಆಶೀರ್ವಾದ ಪಡೆದರಾ?

ಇದೆಲ್ಲ ಇಲ್ಲದಿರುವ ಯಶಸ್ಸೂ ಒಂದು ಯಶಸ್ಸಾ?



'ಶಿವಾಜಿ'ಯನ್ನೇ ಮೀರಿಸಲಿದ್ದಾನೆ

ಸುಲ್ತಾನ್

ಸೂಪರ್‌ಸ್ಟಾರ್ ರಜನಿಕಾಂತ್‌ಗಾಗಿ ಅವರ ಮಗಳು ಸೌಂದರ್ಯ ನಿರ್ದೇಶಿಸುತ್ತಿರುವ 'ಸುಲ್ತಾನ್ ದಿ ವಾರಿಯರ್' ಎಂಬ ಚಿತ್ರ ಇತ್ತೀಚೆಗೆ ಬಿಡುಗಡೆಯಾಗಿದ್ದ 'ಶಿವಾಜಿ'ಗಿಂತ ನೂರುಪಟ್ಟು ಅದ್ದೂರಿಯಾಗಿ ನಿರ್ಮಾಣವಾಗುತ್ತಿದೆಯಂತೆ. ಅದ್ದೂರಿತನ, ಶ್ರೀಮಂತಿಕೆ ಎಲ್ಲದರಲ್ಲೂ 'ಸುಲ್ತಾನ್' 'ಶಿವಾಜಿ'ಯನ್ನು ಮೀರಿಸುತ್ತದಂತೆ.

ಅಂದಹಾಗೆ, ಈ ಚಿತ್ರದ ಕತೆಯ ಮೂಲ ಎಳೆ ಸ್ವತಃ ರಜನೀಕಾಂತರದ್ದಂತೆ. ಸೌಂದರ್ಯ ಅದನ್ನು ವಿಸ್ತರಿಸಿ ಸಿನಿಮಾ ರೂಪಕ್ಕೆ ತರುತ್ತಿದ್ದಾರೆ.

ದಕ್ಷಿಣ ಭಾರತದಲ್ಲಿ ಇದುವರೆಗೂ ಇಷ್ಟು ಅದ್ದೂರಿ ಅನಿಮೇಶನ್‌ನ ಚಿತ್ರ ಬಂದಿಲ್ಲವಂತೆ. ರಜನೀಕಾಂತ್‌ರ ಚಿತ್ರ ಜೀವನದಲ್ಲಿ ಇದೊಂದು ಮೈಲುಗಲ್ಲಾಗಲಿದೆ ಎಂಬುದು ಸೌಂದರ್ಯಳ ವಾದ.

ಪ್ರೇಂನ 'ಹೊಂಗನಸು'



ರಾಜಕಾರಣಕ್ಕೆ ಕೊಬ್ರಿ ಎಂಟ್ರಿ?

ಮೊನ್ನತಾನೆ ತುಮಕೂರಿನಲ್ಲಿ ನಿರ್ಮಾಪಕ ಕೊಬ್ರಿ ಮಂಜು ಅಭಿಮಾನಿ ಸಂಘ ಎಂಬ ಸಂಘಟನೆ ಜೀವ ಪಡೆದುಕೊಂಡಿತು. ಇದರ ಉದ್ಘಾಟನೆ ಸಮಾರಂಭಕ್ಕೆ ಸುಮಾರು ಇಪ್ಪತ್ತು ಸಾವಿರ ಜನ ಬಂದಿದ್ದರಂತೆ.

ಅದೆಷ್ಟು ಸತ್ಯವೋ ಗೊತ್ತಿಲ್ಲ, ಆದರೆ ಇದನ್ನು ನೋಡಿದರೆ ಕೊಬ್ರಿ ಮಂಜು ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸುವುದು ಗ್ಯಾರಂಟಿಯಾದಂತಿದೆ. ಇಲ್ಲಿ ಗಮನಿಸಬಹುದಾದ ಇನ್ನೊಂದು ವಿಷಯವೆಂದರೆ ನವರಸನಾಯಕ ಜಗ್ಗೇಶ್ ಕೂಡಾ ಈಗಾಗಲೇ ತುಮಕೂರಿನ ತುರುವೇಕೆರೆಯಿಂದ ಚುನಾವಣೆಯಲ್ಲಿ ಸ್ಪರ್ಧಿಸಿ ಸೋತು, ಮರಳಿಯತ್ನವ ಮಾಡುವ ಹಂಬಲದಲ್ಲಿದ್ದಾರೆ.

ಹಾಗೇನಾದರೂ ಮಂಜು ಚುನಾವಣೆಗೆ ಸ್ಪರ್ಧಿಸಿದರೆ ಯಾವ ಕ್ಷೇತ್ರದಿಂದ ಎಂಬುದು ಇನ್ನೂ ತಿಳಿದಿಲ್ಲ. ಅಕಸ್ಮಾತ್ ಇಬ್ಬರೂ ಒಂದೇ ಕ್ಷೇತ್ರದಲ್ಲಿ ಮುಖಾಮುಖಿಯಾದರೆ ಏನು ಕತೆ? ಎಂದು ಕಾದು ಕುಳಿತಿದೆ ಗಾಂಧಿನಗರ.



ಚಳಿಯಲ್ಲಿ ಬಿಡುಗಡೆಯ ಸಮರ

ಡಿಸೆಂಬರ್ ತಿಂಗಳಲ್ಲಿ ಗಾಂಧಿನಗರದಲ್ಲಿ ದೊಡ್ಡ 'ಬಿಡುಗಡೆಯ ಸಮರ' ನಡೆಯುವ ಎಲ್ಲ ಸಾಧ್ಯತೆಗಳು ಕಾಣಿಸುತ್ತಿವೆ. ಕನಿಷ್ಠವೆಂದರೂ ಒಂದು ಡಜನ್ ಚಿತ್ರ ಬಿಡುಗಡೆಯಾಗಲು ಸಾಲಾಗಿ ಕಾದು ಕುಳಿತಿವೆ.



ಮುಖ್ಯವಾಗಿ ದೊಡ್ಡ ದೊಡ್ಡ ನಿರೀಕ್ಷೆ ಹುಟ್ಟಿಸಿರುವ ಚಿತ್ರಗಳೆಲ್ಲ ಒಟ್ಟೊಟ್ಟಿಗೆ ಬಿಡುಗಡೆಯಾಗುತ್ತಿರುವುದರಿಂದ ಖಂಡಿತವಾಗಿಯೂ ಅದು ಉದ್ಯಮದ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ.

ಉದಾಹರಣೆಗೆ ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ' ಡಿಸೆಂಬರ್‌ನಲ್ಲಿ ತೆರೆಕಾಣಲಿದೆ. ಮುಂಗಾರು ಮಳೆ ಚಿತ್ರ ಡಿಸೆಂಬರ್‌ನಲ್ಲೇ ಬಿಡುಗಡೆಯಾಗಿದ್ದರಿಂದ ಈ ಚಿತ್ರವನ್ನು ಡಿಸೆಂಬರ್‌ನಲ್ಲೇ ರಿಲೀಜ್ ಮಾಡಬೇಕು ಎಂಬ ಹಠ ಭಟ್ಟರಿಗೆ.

ಇದೇ ರೀತಿ 'ದುನಿಯಾ' ಸೂರಿ ಕೂಡ 'ಇಂತಿ ನಿನ್ನ ಪ್ರೀತಿಯ' ಚಿತ್ರವನ್ನು ಡಿಸೆಂಬರ್ ತಿಂಗಳಲ್ಲೇ ಪ್ರೇಕ್ಷಕರ ಮುಂದಿಡಲು ನಿರ್ಧರಿಸಿದ್ದಾರೆ. ಭಟ್ಟರ 'ಗಾಳಿಪಟ' ಬಿಡುಗಡೆಯಾದ ಎರಡೇ ವಾರಕ್ಕೆ ಸೂರಿ ತನ್ನ ಚಿತ್ರ ಬಿಡುಗಡೆಗೊಳಿಸಬೇಕೆಂದು ನಿರ್ಧರಿಸಿದ್ದಾರೆ. ಇದಕ್ಕೊಂದು ಸೆಂಟಿಮೆಂಟ್ ಕಾರಣವಿದೆ. ಕಳೆದ ವರ್ಷ 'ಮುಂಗಾರು ಮಳೆ' ಬಿಡುಗಡೆಯಾದ ನಾಲ್ಕೇ ವಾರಕ್ಕೆ ಸೂರಿ 'ದುನಿಯಾ' ಚಿತ್ರವನ್ನು ಬಿಡುಗಡೆಗೊಳಿಸಿದ್ದರು.




ಇದೇ ಸಮಯದಲ್ಲಿ ಸುದೀಪ್ ಅಭಿನಯದ 'ಗೂಳಿ' ಚಿತ್ರವನ್ನು ಬಿಡುಗಡೆಮಾಡಲು ನಿರ್ಮಾಪಕ ರಾಮು ಎಲ್ಲ ಸಿದ್ಧತೆ ನಡೆಸಿದ್ದಾರೆ. ಶಿವರಾಜ್‌ಕುಮಾರ್ ಅಭಿನಯದ ಅದ್ದೂರಿ ಚಿತ್ರವಾದ 'ಸತ್ಯ ಇನ್ ಲವ್' ಕೂಡಾ ಡಿಸೆಂಬರ್‌ನಲ್ಲೇ ತೆರೆಕಾಣಲಿದೆ. ಜೊತೆಗೆ ಉಪ್ಪಿ-ಶಿವಣ್ಣ ನಟಿಸಿರುವ 'ಲವ-ಕುಶ' ಕೂಡಾ ಡಿಸೆಂಬರ್‌ನಲ್ಲೇ ಆಗಮಿಸುತ್ತಿದೆ.



ನವೆಂಬರ್‌ನಲ್ಲೇ ತೆರೆಕಾಣಬೇಕಾಗಿದ್ದ ವಿಜಯಲಕ್ಷ್ಮಿಸಿಂಗ್ ನಿರ್ದೇಶನದ 'ಈ ಬಂಧನ' ಕೂಡ ಡಿಸೆಂಬರ್‌ನಲ್ಲೇ ಲಗ್ಗೆಹಾಕಲಿದೆ. ಇವೆಲ್ಲದರ ಮಧ್ಯೆ ಕಳೆದ ಒಂದೂವರೆ ವರ್ಷಗಳಿಂದ ನಿರಂತರವಾಗಿ ಸಾಗುತ್ತಾ ಬಂದಿರುವ ಪ್ರೇಮ್ ನಟಿಸಿ, ನಿರ್ದೇಶಿಸಿರುವ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರವನ್ನೂ ಡಿಸೆಂಬರ್ ತಿಂಗಲ್ಲೇ ಬಿಡುಗಡೆ ಮಾಡಬೇಕು ಎಂದು ಡಿಮ್ಯಾಂಡ್ ಮಾಡುತ್ತಿದ್ದಾರೆ.

ಇಷ್ಟೆಲ್ಲ ಬಹು ನಿರೀಕ್ಷೆಯ, ಬಹು ತಾರಾಗಣದ ಚಿತ್ರಗಳು ಒಂದೇ ತಿಂಗಳಲ್ಲಿ ಬಿಡುಗಡೆಯಾದರೆ ಪ್ರೇಕ್ಷಕ ಯಾವ ಚಿತ್ರವನ್ನು ನೋಡಿಯಾನು? ಇಷ್ಟು ದೊಡ್ಡ ಸಂಖ್ಯೆಯಲ್ಲಿ ದೊಡ್ಡವರ ಚಿತ್ರಗಳು ತೆರೆಕಾಣುವುದರಿಂದ ಒಂದೆರಡು ಸಿನಿಮಾಗಳು ಮಾತ್ರ ಕಚ್ಚಿಕೊಂಡು ಉಳಿದವು ನೆಲಕಚ್ಚುವುದು ಗ್ಯಾರಂಟಿ.



ಇಂತಹ ಸಮಸ್ಯೆಗಳನ್ನು ಪರಿಹರಿಸಲೆಂದೇ ಇರುವ ಛೇಂಬರ್‌ನ ಪದಾಧಿಕಾರಿಗಳು ಮಾತ್ರ ತಲೆಕೆಡಿಸಿಕೊಳ್ಳದೇ ತಣ್ಣಗೆ ನಿದ್ರಿಸುತ್ತಿರುವಂತಿದೆ.

ಹೀಗಾಗಿ ಡಿಸೆಂಬರ್‌ನ ಚುಮು ಚುಮು ಚಳಿಯಲ್ಲೂ ಕನ್ನಡದ ನಿರ್ಮಾಪಕರ ಮೈ ಕೈ ಬಿಸಿಯಾಗಿ ಬೆವರುವುದು ಹಂಡ್ರೆಡ್ ಪರ್ಸೆಂಟ್ ಗ್ಯಾರೆಂಟಿ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44